ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ_೫೩

ಯುದ್ಧಕಾಲದ ಆರ್ಥಿಕ ಸಮಸ್ಯೆಗಳು

ಎಸ್. ಎಲ್. ಎನ್. ಸಿಂಹ, ಎಂ.ಎ.

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೬

ಬೆಲೆ : ೩ ಆಣೆ

ಮೈಸೂರು ವಿಶ್ವವಿದ್ಯಾನಿಲಯದ
ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು-ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ-ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಎ. ಎನ್. ಕೃಷ್ಣಮೂರ್ತಿ,
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಡಾ॥ ಎನ್.ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕ ದೃಷ್ಟಿ-ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ.ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್ ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಡಾ॥ ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಇಡಿ. (ಲೀಡ್ಸ್)
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.,ಒ

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೪೩

ಯುದ್ಧಕಾಲದ ಆರ್ಥಿಕ ಸಮಸ್ಯೆಗಳು

ಎಸ್. ಎಲ್. ಎನ್. ಸಿಂಹ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೪೨

ಮೊದಲನೆಯ ಮುದ್ರಣ ೨೦೦೨ ಪ್ರತಿಗಳು
೪_೯_೧೯೪೪

ಎರಡನೆಯ ಮುದ್ರಣ ೩೦೦೦ ಪ್ರತಿಗಳು
೨೬_೭_೧೯೫೬

ಬೆಲೆ: ಸಾದಾ ೨ ಆಣೆ ಉತ್ತಮ ೪ ಆಣೆ

ಪ್ರಕಾಶಕರು
ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಅವರು.

ಮುದ್ರಕರು:
ಜಿ. ಎಚ್. ರಾಮರಾವ್, ಬಿ. ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಮುನ್ನುಡಿ

ಈ ಪ್ರಚಾರಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚುವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಲೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು; ಉಳಿದವನ್ನು ಸಾಮಾಜಿಕಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರಮಾಡಿಕೊಂಡಿದ್ದಾರೆ: ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು; ಇದು ಯುಕ್ತ

ವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವುದನ್ನು ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದುಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು,
ತಾ॥ ೨೪–೪–೧೯೪೨.

ಇ. ಜಿ. ಮೆಕಾಲ್ಪೈನ್
ವೈಸ್-ಛಾನ್ಸೆಲರ್

ಪೀಠಿಕೆ

ಕಳೆದ ಬೇಸಿಗೆಯಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು ಕುಣಿಗಲಿನಲ್ಲಿ ಏರ್ಪಡಿಸಿದ್ದ ವಿಶೇಷೋಪನ್ಯಾಸ ಮಾಲೆಯಲ್ಲಿ ನಾನು ಮಾಡಿದ ಮೂರು ಉಪನ್ಯಾಸಗಳ ಸಾರಾಂಶವೇ ಈ ಪುಸ್ತಕ ವಸ್ತು. ಈ ಉಪನ್ಯಾಸಗಳನ್ನು ಮಾಡುವುದಕ್ಕೆ ಮೊದಲೂ, ಅವುಗಳನ್ನು ಪುಸ್ತಕರೂಪಕ್ಕೆ ತರುವಾಗಲೂ ನನ್ನನ್ನು ಪ್ರೋತ್ಸಾಹಿಸಿ ಮತ್ತು ನನ್ನೊಡನೆ ಸಹಕರಿಸುದದಕ್ಕಾಗಿ ನನ್ನ ಹಿರಿಯ ಮಿತ್ರರಾದ ಶ್ರೀ ಎಸ್. ಮಂಜನಾಥ್, ಎಂ.ಎ. ಅವರಿಗೆ ನಾನು ಚಿರಋಣಿ. ಈ ಪುಸ್ತಕದ ಹಸ್ತಪ್ರತಿಯನ್ನು ಅಮೂಲಾಗ್ರವಾಗಿ ಓದಿ ಅನೇಕ ಸಲಹೆಗಳನ್ನು ಕೊಟ್ಟ ಶ್ರೀ ಜಿ. ಹನುಮಂತರಾವ್, ಎಂ.ಎ. ಅವರಿಗೆ ನನ್ನ ಅನೇಕ ವಂದನೆಗಳು.

ತುಮಕೂರು
೧೭—೮—೪೪

ಎಸ್. ಎಲ್. ಎನ್. ಸಿಂಹ.

ವಿಷಯಾನುಕ್ರಮಣಿಕೆ

ಯುದ್ಧಕಾಲದ ಆರ್ಥಿಕ ಸಮಸ್ಯೆಗಳು

೧. ಯುದ್ಧ ಮತ್ತು ಆರ್ಥಿಕ ವ್ಯವಸ್ಥೆ

ಈಗಿನ ಕಾಲದಲ್ಲಿ ಯುದ್ಧ ಒಂದು ದೊಡ್ಡ ಕೈಗಾರಿಕೆ ಸಮಸ್ಯೆಯಾಗಿದೆ. ಹಿಂದೆ ಯುದ್ಧ ನಡೆಯುತ್ತಿದ್ದುದು ಬಹುಶಃ ಒಂದು ದೇಶದವರಿಗೂ ಮತ್ತೊಂದು ದೇಶದವರಿಗೂ. ಬಹು ದೊಡ್ಡ ಸೈನ್ಯವೆಂದರೆ ಅದರಲ್ಲಿ ಇಪ್ಪತ್ತು ಮೂವತ್ತು ಸಾವಿರ ಯೋಧರಿರುತ್ತಿದ್ದರು. ಹಿಂದಿನ ಯುದ್ಧಕ್ಕೂ ಇಂದಿನ ಯುದ್ಧಕ್ಕೂ ಅಜಗಜಾಂತರ. ಇಂದಿನ ಯದ್ಧದಲ್ಲಿ ಐದು ಖಂಡದವರೂ ಭಾಗವಹಿಸಿದ್ದಾರೆ. ಇದರಲ್ಲಿ ತೊಡಗಿರುವ ಯೋಧರ ಸಂಖ್ಯೆ ಲಕ್ಷಾಂತರಗಟ್ಟಲೆ. ಭೂಮಿ ಸಮುದ್ರ ಆಕಾಶ ಎಲ್ಲವೂ ಯುದ್ಧಕ್ಷೇತ್ರಗಳಾಗಿವೆ; ಯುದ್ಧಸಲಕರಣೆ ಗಳ ತಯಾರಿಕೆಯೂ ಅಗಾಧವಾಗಿದೆ; ಕೋಟ್ಯಂತರ ಮದ್ದು ಗುಂಡುಗಳನ್ನೂ ಲಕ್ಷಾಂತರ ಯಾನವಾಹನಗಳನ್ನೂ ಸಾವಿರಾರು ವಿಮಾನಗಳನ್ನೂ ಟ್ಯಾಂಕುಗಳನ್ನೂ ಸಜ್ಜುಗೊಳಿಸಬೇಕಾಗಿದೆ. ನಾಗರಿಕಜೀವನಕ್ಕೆ ಬೇಕಾದ ಪದಾರ್ಥಗಳನ್ನು ತಯಾರು ಮಾಡುತ್ತಿದ್ದ ಕೈಗಾರಿಕೆಯ ಸಂಸ್ಥೆಗಳು ಈಗ ಯುದ್ಧಸಲಕರಣೆ ಗಳಿಗಾಗಿ ಶಾಂತಿಕಾಲದಲ್ಲಿ ಕೆಲಸಮಾಡುವುದಕ್ಕಿಂತ ಎರಡ ರಷ್ಟು ಮೂರರಷ್ಟು ಶ್ರಮಿಸಬೇಕಾಗಿದೆ. ಏಕೆಂದರೆ ಈ ಯುದ್ಧ ದಲ್ಲಿ ಯಾರು ಹೆಚ್ಚು ಯುದ್ಧಯಂತ್ರಗಳನ್ನೂ ಯಾನವಾಹನ ಗಳನ್ನೂ ಪಡೆದಿರುತ್ತಾರೋ, ಯಾರು ಇವುಗಳ ತಯಾರಿಕೆ ಯಲ್ಲಿ ಮುಂದುವರಿಯುವರೋ ಅವರಿಗೇ ಜಯ. 1914-18ರ ಮಹಾಯುದ್ಧದಲ್ಲಿ ಯುದ್ಧರಂಗಕ್ಕೆ ಹೋಗಿ ಕಾದಾಡಿದ ಪ್ರತಿ

ಯೊಬ್ಬ ಮನುಷ್ಯನ ಹಿಂದೆ ಆಯುಧಗಳನ್ನೂ ಮದ್ದುಗುಂಡುಗಳನ್ನೂ ತಯಾರಿಸಲು ಇಬ್ಬರ ನೆರವು ಬೇಕಾಗಿತ್ತು. ಈಗ ನಡೆಯುತ್ತಿರುವ ಯುದ್ಧದಲ್ಲಿ ಕಡೆಯಪಕ್ಷ ಐದುಮಂದಿಯ ನೆರವಾದರೂ ಬೇಕಾಗಿದೆ. ಆದುದರಿಂದ ಜಯಪ್ರದವಾಗುವಂತೆ ಈ ಯುದ್ಧವನ್ನು ನಡೆಸಬೇಕಾದರೆ ವರ್ತಕರು, ವ್ಯವಸಾಯಗಾರರು, ಕೈಗಾರಿಕೆವ್ಯವಸ್ಥಾಪಕರು, ಕೂಲಿಗಾರರು—ಎಲ್ಲರೂ ಯುದ್ಧಮುಖರಾಗಿರಬೇಕಾಗಿದೆ. ಯುದ್ಧವು ಒಂದು ಮಹಾಕೈಗಾರಿಕೆಯಾಗಿದೆ. ಯುದ್ಧಸಮಸ್ಯೆಗಳು ಬಹುಮಟ್ಟಿಗೆ ಆರ್ಥಿಕಸಮಸ್ಯೆಗಳಾಗಿವೆ.

ಇವುಗಳಲ್ಲಿ ತಯಾರಿಕೆಯ ಸಮಸ್ಯೆ ಮೊದಲನೆಯದು. ತಯಾರಿಕೆಗೆ ಅಂಗವಾದ ವ್ಯಾಪಾರದ ವ್ಯವಸ್ಥೆಯೂ, ಮುಖ್ಯವಾಗಿ ವಿದೇಶೀವ್ಯಾಪಾರವ್ಯವಸ್ಥೆ ಆಗಬೇಕು. ಇದು ಎರಡನೆಯ ಸಮಸ್ಯೆ. ಸಾಮಾನುಗಳನ್ನು ಬೇರೆ ಬೇರೆ ಕಡೆಯಿಂದ ತಂದು ಶೇಖರಿಸುವುದು, ತಯಾರಾದ ಸಾಮಾನುಗಳನ್ನು ಯುದ್ಧರಂಗಕ್ಕೆ ಸಾಗಿಸುವುದು, ಅಂದರೆ, ರವಾನೆ ಸಮಸ್ಯೆ ಮೂರನೆಯದು. ಶೇಖರಿಸಿದ ಅಥವಾ ತಯಾರಿಸಿದ ಪದಾರ್ಥಗಳಲ್ಲಿ ಎಷ್ಟರಮಟ್ಟಿಗೆ ಸಾರ್ವಜನಿಕರ ಉಪಯೋಗಕ್ಕಾಗಿ ಇಡಬೇಕು, ಹೇಗೆ ಅವನ್ನು ಹಂಚಬೇಕು ಎಂಬುದು ನಾಲ್ಕನೆಯ ಸಮಸ್ಯೆ. ಈ ಕೆಲಸಗಳಿಗೆಲ್ಲಾ ಅತ್ಯಾವಶ್ಯಕವಾಗಿ ಬೇಕಾದ ಹಣವನ್ನು ಒದಗಿಸುವ ಸಮಸ್ಯೆ ಐದನೆಯ ಸಮಸ್ಯೆ.

೨. ಯುದ್ಧ ಮತ್ತು ಉತ್ಪತ್ತಿ

ಯುದ್ಧವನ್ನು ಜಯಪ್ರದವಾಗುವಂತೆ ನಡೆಸಬೇಕಾದರೆ ಒಂದು ದೇಶದ ಉತ್ಪತ್ತಿ ಶಿಸ್ತನ್ನು ಪುನರ್ವ್ಯವಸ್ಥೆಗೊಳಿಸ ಬೇಕು. ಶಾಂತಿಕಾಲದಲ್ಲಿ ಕಾರ್ಖಾನೆಗಳಲ್ಲಿ ಸಾಮಾನ್ಯ ಜೀವ ನಕ್ಕೆ ಬೇಕಾದ ಪದಾರ್ಥಗಳು ತಯಾರಾಗುವುವು. ಕೂಲಿಗಾ ರರು ನಾಗರಿಕ ಜೀವನಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸು ವುದರಲ್ಲಿ ನಿರತರಾಗಿರುವರು. ಆದರೆ ಯುದ್ಧವು ಒದಗಿದಾಗ ಕೂಲಿಗಾರರೂ ಕಾರ್ಖಾನೆಗಳೂ ಯುದ್ಧಸಾಮಗ್ರಿಗಳನ್ನು ತಯಾರಿಸಲು ತೊಡಗಬೇಕು. ಈಗಿನಕಾಲದ ಯುದ್ಧ ಬಹು ವಾಗಿ ಯಂತ್ರಸಂಪಂತ್ತಿನಿಂದ ನಡೆಯುತ್ತಿದೆ. ಅಂದರೆ ಟ್ಯಾಂಕು ಗಳು, ಫಿರಂಗಿಗಳು, ವಿಮಾನಗಳು, ಸಬ್‌ಮೆರೀನುಗಳು ಇತ್ಯಾದಿ ಉಪಕರಣಗಳ ತಯಾರಿಕೆ ಬಹುವಾಗಿ ಹೆಚ್ಚಬೇಕು. ರಣರಂಗ ದಲ್ಲಿ ಕಾದಾಡುವ ಲಕ್ಷಾಂತರಯೋಧರ ಉಪಯೋಗಕ್ಕಾಗಿ ಆಹಾರ, ಬಟ್ಟೆ, ಕಂಬಳಿ, ಜೋಡು, ಬಿಡಾರಗಳು, ಮಂಚ ಇವೇ ಮೊದಲಾದ ನಾಗರಿಕ ಜೀವನಕ್ಕೆ ಬೇಕಾದ ಪದಾರ್ಥಗಳು ಹೆಚ್ಚು ಪ್ರಮಾಣದಲ್ಲಿ ತಯಾರಾಗಬೇಕು. ಆದುದರಿಂದ ಸಾಮಾನ್ಯ ಜೀವನಕ್ಕೆ ಬೇಕಾದ ಭೋಗಸಾಧನಗಳ ತಯಾರಿಕೆ ಕಡಮೆಯಾಗಬೇಕು. ಯುದ್ಧಕ್ಕೆ ಮುಂಚೆಯೇ ಸ್ಥಾಪಿತವಾಗಿ ರುವ ಕಾರ್ಖಾನೆಗಳು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಯುದ್ಧ ಸಾಮಗ್ರಿಗಳ ಉತ್ಪತ್ತಿಗೆ ಗಮನಕೊಡಬೇಕು. ಇದಲ್ಲದೆ ಅನೇಕ ಹೊಸಕಾರ್ಖಾನೆಗಳೂ ಕೈಗಾರಿಕೆಗಳೂ ಹೊಸದಾಗಿ ಸ್ಥಾಪಿಸ ಲ್ಪಡಬೇಕು. ಸಾರ್ವಜನಿಕರ ಉಪಯೋಗಕ್ಕಾಗಿ ಮೋಟಾರು ಗಳನ್ನು ತಯಾರಿಸುತ್ತಿದ್ದ ಕಾರ್ಖಾನೆಗಳು ಸೈನ್ಯದ ಉಪಯೋಗ

ಕ್ಕಾಗಿ ಬೇಕಾದ ಲಾರಿಗಳನ್ನೂ ವಿಮಾನಗಳನ್ನೂ ತಯಾರಿಸುವುದು ಅವಶ್ಯಕ. ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ನಿತ್ಯ ಜೀವನಕ್ಕೆ ಬೇಕಾದ ಸಲಕರಣೆಗಳ ತಯಾರಿಕೆಯನ್ನು ಕಡಿಮೆ ಮಾಡಿ ಟ್ಯಾಂಕು ಮತ್ತು ಫಿರಂಗಿಗಳ ತಯಾರಿಕೆಯನ್ನು ಹೆಚ್ಚಿಸಬೇಕು. ರಾಸಾಯನಿಕ ಗೊಬ್ಬರವನ್ನು ತಯಾರಿಸುತ್ತಿದ್ದ ಕೈಗಾರಿಕೆ ಸಂಸ್ಥೆಗಳು ಮದ್ದುಗುಂಡುಗಳ ತಯಾರಿಕೆಗೆ ಬೇಕಾದ ರಾಸಾಯನಿಕ ವಸ್ತುಗಳನ್ನೇ ತಯಾರಿಸಬೇಕು. ಕುರ್ಚಿ, ಮೇಜು, ಮಂಚ ಮುಂತಾದುವುಗಳನ್ನೂ ಮನೆಕಟ್ಟುವ ಸಾಮಗ್ರಿಗಳನ್ನೂ ತಯಾರಿಸಲು ಉಪಯೋಗಿಸುತ್ತಿದ್ದ ಸಾಗುವಾನಿ ಮರಗಳನ್ನು ಹಡಗುಗಳನ್ನು ಕಟ್ಟುವುದಕ್ಕಾಗಿಯೂ, ಸೈನಿಕರಿಗೆ ಬಿಡಾರಗಳನ್ನು ಕಟ್ಟುವುದಕ್ಕೂ ಉಪಯೋಗಿಸಬೇಕು. ಪಂಚೆ, ಅಂಗವಸ್ತ್ರ, ಸೀರೆ ಮುಂತಾದುವಕ್ಕೆ ಉಪಯೋಗಿಸುತ್ತಿದ್ದ ರೇಷ್ಮೆಯನ್ನು ವಿಮಾನದಿಂದ ದುಮುಕಿ ಕೆಳಗಿಳಿಯಲು ಸಹಾಯವಾಗುವ ಪ್ಯಾರಷೂಟ್‌ಗಳ ತಯಾರಿಕೆಗೆ ಉಪಯೋಗಿಸಬೇಕು.

ಯುದ್ಧವು ಒಂದು ದೇಶದ ಕೈಗಾರಿಕೆಗಳ ಬೆಳವಣಿಗೆಗೆ ಬಹಳ ಉತ್ತೇಜನ ಕೊಡುವುದು. ಈ ಬೆಳವಣಿಗೆಗೆ ಕಾರಣ ಯುದ್ಧಸಾಮಗ್ರಿಗಳು ಅತ್ಯಧಿಕ ಪ್ರಮಾಣದಲ್ಲಿ ತಯಾರಾಗಬೇಕಾದುದು ಮಾತ್ರವೇ ಅಲ್ಲ. ಪರದೇಶಗಳಿಂದ ಅನೇಕ ಬಗೆಯ ಕಚ್ಚಾಪದಾರ್ಥಗಳ ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ಬೇಕಾದ ವಸ್ತುಗಳ ಆಮದು ಬಹುಮಟ್ಟಿಗೆ ಕಡಿಮೆಯಾಗಿರುವುದರಿಂದ ಅಂಥ ಪದಾರ್ಥಗಳ ತಯಾರಿಕೆಯನ್ನು ಆಮದು ಮಾಡಿಕೊಳ್ಳುತ್ತಿದ್ದವರೇ ಕೈಕೊಳ್ಳಬೇಕಾಗಿದೆ. ಅಲ್ಲದೆ ಯುದ್ಧಕಾಲದಲ್ಲಿ ಲಕ್ಷಾಂತರ ಮಂದಿಗೆ ಸೈನ್ಯದಲ್ಲಿಯೂ ಕಾರ್ಖಾನೆಗಳಲ್ಲಿಯೂ, ಸರ್ಕಾರಿ ಕಛೇರಿಗಳಲ್ಲಿಯೂ ಉದ್ಯೋಗ

ಸಿಗುವುದರಿಂದ ಅವರ ವರಮಾನವೂ ಹೆಚ್ಚುತ್ತದೆ. ಶಾಂತಿಕಾಲದಲ್ಲಿ ಯಾವ ರಾಷ್ಟ್ರವೂ ತನ್ನಲ್ಲಿರುವ ಆರ್ಥಿಕ ಉಪಪತ್ತಿಗಳನ್ನು ಪೂರ್ಣವಾಗಿ ಉಪಯೋಗಿಸಿಕೊಂಡಿರುವುದಿಲ್ಲ. ಆದುದರಿಂದ ಕೈಗಾರಿಕೆಯಲ್ಲಿ ಹಿಂದುಳಿದಿರುವ ಇಂಡಿಯಾ ಮೊದಲಾದ ದೇಶಗಳಿಗೆ ಕೈಗಾರಿಕೆಯ ವಿಸ್ತರಣಕ್ಕೆ ಅನಂತವಾದ ಅವಕಾಶವುಂಟು. ನಮ್ಮ ದೇಶದಲ್ಲಿ ಯುದ್ಧಕ್ಕೆ ಮುಂಚೆಯೇ ಸ್ಥಾಪಿತವಾಗಿದ್ದ ಹತ್ತಿಬಟ್ಟೆ, ಕಬ್ಬಿಣ ಮತ್ತು ಉಕ್ಕು, ಕಾಗದ, ಗಾಜು ಮೊದಲಾದ ಕೈಗಾರಿಕೆಗಳು ಬಹುಮಟ್ಟಿಗೆ ವಿಸ್ತರಿಸಿವೆ. ಅಲ್ಯೂಮಿನಿಯಂ, ರಸಾಯನಿಕವಸ್ತುಗಳು, ಔಷಧಗಳು, ಇವೇ ಮೊದಲಾದ ಅನೇಕ ಕೈಗಾರಿಕೆಗಳು ಹೊಸದಾಗಿ ಹುಟ್ಟಿವೆ.

ಸಾಮಾನ್ಯವಾಗಿ ಒಂದು ಪದಾರ್ಥದ ತಯಾರಿಕೆಗೆ ಮೂರು ಬಗೆಯ ಸಾಧನಗಳು ಬೇಕು—(i) ಯಂತ್ರಗಳು, (ii) ಕೂಲಿಗಾರರು, (iii) ಕಚ್ಚಾಪದಾರ್ಥಗಳು ಮತ್ತು ಶಕ್ತಿ ಸಾಧಕಗಳು. ಯುದ್ಧ ಮುಂದುವರಿದಹಾಗೆಲ್ಲಾ ಯುದ್ಧ ಸಾಮಗ್ರಿಗಳ ಮತ್ತು ಇತರ ಪದಾರ್ಥಗಳ ತಯಾರಿಕೆ ಹೆಚ್ಚುವುದರಿಂದ ಉತ್ಪತ್ತಿ ಸಾಧನಗಳ ಅಭಾವ ಹೆಚ್ಚುತ್ತದೆ. ಇದನ್ನು ನಿವಾರಿಸಲು ವಿಶೇಷವಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಯಂತ್ರಗಳು ಮೊದಲಿಗಿಂತ ದಿನವಹಿ ಹೆಚ್ಚು ಕಾಲ ಕೆಲಸಮಾಡಬೇಕು. ತೀರ ಹಳೆಯದೆಂದು ಮೂಲೆಗೊತ್ತಿದ್ದ ಅನೇಕ ಯಂತ್ರಗಳನ್ನು ಉಪಯೋಗಿಸಬೇಕಾಗುವುದು. ಸಾಧ್ಯವಾದಷ್ಟು ಯಂತ್ರೋಪಕರಣಗಳನ್ನು ಆಮದು ಮಾಡಬೇಕು. ಯಂತ್ರಗಳ ಸಹಾಯವಿಲ್ಲದೆ ನಡೆಯುವ ಗ್ರಾಮಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು.

ಯುದ್ಧ ಮುಂದುವರಿದಹಾಗೆಲ್ಲಾ ಕೂಲಿಗಾರರನ್ನು ಒದಗಿ

ಸುವುದು ಹೆಚ್ಚು ಹೆಚ್ಚು ಕಷ್ಟವಾಗುತ್ತದೆ. ಯುದ್ಧರಂಗಕ್ಕೆ ಹೋಗಿ ಕಾದಾಡಲು ಹೆಚ್ಚು ಜನರು ಬೇಕು. ಅದೇ ಕಾಲದಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡಲೂ ಹೆಚ್ಚು ಸಂಖ್ಯೆಯಲ್ಲಿ ಜನರು ಬೇಕು. ಕೂಲಿಗಾರರ ಸಮಸ್ಯೆ ಹೆಚ್ಚು ಪ್ರಜಾಸಂಖ್ಯೆಯುಳ್ಳ ಇಂಡಿಯಾ ಮೊದಲಾದ ದೇಶಗಳಲ್ಲಿ ಅಷ್ಟು ತಲೆದೋರುವುದಿಲ್ಲ. ಇಂಗ್ಲೆಂಡ್ ಜರ್ಮನಿ ಮೊದಲಾದ ದೇಶಗಳಲ್ಲಿ ಈ ಸಮಸ್ಯೆ ಬಹಳ ಕಠಿನವಾಗಿದೆ. ಈ ಸಮಸ್ಯೆಯನ್ನು ಮುಂದೆ ಹೇಳುವ ಕಾರ್ಯಕ್ರಮದಿಂದ ನಿವಾರಿಸಬಹುದು.

(i) ಹೆಚ್ಚು ಗಂಟೆಗಳ ಕಾಲ ಕೆಲಸಮಾಡಿಸುವುದು, ರಾತ್ರಿ ವೇಳೆ ಕೆಲಸಮಾಡಿಸುವುದು, ಮತ್ತು ರಜಾದಿನಗಳನ್ನು ಕಡಿಮೆ ಮಾಡುವುದು.

(ii) ಕೆಲಸದಿಂದ ನಿವೃತ್ತರಾದವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವುದು.

(iii) ಕೆಲಸಕ್ಕೆ ನೇಮಕಮಾಡಿಕೊಳ್ಳುವ ವಿಚಾರದಲ್ಲಿ ಶಾಂತಿ ಕಾಲದಲ್ಲಿ ಹಾಕುವ ನಿಬಂಧನೆಗಳನ್ನು ಯುದ್ಧಕಾಲದಲ್ಲಿ ಸಡಿಲಿಸುವುದು. ವಯೋನಿಯಮದ ಕೆಳಮಟ್ಟವನ್ನು ಇಳಿಸಿ ಮೇಲ್ಮಟ್ಟವನ್ನು ಹೆಚ್ಚಿಸುವುದು. ಇಂಗ್ಲೆಂಡ್ ಜರ್ಮನಿಗಳಲ್ಲಿ ಗಂಡಸರು ಮಾಡುತ್ತಿದ್ದ ಅನೇಕ ಕೆಲಸಗಳನ್ನು ಈಗ ಹೆಂಗಸರೂ ಮಕ್ಕಳೂ ಮಾಡುತ್ತಿದ್ದಾರೆ.

(iv) ವಿಶೇಷವಾದ ಉದ್ಯೋಗ ಶಿಕ್ಷಣದಿಂದ ಕೂಲಿಗಾರರ ಸಾಮರ್ಥ್ಯವನ್ನು ಹೆಚ್ಚಿಸುವುದು. ಯುದ್ಧಕಾಲದಲ್ಲಿ ಅನೇಕ ಹೊಸ ಕೈಗಾರಿಕೆಗಳು ಸ್ಥಾಪಿತವಾಗುವುದರಿಂದ ಅವುಗಳಿಗೆ ಬೇಕಾದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು ಆವಶ್ಯಕ.

(v) ಇತರ ದೇಶಗಳಿಂದ ಕೂಲಿಗಾರರನ್ನು ಆಮದು ಮಾಡಿಕೊಳ್ಳುವುದು.

ಕಡೆಯದಾಗಿ, ಕಚ್ಚಾಪದಾರ್ಥಗಳ ಮತ್ತು ಶಕ್ತಿಸಾಧಕಗಳ ಅಭಾವವನ್ನು ಪರಿಹರಿಸಬೇಕು, ಆಧುನಿಕ ಕೈಗಾರಿಕೆಗಳಿಗೆ ಸುಮಾರು ಒಂದು ಲಕ್ಷ ಬೇರೆ ಬೇರೆ ಕಚ್ಚಾಪದಾರ್ಥಗಳು ಬೇಕೆಂದು ಅಂದಾಜಾಗಿದೆ. ಇವುಗಳಲ್ಲಿ ಮುಖ್ಯವಾದುವು ಕಬ್ಬಿಣ, ಮ್ಯಾಂಗನೀಸ್, ಅಲ್ಯೂಮಿನಿಯಂ, ರಬ್ಬರ್, ತಾಮ್ರ, ಗಂಧಕ, ಹತ್ತಿ, ಉಣ್ಣೆ, ಯಂತ್ರಗಳನ್ನೂ, ವಿಮಾನ, ರೈಲು, ಮೋಟಾರು ಮೊದಲಾದ ಯಾನವಾಹನಗಳನ್ನೂ ನಡೆಸಲು ಪೆಟ್ರೋಲ್, ಕಲ್ಲಿದ್ದಲು ಮತ್ತು ವಿದ್ಯುಚ್ಛಕ್ತಿ, ಈ ಮೂರು ಶಕ್ತಿಸಾಧಕಗಳು ಆವಶ್ಯಕ. ಯಾವುದೊಂದು ರಾಷ್ಟ್ರವೂ ಎಲ್ಲ ಬಗೆಯ ಕಚ್ಚಾ ಪದಾರ್ಥಗಳನ್ನೂ ಶಕ್ತಿಸಾಧನಗಳನ್ನೂ ಪಡೆದಿರುವುದಿಲ್ಲ. ಅವುಗಳಲ್ಲಿ ಅನೇಕವನ್ನು ಇತರ ರಾಷ್ಟ್ರಗಳಿಂದ ಆಮದು ಮಾಡಬೇಕು. ಆದರೆ ಯುದ್ಧಕಾಲದಲ್ಲಿ ಹಡಗುಗಳ ಅಭಾವದಿಂದಲೂ ಪದಾರ್ಥಗಳನ್ನು ಒದಗಿಸುತ್ತಿದ್ದ ಅನೇಕ ರಾಷ್ಟ್ರಗಳು ಶತ್ರುಗಳ ಕೈಸೇರುವುದರಿಂದಲೂ ಆಮದು ಬಹುಮಟ್ಟಿಗೆ ಕಡಮೆಯಾಗುತ್ತದೆ. ಆದುದರಿಂದ ಯುದ್ಧಕೈಗಾರಿಕೆಗಳಿಗೆ ಮುಖ್ಯವಾಗಿ ಬೇಕಾದ ಕಚ್ಚಾಪದಾರ್ಥಗಳನ್ನೂ ಶಕ್ತಿಸಾಧಕಗಳನ್ನೂ ಸಾಧ್ಯವಾದಷ್ಟು ಮಿತವಾಗಿ ಉಪಯೋಗಿಸಿಕೊಳ್ಳಬೇಕು. ದೊರೆಯದ ವಸ್ತುಗಳಿಗೆ ಬದಲಾಗಿ ಉಪಯೋಗಿಸಬಹುದಾದ ಇತರ ಸಾಮಾನುಗಳನ್ನು ತಯಾರಿಸಲು ವೈಜ್ಞಾನಿಕ ಮತ್ತು ಕೈಗಾರಿಕೆಗೆ ಸಂಬಂಧಿಸಿದ ಪರಿಶೋಧನೆಯಲ್ಲಿ ಜರ್ಮನಿ ಬಹಳ ಮುಂದುವರಿದಿದೆ. ಅಲ್ಲಿ ರಬ್ಬರ್, ಪೆಟ್ರೋಲ್ ಮೊದಲಾದ ವಸ್ತುಗಳನ್ನು ಕೃತಕವಾಗಿ ತಯಾರಿಸುತ್ತಿದ್ದಾರೆ. ಈಚೆಗೆ ನಮ್ಮ ದೇಶ

ದಲ್ಲಿಯೂ ಕೂಡ ಈ ಬಗೆಯ ಪರಿಶೋಧನೆ ನಡೆಯುತ್ತಿದೆ. ಇದಕ್ಕಾಗಿ 3 ವರ್ಷಗಳ ಹಿಂದೆ ಇಂಡಿಯಾ ಸರ್ಕಾರವು Board of Scientific and Industrial Research ಎಂಬ ಸಂಸ್ಥೆಯನ್ನು ಸ್ಥಾಪಿಸಿತು.

---

೩. ಯುದ್ಧ ಮತ್ತು ವಿದೇಶೀ ವ್ಯಾಪಾರ

ಒಂದು ರಾಷ್ಟ್ರದ ಆರ್ಥಿಕಜೀವನಕ್ಕೆ ವಿದೇಶೀ ವ್ಯಾಪಾರವು ಅತ್ಯಾವಶ್ಯಕ. ಯಾವುದೊಂದು ರಾಷ್ಟ್ರವೂ ನಿತ್ಯಜೀವನಕ್ಕೆ ಬೇಕಾದ ಎಲ್ಲ ಪದಾರ್ಥಗಳನ್ನೂ ತಯಾರಿಸುವುದಿಲ್ಲ. ಪ್ರತಿಯೊಂದು ದೇಶವೂ ತನಗೆ ಬೇಕಾದ ಅನೇಕ ಪದಾರ್ಥಗಳನ್ನು ಪರದೇಶಗಳಿಂದ ಆಮದುಮಾಡಿಕೊಳ್ಳುತ್ತದೆ. ಅದೇ ರೀತಿಯಲ್ಲಿ ಒಂದು ರಾಷ್ಟ್ರವು ಅನೇಕ ಪದಾರ್ಥಗಳನ್ನು ಪರದೇಶಗಳಿಗೆ ರಫ್ತು ಮಾಡುತ್ತದೆ. ಶಾಂತಿ ಕಾಲದಲ್ಲಿ ವಿದೇಶೀ ವ್ಯಾಪಾರದ ಮುಖ್ಯ ಉದ್ದೇಶ ಸಾರ್ವಜನಿಕರಿಗೆ ಬೇಕಾದ ಭೋಗಸಾಧನೆಗಳನ್ನು ಒದಗಿಸುವುದು. ಯುದ್ಧಕಾಲದಲ್ಲಿ ಸಬ್‌ಮೆರೀನಿನ

ಕಾರ್ಯಾಚರಣೆಯಿಂದ ಪದಾರ್ಥಗಳನ್ನು ಸಾಗಿಸುವ ಹಡಗು ಗಳು ಮುಳುಗುವುದರಿಂದಲೂ ಹಡಗುಗಳು ಮುಖ್ಯವಾಗಿ ಸೈನ್ಯ ಗಳ ಮತ್ತು ಯುದ್ಧಸಾಮಗ್ರಿಗಳ ರವಾನೆಯಲ್ಲಿ ತೊಡಗಿರುವುದ ರಿಂದಲೂ ಸಾರ್ವಜನಿಕರಿಗೆ ಬೇಕಾದ ಸಾಮಾನುಗಳ ಅಭಾವ ಹೆಚ್ಚುವುದು. ಅಲ್ಲದೆ ರಾಷ್ಟ್ರದ ಉತ್ಪತ್ತಿ ಸಾಧನಗಳ ಬಹು ಭಾಗ ಯುದ್ಧಸಾಮಗ್ರಿಗಳ ಕೈಗಾರಿಕೆಗೆ ಮೀಸಲಾಗಿರುವುದರಿಂದ ರಫ್ತಿಗಾಗಿ ಹಿಂದಿನಷ್ಟು ಪ್ರಮಾಣದಲ್ಲಿ ಸಾಮಾನುಗಳನ್ನು ತಯಾರಿಸಲೂ ಸಾಧ್ಯವಿಲ್ಲ. ಆದುದರಿಂದ ಯುದ್ಧಕಾಲದಲ್ಲಿ ಆಮದು ರಫ್ತುಗಳ ಪರಿಮಿತಿ ಬಹಳ ಕಡಮೆಯಾಗುತ್ತದೆ. ಈ ಸನ್ನಿವೇಶದಲ್ಲಿ ಯುದ್ಧ ಕೆಲಸಕ್ಕಾಗಿ ಉಪಯೋಗವಾಗುವ ಮತ್ತು ಸಾರ್ವಜನಿಕ ಜೀವನಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿ ರುವ ಪದಾರ್ಥಗಳನ್ನು ಮಾತ್ರವೇ ಆಮದುಮಾಡಬೇಕು. ಹೀಗೆ ರಾಷ್ಟ್ರದ ರಕ್ಷಣೆಗೆ ಬೇಕಾದ ಸಾಮಾನುಗಳ ರಫ್ತನ್ನು ನಿಲ್ಲಿಸಬೇಕು. ಅಂದರೆ ಸರ್ಕಾರವು ವಿದೇಶೀ ವ್ಯಾಪಾರದ ಮೇಲೆ ಸಂಪೂರ್ಣ ಹತೋಟಿ ಏರ್ಪಡಿಸಬೇಕು.

ಯುದ್ಧಕ್ಕೆ ಮುಂಚೆ ಒಂದು ರಾಷ್ಟ್ರದೊಡನೆ ವ್ಯಾಪಾರ ನಡೆ ಸುತ್ತಿದ್ದ ಅನೇಕ ರಾಷ್ಟ್ರಗಳು ಶತ್ರುಪಕ್ಷಕ್ಕೆ ಸೇರುವುದರಿಂದ ಆ ರಾಷ್ಟ್ರಗಳೊಡನೆ ವ್ಯಾಪಾರಸಂಬಂಧವು ಸಂಪೂರ್ಣವಾಗಿ ಕಡಿದು ಹೋಗುವುದು. ಈಗಿನ ಯುದ್ಧದಲ್ಲಿ ಇಂಗ್ಲೆಂಡ್, ಇಂಡಿಯಾ ಮತ್ತು ಅಮೆರಿಕಾ ಮೊದಲಾದ ಮಿತ್ರರಾಷ್ಟ್ರಗಳು ಜರ್ಮನಿ, ಜಪಾನ್ ಮತ್ತು ಇಟಲಿ ರಾಷ್ಟ್ರಗಳೊಡನೆ ವ್ಯಾಪಾರವನ್ನು ಪೂರ್ತಿ ಯಾಗಿ ನಿಲ್ಲಿಸಿವೆ. ಆದರ ಬದಲು ತಮ್ಮ ತಮ್ಮಲ್ಲೇ ವ್ಯಾಪಾರ ಸಂಬಂಧವನ್ನು ಹೆಚ್ಚು ಬೆಳಸಿವೆ. ಅಮೆರಿಕಾದ ಸಂಯುಕ್ತ ಸಂಸ್ಥಾನಗಳು 1941 ರಲ್ಲಿ ಜಾರಿಗೆ ತಂದ ಎರವು ಮತ್ತು ಸಾಲ

ಶಾಸನದ ಪ್ರಕಾರ ಉಳಿದ ಮಿತ್ರರಾಷ್ಟ್ರಗಳಿಗೆ ಬೇಕಾದ ಯುದ್ಧ ಸಾಮಗ್ರಿಗಳನ್ನೂ ಅನೇಕ ಇತರ ವಸ್ತುಗಳನ್ನೂ ಒದಗಿಸುತ್ತಿದೆ; ಇಂಡಿಯಾದೇಶವೂ ಇಂಗ್ಲೆಂಡ್ ಮತ್ತು ಅಮೆರಿಕಾದೇಶದ ಸೈನ್ಯಗಳಿಗೆ ಯುದ್ಧಸಾಮಗ್ರಿಗಳನ್ನೂ ಆಹಾರ ಮತ್ತು ಬಟ್ಟೆಬರೆಯನ್ನೂ ಸರಬರಾಜುಮಾಡುತ್ತಿದೆ.

---

೪. ಯುದ್ಧ ಮತ್ತು ಯಾನವಾಹನಸೌಕರ್ಯ

ಯಾನವಾಹನಸೌಕರ್ಯಗಳು ಒಂದು ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಒಂದು ಮುಖ್ಯವಾದ ಅಂಗವಾಗಿದೆ. ದೇಶದೊಳಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪದಾರ್ಥಗಳನ್ನು ಸಾಗಿಸುವುದಕ್ಕೂ ಜನರ ಪ್ರಯಾಣಕ್ಕೂ ಯಾನವಾಹನಗಳ ಸೌಕರ್ಯಗಳು ಅತ್ಯಾವಶ್ಯಕ. ಈ ಸೌಕರ್ಯಗಳಲ್ಲಿ ಮುಖ್ಯವಾದುವು ರೈಲ್ವೆಗಳು ಮತ್ತು ಮೋಟಾರುಗಳು. ಯುದ್ಧಕಾಲದಲ್ಲಿ ಸೈನ್ಯಗಳನ್ನೂ ಯುದ್ಧಸಾಮಗ್ರಿಗಳನ್ನೂ ದೇಶದ ನಾನಾಭಾಗಗಳಿಂದ ಯುದ್ಧರಂಗಗಳಿಗೆ ಶೀಘ್ರವಾಗಿ ರವಾನೆಮಾಡುವುದೇ ಯಾನವಾಹನಗಳ ಪ್ರಧಾನಕಾರ್ಯವಾಗುತ್ತದೆ. ನೂರಾರುಮೈಲಿ

ಹೊಸಮೋಟಾರು ರಸ್ತೆಗಳನ್ನೂ ರೈಲ್ವೆಮಾರ್ಗಗಳನ್ನೂ ನಿರ್ಮಿಸ ಬೇಕಾಗುವುದು. ಇದಕ್ಕೋಸ್ಕರ ಕೆಲವು ಹಳೆಯ ರೈಲುಮಾರ್ಗ ಗಳನ್ನು ತೆಗೆದುಬಿಡಬೇಕಾಗುವುದು. ಅಲ್ಲದೆ ಯುದ್ಧಕೈಗಾರಿಕೆ ಗಳಿಗೆ ಹೆಚ್ಚು ಕಲ್ಲಿದ್ದಲು ಬೇಕಾಗುವುದರಿಂದ ಕಲ್ಲಿದ್ದಲಿನ ಕೊರತೆ ಹೆಚ್ಚುವುದು. ಇದೇ ರೀತಿಯಲ್ಲಿ ವಿಮಾನಗಳನ್ನೂ ಟ್ಯಾಂಕು ಗಳನ್ನೂ ನಡೆಸಲು ಹೆಚ್ಚುಹೆಚ್ಚು ಪೆಟ್ರೋಲ್ ಬೇಕಾಗುವುದ ರಿಂದ ಪೆಟ್ರೋಲಿನ ಕೊರತೆಯೂ ಹೆಚ್ಚುವುದು. ರೈಲ್ವೆ ಎಂಜಿನ್ನುಗಳನ್ನು ಮೋಟಾರುಗಳನ್ನೂ ಪರದೇಶಗಳಿಂದ ಆಮದು ಮಾಡುತ್ತಿದ್ದ ಪಕ್ಷದಲ್ಲಿ, ಅವುಗಳ ಕೊರತೆಯೂ ಹೆಚ್ಚುವುದು. ಇವೆಲ್ಲದರ ಫಲವಾಗಿ ಸಾರ್ವಜನಿಕರ ಪ್ರಯಾಣಕ್ಕೂ ಸರಕು ಗಳನ್ನು ಸಾಗಿಸುವುದಕ್ಕೂ ಯಾನವಾಹನಸೌಕರ್ಯ ತೀರ ಕಡಮೆ ಯಾಗುತ್ತದೆ. ಆದುದರಿಂದ ಬೇರೆ ವಿಧವಾದ ಯಾನವಾಹನ ಸೌಕರ್ಯಗಳನ್ನು ಕಲ್ಪಿಸಬೇಕು. ಮೋಟಾರುಗಳ ಬದಲು ಎತ್ತಿನ ಗಾಡಿಗಳನ್ನೂ ಕುದುರೆ ಗಾಡಿಗಳನ್ನೂ ಹೆಚ್ಚಾಗಿ ಉಪಯೋಗಿಸ ಬೇಕು. ರೈಲ್ವೆಯ ಬದಲು ದೋಣಿ ಮತ್ತು ಹಡಗುಗಳ ಮೂಲಕ ಸರಕುಗಳನ್ನು ಸಾಗಿಸಬೇಕು. ರೈಲ್ವೆಗಳಲ್ಲಿ ದೊರೆಯು ವಷ್ಟು ಸ್ಥಳವನ್ನು ಜೀವನಕ್ಕೆ ಅತಿ ಮುಖ್ಯವಾದ ಆಹಾರ ಮತ್ತು ಬಟ್ಟೆಗಳ ರವಾನೆಗೆ ಮಾತ್ರ ಉಪಯೋಗಿಸಬೇಕು. ಜನರು ಪ್ರಯಾಣವನ್ನು ಬಹಳ ಕಡಮೆಮಾಡಬೇಕು.

ಆದುದರಿಂದ ಉತ್ಪತ್ತಿ, ಹಂಚಿಕೆ, ವ್ಯಾಪಾರ ಮತ್ತು ಯಾನ ವಾಹನಗಳು—ಇವುಗಳನ್ನು ಪುನರ್ವ್ಯವಸ್ಥೆಮಾಡಬೇಕಾ ಗುವುದು. ಉತ್ಪತ್ತಿಸಾಧನಗಳನ್ನು ಯುದ್ಧಕ್ಕಾಗಿ ಸಜ್ಜುಗೊಳಿ ಸಲು ಬಹುಬೇಗ ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸಬೇಕಾ ಗಿರುವಾಗ ಆರ್ಥಿಕ ಚಟುವಟಿಕೆಯಲ್ಲಿ ಸರ್ಕಾರದ ಕೈವಾಡವು

ಬಹು ಆವಶ್ಯಕ. ರಾಷ್ಟ್ರದ ಸಮಗ್ರ ಆರ್ಥಿಕ ವ್ಯವಸ್ಥೆಯು ಸರ್ಕಾರದ ಹತೋಟಿಗೆ ಒಳಪಡಬೇಕು.

---

೫. ಯುದ್ಧಕ್ಕಾಗಿ ಹಣ ಒದಗಿಸುವುದು

ಹಿಂದಿನ ಅಧ್ಯಾಯದಲ್ಲಿ ಯುದ್ಧವು ಒಂದು ರಾಷ್ಟ್ರದ ಆರ್ಥಿಕವ್ಯವಸ್ಥೆಯ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಸ್ಥೂಲವಾಗಿ ನೋಡಿದ್ದಾಯಿತು. ಈ ಅಧ್ಯಾಯದಲ್ಲಿ ಯುದ್ಧದ ವೆಚ್ಚಕ್ಕಾಗಿ ಆವಶ್ಯಕವಾಗುವ ಹಣವನ್ನು ಕೂಡಿಸುವ ಮಾರ್ಗಗಳನ್ನು ಪರಿಶೀಲಿಸೋಣ.

ಯುದ್ಧಕ್ಕಾಗಿ ಹಣವನ್ನು ಕೂಡಿಸುವ ಹಲವು ಮಾರ್ಗಗಳನ್ನು ಚರ್ಚಿಸುವ ಮೊದಲು ಯುದ್ಧಕ್ಕೆ ಎಷ್ಟು ಮೊತ್ತಗಳಲ್ಲಿ ಹಣ ಬೇಕಾಗುವುದು ಎಂಬುದನ್ನು ತಿಳಿದುಕೊಳ್ಳುವುದು ಆವಶ್ಯಕ. ಈಗಿನಕಾಲದ ಯುದ್ಧ ಬಹುವಾಗಿ ಶಸ್ತ್ರಸಜ್ಜಿತ ಯುದ್ಧ. ಫಿರಂಗಿಗಳು, ಟ್ಯಾಂಕುಗಳು, ಯುದ್ಧದ ವಿಮಾನಗಳು ಮತ್ತು ಮದ್ದುಗುಂಡುಗಳು ಬಹು ಸಂಖ್ಯೆಯಲ್ಲಿ ಉಪಯೋಗಿಸಲ್ಪಡಬೇಕು. ಇವುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಮಿತ್ರರಾಷ್ಟ್ರಗಳು ತಯಾರಿಸಿದರೆ ಶತ್ರುರಾಷ್ಟ್ರಗಳು ಇದಕ್ಕೆ ಮೀರಿಸಿದ ಸಂಖ್ಯೆಯಲ್ಲಿ ತಯಾರಿಸುವುವು. ಹೀಗೆ ಯುದ್ಧಸಾಮಗ್ರಿಗಳ ತಯಾರಿಕೆಯಲ್ಲಿ ಪೈಪೋಟಿ ಎಂದಿಗೂ ಮುಗಿಯುವುದಿಲ್ಲ. ಯುದ್ಧಸಲಕರಣೆಗಳು ಬಹಳ ಬೆಲೆಯಾಗತಕ್ಕವು. ಹಲವು ಆಯುಧಗಳ ಬೆಲೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

ಆಯುಧ	ಬೆಲೆ ರೂ.	ಆಯುಧ	ಬೆಲೆ ರೂ.
ಪಿಸ್ಟಲ್	50	ಆಂಟಿ ಏರ್ ಕ್ರಾಫ್ಟ್ ಫಿರಂಗಿ	40,000
ಬಂದೂಕ	100	ಬೆಲೂನ್ ಬ್ಯಾರೇಜ್ ವಿಮಾನ	10,000
ಯುದ್ಧದ ಫಿರಂಗಿ	1,800	ಡಿಸ್ಟ್ರಾಯರ್ ಹಡಗು	60,00,000
ಬಾಂಬರ್ ವಿಮಾನ	2,70,000	ಕ್ರೂಯ್ಸರ್ ಹಡಗು	2,25,00,000
ಫೈಟರ್ ವಿಮಾನ	1,40,000	ಯುದ್ಧದ ಹಡಗು	10,50,00,000

ಸಂಪೂರ್ಣವಾಗಿ ಯುದ್ಧಕ್ಕೆ ಸಜ್ಜಿತವಾಗಬೇಕಾದರೆ ಒಂದು ರಾಷ್ಟ್ರವು ಇವುಗಳನ್ನು ಸಾವಿರಗಟ್ಟಲೆ ತಯಾರಿಸಬೇಕು. ಇಂಗ್ಲೆಂಡು ಮತ್ತು ಜರ್ಮನಿದೇಶಗಳು ಸರಾಸರಿ ತಿಂಗಳೊಂದಕ್ಕೆ 3000 ವಿಮಾನಗಳನ್ನು ತಯಾರಿಸುತ್ತಿವೆ.

ಸರ್ಕಾರವು ಮೊಟ್ಟಮೊದಲು ವೆಚ್ಚಮಾಡಬೇಕಾದುದು ಯುದ್ಧದ ಆಯುಧಗಳಿಗಾಗಿ. ಅನಂತರ ಮಾಡಬೇಕಾದ ವೆಚ್ಚ ಸೈನ್ಯದ ಸಿಬ್ಬಂದಿಗೆ ಕೊಡುವಸಂಬಳಗಳಿಗಾಗಿ. ಈಗಿನ ಯುದ್ಧದಲ್ಲಿ ಸರ್ಕಾರಗಳು ಲಕ್ಷಗಟ್ಟಲೆ ಸೈನ್ಯಗಳನ್ನು ಸಿದ್ಧಗೊಳಿಸಬೇಕು. ಸಿಪಾಯಿಗಳಿಗೆ ಕೈತುಂಬ ಸಂಬಳ ಕೊಡಬೇಕು. ಮೂರನೆಯದಾಗಿ, ಯುದ್ಧಕಾಲದಲ್ಲಿ ಸರ್ಕಾರದ ಕೆಲಸವು ಬಹಳವಾಗಿ ಹೆಚ್ಚುವುದರಿಂದ ಹೊಸ ಇಲಾಖೆಗಳು ಏರ್ಪಡಬೇಕು. ಇರುವ ಇಲಾಖೆಗಳು ವಿಸ್ತಾರಗೊಳ್ಳಬೇಕು. ಧಾರಣೆವಾಸಿ ಏರುವುದರಿಂದ ಸರ್ಕಾರೀನೌಕರರಿಗೆ ತುಟ್ಟಿಭತ್ಯಕೊಡುವುದಕ್ಕೂ ಮತ್ತು ಸಾದಿಲ್ವಾರು ಖರ್ಚಿಗೂ ಹೆಚ್ಚು ಹಣಬೇಕು. ಒಟ್ಟಿನಲ್ಲಿ ಸರ್ಕಾರದ ವೆಚ್ಚ ಅತ್ಯಧಿಕವಾಗಿ ಹೆಚ್ಚುತ್ತದೆ.

ಒಂದು ರಾಷ್ಟ್ರವು ಅದರ ರಕ್ಷಣೆಗಾಗಿ ಎಷ್ಟು ಹಣವನ್ನು ವೆಚ್ಚಮಾಡಲು ಸಾಧ್ಯವೆನ್ನುವುದು ಆ ರಾಷ್ಟ್ರದ ಆದಾಯಕ್ಕೆ ಮುಖ್ಯವಾಗಿ ಅಧೀನವಾಗಿದೆ. ಈ ಸಂದರ್ಭದಲ್ಲಿ ಸಂಪದ್ಯುಕ್ತವಾದ ರಾಷ್ಟ್ರಕ್ಕೆ ಅನುಕೂಲ ಹೆಚ್ಚು. ಇಂಗ್ಲೆಂಡ್, ಅಮೆರಿಕಾ ಮತ್ತು ಜರ್ಮನಿ ಮುಂತಾದ ದೇಶಗಳು ಕೈಗಾರಿಕೆಯಲ್ಲಿ ಹಿಂದುಳಿದಿರುವ ಮತ್ತು ಬಹಳ ಕಡಮೆ ರಾಷ್ಟ್ರಾದಾಯವುಳ್ಳ ಇಂಡಿಯಾ ಚೀಣಾದೇಶಗಳಿಗಿಂತ ಅತ್ಯಧಿಕವಾಗಿ ಯುದ್ಧವೆಚ್ಚವನ್ನು ಕೈಗೊಳ್ಳಬಲ್ಲವು. ಕೆಲವು ಮುಖ್ಯ ರಾಷ್ಟ್ರಗಳ ಒಟ್ಟು ವೆಚ್ಚವನ್ನೂ ರಕ್ಷಣಾವೆಚ್ಚವನ್ನೂ ಈ ಕೆಳಗಿನ ಪಟ್ಟಿ ತೋರಿಸುತ್ತದೆ.

ವರ್ಷ	ಇಂಗ್ಲೆಂಡ್		ಅಮೆರಿಕಾ		ಜರ್ಮನಿ
	ಒಟ್ಟು ವೆಚ್ಚ	ರಕ್ಷಣಾ ವೆಚ್ಚ	ಒಟ್ಟು ವೆಚ್ಚ	ರಕ್ಷಣಾ ವೆಚ್ಚ	ಒಟ್ಟು ವೆಚ್ಚ
1938-39	114.7	40.0	876.5	120.6	2885.0
1939-40	190.4	114.1	912.7	165.7	4481.3
1940-41	397.0	322.0	1277.5	630.1	6483.2
1941-42	468.8	408.5	3249.2	2601.1	8465.0
1942-43	574.0	484.0	7818.2	7210.9	9060.7
1943-44	586.6	490.0	10404.1	9700.0	ಕೋಟಿ
	(ಕೋಟಿ ಪೌಂಡುಗಳು)		(ಕೋಟಿ ಡಾಲರುಗಳು)		ಮಾರ್ಕ್ಗಳು

ಷರಾ: 1 ಪೌ=13 ರೂ. 5 ಆ. 4 ಪೈ; 1 ಡಾಲರ್=3 ರೂ. 5 ಆ. 4 ಪೈ.
1 ಮಾರ್ಕ್=10 ಆಣೆ.

ಯುದ್ಧಕ್ಕೆ ಬೇಕಾದ ಹಣವನ್ನು ಪಡೆಯಲು ಮುಖ್ಯವಾಗಿ 3 ಮಾರ್ಗಗಳಿವೆ—ತೆರಿಗೆ, ಸಾಲ ಮತ್ತು ಹಣದ ಚಲಾವಣೆ

ಯನ್ನು ಹೆಚ್ಚಿಸುವುದು ಅಥವಾ ಹಣವನ್ನು ಉಬ್ಬಿಸುವುದು (Inflation). ಇವುಗಳಲ್ಲಿ ಹಣದ ಉಬ್ಬರವು ಸೂಕ್ತವಾದುದಲ್ಲ. ಇದರಿಂದ ಅನೇಕ ದುಷ್ಪರಿಣಾಮಗಳುಂಟಾಗುತ್ತವೆ.

(1) **ಹಣದ ಉಬ್ಬರ (Inflation)**: ಪದಾರ್ಥಗಳ ಬೆಲೆ ಹೆಚ್ಚುವುದು ಹಣದ ಬೆಲೆ ಇಳಿಯುವುದು—ಈ ಪರಿಸ್ಥಿತಿಗೆ ಹಣದ ಉಬ್ಬರ ಎಂದು ಹೆಸರು. ಹಣದ ಚಲಾವಣೆ ಹೆಚ್ಚುವುದೇ ಧಾರಣೆವಾಸಿ ಏರುವುದಕ್ಕೆ ಮುಖ್ಯ ಕಾರಣ. ಹಣದ ಚಲಾವಣೆ ಎರಡು ವಿಧದಲ್ಲಿ ಹೆಚ್ಚಬಹುದು. ಸರ್ಕಾರವು ಯುದ್ಧವೆಚ್ಚಕ್ಕೆ ಬೇಕಾದ ಹಣವನ್ನು ನೋಟುಗಳನ್ನು ಅಚ್ಚು ಹಾಕಿ ಒದಗಿಸಬಹುದು. ಈ ನೋಟುಗಳು ಸರ್ಕಾರೀ ನೌಕರರು, ಸೈನಿಕರು ಮತ್ತು ಯುದ್ಧ ಸಾಮಗ್ರಿಗಳನ್ನು ಸರಬರಾಜು ಮಾಡುವ ವರ್ತಕರು ಮೊದಲಾದವರ ಕೈ ಸೇರುವುವು. ಹೀಗೆ ದೇಶದಲ್ಲಿ ಹಣದ ಮೊತ್ತವು ಹೆಚ್ಚುವುದು. ಆದರೆ ಜನರಿಗೆ ಬೇಕಾದ ಸಾಮಾನುಗಳ ಸರಬರಾಜು ಹೆಚ್ಚುವುದಿಲ್ಲ. ಮಿತ ಪ್ರಮಾಣದಲ್ಲಿ ದೊರೆಯುವ ಪದಾರ್ಥಗಳನ್ನು ಕೊಳ್ಳಲು ಜನರು ಪೈಪೋಟಿ ಮಾಡುವುದರಿಂದ ಧಾರಣೆವಾಸಿ ಏರುವುದು. ಹಣದ ಚಲಾವಣೆ ಇನ್ನೊಂದು ರೀತಿಯಲ್ಲಿ ಹೆಚ್ಚಬಹುದು. ತೆರಿಗೆ ಕೊಡುವುದಕ್ಕೂ ಸರ್ಕಾರೀ ಸಾಲಗಳಿಗೆ ಚಂದಾ ಕೊಡುವುದಕ್ಕೂ ಜನರು ಬ್ಯಾಂಕುಗಳಿಂದ ಸಾಲ ಪಡೆಯಬಹುದು. ಹೀಗೆ ಸಾಲ ಪಡೆದ ಹಣವನ್ನು ತಕ್ಷಣವೇ ಅವರು ನಾಣ್ಯ ನೋಟುಗಳ ಮೂಲಕ ಸಾಮಾನ್ಯವಾಗಿ ಹೊರಕ್ಕೆ ತೆಗೆದುಕೊಂಡು ಹೋಗುವುದಿಲ್ಲ. ಬ್ಯಾಂಕಿನಲ್ಲಿಯೇ ತಮ್ಮ ಹೆಸರಿನಲ್ಲಿ ಚಾಲ್ತಿಠೇವಣಾತಿಯಾ (ಡಿಪಾಸಿಟ್ಟಾ)ಗಿ ಇಡುವರು. ಇತರರಿಗೆ ಹಣಕೊಡಬೇಕಾದಾಗ ನೋಟುಗಳ ಬದಲು ಬ್ಯಾಂಕು ಚೆಕ್ಕುಗಳನ್ನು ಕೊಡುವರು.

ಚೆಕ್ಕುಗಳೂ ಒಂದು ಮಾದರಿಯ ಹಣ. ಬ್ಯಾಂಕು ವ್ಯವಸ್ಥೆಯು ಬಹಳವಾಗಿ ಮುಂದುವರಿದಿರುವ ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ನಾಣ್ಯ ನೋಟುಗಳಿಗಿರುವ ಬೆಲೆ ಗೌರವಗಳು ಚೆಕ್ಕುಗಳಿಗೂ ಇವೆ. ಚೆಕ್ಕುಗಳೂ ನೋಟುಗಳಂತೆ ಚಲಾವಣೆಗೆ ಬರುವುವು. ಹೀಗೆ ಜನರು ಬ್ಯಾಂಕುಗಳಿಂದ ಸಾಲ ಪಡೆಯುವುದರಿಂದ ದೇಶದಲ್ಲಿ ಹಣದ ಸರಬರಾಜು ಹೆಚ್ಚುವುದು. ಇದರ ಪರಿಣಾಮವಾಗಿ ಧಾರಣೆವಾಸಿ ಏರುವುದು. ಧಾರಣೆವಾಸಿ ಏರಿದರೆ ಹಣದ ಬೆಲೆ ಇಳಿಯುತ್ತೆ. ಹಿಂದೆ ಒಂದು ರೂಪಾಯಿಗೆ ಬರುತ್ತಿದ್ದ ಪದಾರ್ಥಕ್ಕೆ ಈಗ ಎರಡು ಅಥವಾ ಮೂರು ರೂಪಾಯಿಗಳನ್ನು ಕೊಡಬೇಕಾಗುವುದು. ಅಂದರೆ ರೂಪಾಯಿನ ನಿಜವಾದ ಬೆಲೆ ಹಿಂದೆ ಇದ್ದುದರ ಅರ್ಧ ಅಥವಾ ಮೂರನೇ ಒಂದು ಭಾಗ ಮಾತ್ರ.

ಹಣದ ಉಬ್ಬರವು ಸಾಮಾನ್ಯ ಜನರಿಗೆ ಬೇಕಾದ ಭೋಗಸಾಧನಗಳನ್ನು ಕಡಮೆಮಾಡುತ್ತದೆ. ಮೊದಲಿನಷ್ಟೇ ಹಣವನ್ನು ವೆಚ್ಚಮಾಡಲು ಜನರಿಗೆ ಅವಕಾಶವಿದ್ದರೂ, ಅದೇ ಹಣಕ್ಕೆ ಈಗ ದೊರೆಯುವ ಪದಾರ್ಥಗಳ ಪರಿಮಾಣ ಕಡಮೆ. ಮೊದಲು ಒಂದು ರೂಪಾಯಿಗೆ 8 ಸೇರು ಅಕ್ಕಿ ಸಿಕ್ಕುತ್ತಿದ್ದರೆ, ಈಗ ದೊರೆಯುವುದು 3 ಅಥವಾ 4 ಸೇರು. ಮೊದಲು 8 ಆಣೆಗೆ ಒಂದು ಗಜ ಕಾಕಿಬಟ್ಟೆ ಸಿಕ್ಕುತ್ತಿದ್ದರೆ ಈಗ ಅದೇ ಹಣಕ್ಕೆ ಕಾಲು ಗಜ ಸಿಕ್ಕುವುದೇ ಕಷ್ಟ. ಮೊದಲಿನ ಪರಿಮಾಣದಲ್ಲಿಯೇ ಪದಾರ್ಥಗಳನ್ನು ಕೊಳ್ಳಬೇಕಾದರೆ ಮೊದಲಿನ ಹಣಕ್ಕೆ ಎರಡರಷ್ಟೋ ಮೂರರಷ್ಟೋ ಈಗ ವೆಚ್ಚಮಾಡಬೇಕು. ಆದರೆ ಬಹು ಮಂದಿಯ ಆದಾಯ ಮಾತ್ರ ಹೆಚ್ಚುವುದಿಲ್ಲ. ಆದ್ಯ

ದರಿಂದ ಜನರು ಕಡಮೆ ಪರಿಮಿತಿಯಲ್ಲಿ ಪದಾರ್ಥಗಳನ್ನು ಕೊಂಡು ತೃಪ್ತರಾಗಬೇಕು. ಹೀಗೆ ಯುದ್ಧ ಕೈಗಾರಿಕೆಗಳಿಗೆ ಹೆಚ್ಚು ಸಾಮುಗ್ರಿಗಳು ದೊರೆಯುವುವು.

ಯುದ್ಧಕ್ಕಾಗಿ ಹಣ ಒದಗಿಸುವುದಕ್ಕೆ ಹಣವನ್ನು ಉಬ್ಬಿಸುವುದು ಸೂಕ್ತವಾದ ಮಾರ್ಗವಲ್ಲ ಎನ್ನುವುದಕ್ಕೆ ಈ ಕಾರಣಗಳನ್ನು ಕೊಡಬಹುದು.

(i) ಇದರಿಂದ ಹಣವಂತರಿಗೆ ಸ್ವಲ್ಪ ತೊಂದರೆಯಾದರೆ ಬಡವರಿಗೆ ತೀರಾ ತೊಂದರೆಯಾಗುವುದು. ಧಾರಣೆವಾಸಿ 50% ರಷ್ಟು ಹೆಚ್ಚಿದರೂ ಹಣವಂತರು ಆ ಹೊರೆಯನ್ನು ಹೊರಬಲ್ಲರು, ಆದರೆ ಬಡವರು ಹೊರಲಾರರು. ಜೀವನಕ್ಕೆ ಅತಿ ಮುಖ್ಯವಾದ ಆಹಾರ ವಸ್ತುಗಳ ಮತ್ತು ಬಟ್ಟೆಯ ಬೆಲೆಗಳು ಅಧಿಕವಾಗಿ ಏರುವುದು ಖಂಡಿತ. ಆದರೆ ಇವುಗಳನ್ನು ಕೊಳ್ಳುವ ಪರಿಮಿತಿಯನ್ನು ಕಡಮೆ ಮಾಡಲು ಸಾಧ್ಯವಿಲ್ಲ. ಬಡವರ ವರಮಾನದ ಬಹುಭಾಗ ಹೊಟ್ಟೆಬಟ್ಟೆಗಾಗಿಯೇ ವೆಚ್ಚವಾಗುವುದರಿಂದ ಅವರಿಗೆ ಜೀವನ ಸಾಗಿಸುವುದು ಕಠಿನವಾಗುವುದು. ಹೀಗೆ ಬಡವರಿಗೆ ಕಷ್ಟವನ್ನುಂಟು ಮಾಡುವುದು ಸರ್ಕಾರದ ಆಯವ್ಯಯ ಶಾಸ್ತ್ರದ ನಿಯಮಗಳಿಗೆ ವಿರೋಧವಾಗಿದೆ.

(ii) ಬಡ್ಡಿ, ಮನೆಬಾಡಿಗೆ, ಪೆನ್ಷನ್, ಕೂಲಿ ಮತ್ತು ಸಂಬಳದಿಂದ ಜೀವಿಸುವ ಗೊತ್ತಾದ ವರಮಾನವುಳ್ಳವರಿಗೆ ಬಹಳ ತೊಂದರೆಯಾಗುತ್ತದೆ.

(iii) ಹಣದ ಉಬ್ಬರವು ಸಮಾಜದ ಮೇಲೆ ದುಷ್ಪರಿಣಾಮಕಾರಿಯಾಗುತ್ತವೆ. ವೆಚ್ಚವು ಬಹುವಾಗಿ ಏರುವುದರಿಂದ ಕೂಲಿಗಾರರು ಹೆಚ್ಚು ಕೂಲಿಯನ್ನು ಕೇಳುವರು. ಬಂಡವಾಳಗಾರರಿಗೂ ಕೂಲಿಗಾರರಿಗೂ ತಿಕ್ಕಾಟಹುಟ್ಟುವುದು. ಮುಷ್ಕರಗಳು

ಹೆಚ್ಚುವುವು. ಒಂದು ವೇಳೆ ಕೂಲಿಯನ್ನು ಹೆಚ್ಚಿಸಿದರೆ ಧಾರಣೆ ವಾಸಿ ಇನ್ನೂ ಹೆಚ್ಚುವುದು. ಪುನಃ ಕೂಲಿಗಾರರು ಹೆಚ್ಚು ಕೂಲಿಯನ್ನು ಕೇಳುವರು. ಇದು ಪರಿಹಾರವಾಗದ ಸಮಸ್ಯೆ. ಅದೂ ಅಲ್ಲದೆ ಸಾರ್ವಜನಿಕರಿಗೆ ರಾಷ್ಟ್ರದ ಬ್ಯಾಂಕಿನಲ್ಲೂ ಹಣದ ವ್ಯವಸ್ಥೆಯಲ್ಲೂ ನಂಬಿಕೆ ಕಡಮೆಯಾಗುವುದು. ಕೈಗಾರಿಕೆ ವ್ಯವಸ್ಥೆ ಹದಗೆಡಬಹುದು. ಹಣದ ಉಬ್ಬರದಿಂದ ಸರ್ಕಾರಕ್ಕೆ ಆಗುವ ಅನುಕೂಲ ಒಂದೇ. ಹೆಚ್ಚು ತೆರಿಗೆ ಹಾಕುವುದರಿಂದ ಉಂಟಾಗುವ ಪ್ರಜಾ ವಿರೋಧವನ್ನು ತಪ್ಪಿಸಿಕೊಳ್ಳಬಹುದು.

ಹೇಗಾದರೂ ಸ್ವಲ್ಪಮಟ್ಟಿನ ಹಣದ ಉಬ್ಬರವು ಅನಿವಾರ್ಯ. ಆದರೆ ಅದನ್ನು ಆದಷ್ಟು ಕಡಮೆ ಮಟ್ಟದಲ್ಲಿ ಇಡಬೇಕು.

(2) **ತೆರಿಗೆ :** ಯುದ್ಧಕ್ಕೆ ಬೇಕಾದ ಹಣದ ಉತ್ಪತ್ತಿಗೆ ತೆರಿಗೆ ಹಾಕುವುದು ಬಹು ಮುಖ್ಯವಾದ ಮಾರ್ಗ. ಯುದ್ಧ ಕಾಲದಲ್ಲಿ ಸರ್ಕಾರದ ವೆಚ್ಚವು ಶಾಂತಿ ಕಾಲದ ವೆಚ್ಚಕ್ಕಿಂತ ಹಲವು ಬಾರಿ ಹೆಚ್ಚುವುದರಿಂದ ತೆರಿಗೆಯ ಮೂಲಕವೇ ಹೆಚ್ಚು ಹಣವನ್ನು ಪಡೆಯಬೇಕು. ಆದುದರಿಂದ ಸರ್ಕಾರವು ಹಿಂದಿನ ತೆರಿಗೆಯ ದರಗಳನ್ನು ಹೆಚ್ಚಿಸುವುದಲ್ಲದೆ ಕೆಲವು ಹೊಸ ತೆರಿಗೆಗಳನ್ನೂ ಹಾಕಬೇಕಾಗುವುದು. ಆದಾಯತೆರಿಗೆ, ಆಮದುರಫ್ತುಗಳ ಮೇಲಿನ ಸುಂಕ, ಆಬ್ಕಾರಿಸುಂಕ—ಇವುಗಳ ದರ ಹೆಚ್ಚುವುದು. ಹೊಸ ತೆರಿಗೆಗಳಲ್ಲಿ ಮುಖ್ಯವಾದುದು ಅಧಿಕ ಲಾಭದ ತೆರಿಗೆ. ಯುದ್ಧ ಕಾಲದಲ್ಲಿ ಧಾರಣೆಗಳು ಬಹಳವಾಗಿ ಏರುವುದರಿಂದ ವ್ಯಾಪಾರಗಾರರಿಗೂ ಕೈಗಾರಿಕೆ ನಡೆಸುವವರಿಗೂ ಅತ್ಯಧಿಕ ಲಾಭವು ದೊರೆಯುವುದು. ಹೀಗೆ ಅನಾಯಾಸವಾಗಿ ಬಂದ ಲಾಭವನ್ನು ರಾಷ್ಟ್ರದ ರಕ್ಷಣೆಗೋಸ್ಕರ ಸರ್ಕಾರವು ವಸೂಲು

ಮಾಡುವುದು ನ್ಯಾಯವಾಗಿದೆ. ಈ ತೆರಿಗೆಯ ದರ ಬಹು ಅಧಿಕ ವಾಗಿರುವುದು. ಒಂದು ಮಿತಿ ಮೀರಿದ ಮೇಲೆ ಲಾಭವೆಲ್ಲಾ ತೆರಿಗೆಯ ರೂಪದಲ್ಲಿ ವಸೂಲಾಗುವುದು.

ಎಷ್ಟು ಅಧಿಕವಾಗಿ ತೆರಿಗೆ ಹಾಕಿದರೂ ಯುದ್ಧದ ವೆಚ್ಚಕ್ಕೆ ಬೇಕಾಗುವ ಹಣವನ್ನೆಲ್ಲ ತೆರಿಗೆಯಿಂದಲೇ ಒದಗಿಸುವುದು ಅಸಾಧ್ಯ. ಎಲ್ಲ ದೇಶಗಳಲ್ಲೂ ಬಹುಸಂಖ್ಯಾತರ ಆದಾಯವು ತೆರಿಗೆ, ಹಾಕುವ ಮಿತಿಗಿಂತ ಕೆಳಗೇ ಇರುತ್ತದೆ. ವರಮಾನದ ತೆರಿಗೆ, ಅಧಿಕಲಾಭದ ತೆರಿಗೆ, ಮತ್ತು ಪರೋಕ್ಷ ತೆರಿಗೆ—ಇವುಗಳೆಲ್ಲವೂ ಸೇರಿ ಯುದ್ಧವೆಚ್ಚಕ್ಕೆ ಬೇಕಾದ ಹಣದಲ್ಲಿ ಸುಮಾರು ಅರ್ಧದಷ್ಟು ಒದಗಬಹುದು. ಆದುದರಿಂದ ಉಳಿದ ಹಣವನ್ನು ಸಾಲ ಮಾಡಿ ಒದಗಿಸಬೇಕು. ಕೆಲವು ಮುಖ್ಯ ರಾಷ್ಟ್ರಗಳಲ್ಲಿ ತೆರಿಗೆಗಳಿಗಿಂತ ಎಷ್ಟು ಆದಾಯ ಬರುತ್ತಿದೆ ಎಂಬುದನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ವರ್ಷ	ಇಂಗ್ಲೆಂಡ್		ಅಮೆರಿಕಾ		ಜರ್ಮನಿ	
	ವೆಚ್ಚ	ತೆರಿಗೆಗಳಿಂದ ಆದಾಯ	ವೆಚ್ಚ	ತೆರಿಗೆಗಳಿಂದ ಆದಾಯ	ವೆಚ್ಚ	ತೆರಿಗೆಗಳಿಂದ ಆದಾಯ
1938-39	111.7	100.6	876.5	516.6	2855.0	1771.2
1939-40	190.4	113.2	912.7	538.7	4481.3	2357.5
1940-41	397.0	149.5	1277.5	760.7	6483.2	2722.1
1941-42	488.8	217.4	3249.2	1279.9	8465.0	3225.8
1942-43	574.0	292.2	7818.2	2228.2	9060.7	3500.0
1943-44	596.6	301.8	104041	3814.8		
	(ಕೋಟಿ ಪೌಂಡುಗಳು)		(ಕೋಟಿ ಡಾಲರುಗಳು)		(ಕೋಟಿ ಮಾರ್ಕ್‌ಗಳು)	

ಹೇಗಾದರೂ ಸಾಧ್ಯವಾದಷ್ಟು ಹಣವನ್ನು ತೆರಿಗೆಯ ಮೂಲಕವೇ ಪಡೆಯಲು ಸರ್ಕಾರವು ಪ್ರಯತ್ನಿಸಬೇಕು. ಹಣಕಾಸಿನ ನೀತಿ ಹೀಗಿರಬೇಕು: "ಬೆನ್ನು ಮುರಿಯುವ ಮಿತಿಯತನಕ ತೆರಿಗೆಯನ್ನು ಹೊರಿಸು. ಉಳಿದುದಕ್ಕೆ ಸಾಲಮಾಡು."

(3) **ಸಾಲ :** ತೆರಿಗೆಯ ಮೂಲಕವೇ ಎಲ್ಲ ಹಣವನ್ನು ಒದಗಿಸುವುದು ಅಸಾಧ್ಯವೆಂದು ಮೇಲೆ ಹೇಳಿದೆ. ಆದುದರಿಂದ ಸರ್ಕಾರವು ಸಾಲಮಾಡಬೇಕು. ಸಾಚಾಸಾಲಕ್ಕೂ ಹಣದ ಉಬ್ಬರದ ಸಾಲಕ್ಕೂ ವ್ಯತ್ಯಾಸವುಂಟು. ಸಾಚಾಸಾಲದಲ್ಲಿ ಸಾರ್ವಜನಿಕರು ಮೊದಲಿಗಿಂತ ಕಡಮೆ ವೆಚ್ಚಮಾಡಿ, ಉಳಿಯುವ ಹಣವನ್ನು ಸರ್ಕಾರಕ್ಕೆ ಸಾಲವಾಗಿ ಕೊಡುತ್ತಾರೆ. ಹಣದ ಉಬ್ಬರದ ಸಾಲದಲ್ಲಿ ಸಾರ್ವಜನಿಕರು ತಮ್ಮ ವೆಚ್ಚವನ್ನು ಕಡಮೆಮಾಡದೆ, ಬ್ಯಾಂಕುಗಳಿಂದ ಸಾಲತೆಗೆದು ಸರ್ಕಾರಕ್ಕೆ ಸಾಲಕೊಡುತ್ತಾರೆ. ಪ್ರಜೆಗಳು ಸಾಲವನ್ನು ತಮ್ಮ ಸ್ವಂತ ಪ್ರೇರಣೆಯಿಂದಲೇ ಕೊಡಬಹುದು ಅಥವಾ ಸರ್ಕಾರದ ಒತ್ತಾಯಕ್ಕೆ ಒಳಪಟ್ಟು ಕೊಡಬಹುದು. ಒತ್ತಾಯದ ಸಾಲವು ತೆರಿಗೆಗೂ ಸಾಲಕ್ಕೂ ಮಧ್ಯಸ್ಥವಾಗಿದೆ. ಸಾಧ್ಯವಾದ ಮಟ್ಟಿಗೂ ಸಾಲವು ಜನರ ಸ್ವಂತ ಪ್ರೇರಣೆಯಿಂದಲೇ ಒದಗಬೇಕು. ಆಗ ಜನರಲ್ಲಿ ಅತೃಪ್ತಿಯುಂಟಾಗುವುದಿಲ್ಲ. ಒತ್ತಾಯಪಡಿಸುವುದು ಪ್ರಜಾವಿರೋಧಕ್ಕೆ ಕಾರಣವಾಗುವುದು. ಆದರೆ ಸರ್ಕಾರಕ್ಕೆ ಬೇಕಾದಷ್ಟು ಹಣವನ್ನು ಪ್ರಜೆಗಳು ಸಾಲವಾಗಿ ಕೊಡದೆಹೋದರೆ, ಹಣದ ಉಬ್ಬರವನ್ನು ತಪ್ಪಿಸುವುದಕ್ಕೋಸ್ಕರ ಸರ್ಕಾರವು ಬಲಾತ್ಕಾರವಾಗಿ ಸಾಲಪಡೆಯ ಬೇಕಾಗುವುದು. ಇಂಗ್ಲೆಂಡಿನಲ್ಲಿ ಲಾರ್ಡ್ ಕೇನ್ಸ್ ಎಂಬ ಅರ್ಥಶಾಸ್ತ್ರಜ್ಞನು ಒತ್ತಾಯದ ಗಳಿತಕ್ಕೆ ಒಂದು ಯೋಜನೆಯನ್ನು ಸೂಚಿಸಿದನು. ಅದೇನೆಂದರೆ: ಕೂಲಿ

ಗಾರರಿಗೆ ಕೊಡಬೇಕಾದ ವೇತನದಲ್ಲಿ ಒಂದು ಭಾಗವನ್ನು ಹಿಡಿದುಕೊಂಡು, ಅದನ್ನು ಒಟ್ಟುಗೂಡಿಸಿ, ಯುದ್ಧಾನಂತರ ಅವರಿಗೆ ವಾಪಸುಕೊಡುವುದು. ಆದರೆ ಈ ಯೋಜನೆಯನ್ನು ಆಚರಣೆಗೆ ತಂದಿಲ್ಲ.

ಸಾಲವನ್ನು ದೇಶದ ಒಳಗೇ ಪಡೆಯಬಹುದು ಅಥವಾ ಹೊರದೇಶಗಳಿಂದ ಪಡೆಯಬಹುದು. ಸಾಲ ಅಲ್ಪವಾಯಿದೆಯದಾಗಿರಬಹುದು. ಸಾಮಾನ್ಯವಾಗಿ ಸರ್ಕಾರವು ಖಜಾನೆಹುಂಡಿಯನ್ನು ಮಾರಿ ಅಲ್ಪವಾಯಿದೆ ಸಾಲವನ್ನು ಪಡೆಯುತ್ತದೆ.

ಯುದ್ಧ ಕಾಲದಲ್ಲಿ ಸಾಲತೆಗೆಯುವುದರಿಂದ ಆಗುವ ಆರ್ಥಿಕ ಪರಿಣಾಮವೂ ತೆರಿಗೆ ಹಾಕುವುದರಿಂದಾಗುವ ಆರ್ಥಿಕಪರಿಣಾಮವೂ ಒಂದೇ. ಹಣವು ಪ್ರಜೆಗಳಿಂದ ಸರ್ಕಾರಕ್ಕೆ ವರ್ಗಾಯಿಸಲ್ಪಡುವುದು. ಆದರೆ ಜನರ ಮನಸ್ಸಿನ ಮೇಲೆ ಆಗುವ ಪರಿಣಾಮ ಬೇರೆ ಬೇರೆಯಾಗಿರುತ್ತದೆ. ಸಾಲಕೊಟ್ಟರೆ ಸಾಲದ ಮೊಬಲಗನ್ನೂ ಬಡ್ಡಿಯನ್ನೂ ಪಡೆಯುವ ಹಕ್ಕು ಇದೆ. ತೆರಿಗೆ ರೂಪದಲ್ಲಿ ಕೊಟ್ಟ ಹಣ ವಾಪಸಾಗುವುದಿಲ್ಲ. ಅಲ್ಲದೆ ಅದು ಬಲಾತ್ಕಾರವಾಗಿ ಪಡೆದಹಣ. ರಕ್ಷಣಾಸಾಲಕ್ಕೆ ಚಂದಾ ಕೊಡುವುದು ಪ್ರತಿಯೊಬ್ಬನ ಇಚ್ಛೆಗೂ ಸೇರಿದ್ದು. ಆದರೆ ಸರ್ಕಾರದ ದೃಷ್ಟಿಯಿಂದ ಸಾಲಮಾಡುವುದರಲ್ಲಿ ಕೆಲವು ನ್ಯೂನತೆಗಳುಂಟು. ಸಾಲವನ್ನು ತೀರಿಸುವುದೇ ಒಂದು ದೊಡ್ಡ ಸಮಸ್ಯೆ. ಪ್ರತಿ ವರ್ಷವೂ ಬಡ್ಡಿಯನ್ನು ತೆರುವುದು ಎರಡನೆಯ ಸಮಸ್ಯೆ. ಇದಕ್ಕೋಸ್ಕರ ಯುದ್ಧಾನಂತರದಲ್ಲಿಯೂ ಹೊಸ ತೆರಿಗೆಗಳನ್ನು ಹಾಕಬೇಕಾಗುವುದು.

ಪ್ರಜೆಗಳು ತಮ್ಮ ಕೈಲಾದಷ್ಟು ಹಣವನ್ನು ಸಾಲಕೊಡುವಂತೆ ಅವರನ್ನು ಪ್ರೇರೇಪಿಸಬೇಕು. ಹೆಚ್ಚುದರದ ಬಡ್ಡಿಕೊಡು

ವುದು, ಸಾಲದಪತ್ರಗಳನ್ನು ಮುಖಬೆಲೆಗಿಂತ ಕಡಮೆಯಾಗಿ ಮಾರುವುದು, ಅವುಗಳನ್ನು ವಾಪಸ್ಸು ಮಾಡುವಾಗ ಮುಖಬೆಲೆಗಿಂತ ಹೆಚ್ಚಿಗೆ ಹಣ ಕೊಡುವುದು ಮುಂತಾದ ಆಕರ್ಷಣೀಯವಾದ ಷರತ್ತುಗಳನ್ನು ನಿಯಮಿಸಬೇಕು. ಬೇರೆಬೇರೆ ಪಂಗಡದ ಜನರಿಗೆ ಅನುಕೂಲವಾಗುವಂತೆ ನಾನಾಬಗೆಯ ಸಾಲದಪತ್ರಗಳನ್ನು ನಿರ್ಮಾಣಮಾಡಬೇಕು. ಅತಿಬಡವರೂ ಹಣಕೊಡಲು ಅನುಕೂಲವಾಗುವಂತೆ ಬಹಳ ಕಡಮೆ ಬೆಲೆಯ ಡಿಫೆನ್ಸ್ ಸೇವಿಂಗ್ಸ್ ಸ್ಟ್ಯಾಂಪುಗಳನ್ನು ಮಾರಬೇಕು. ಜನರಲ್ಲಿರುವ ದೇಶಾಭಿಮಾನವನ್ನು ಉಪಯೋಗಿಸಿಕೊಂಡು ಯುದ್ಧಕ್ಕಾಗಿ ಚಂದಾ ಕೊಡುವಂತೆ ಅವರನ್ನು ಹುರಿದುಂಬಿಸಬೇಕು. ಯುದ್ಧಕಾಲದಲ್ಲಿ ಸರ್ಕಾರಗಳು ಮಾಡಿರುವ ಸಾಲವು ಯಾವ ರೀತಿಯಲ್ಲಿ ಹೆಚ್ಚುತ್ತಿದೆ ಎಂಬುದನ್ನು ಈ ಪಟ್ಟಿಯಿಂದ ತಿಳಿಯಬಹುದು. ಆಯಾ ವರ್ಷದ ಅಂತ್ಯದಲ್ಲಿದ್ದ ಒಟ್ಟು ಸಾಲದ ವಿವರ ಹೀಗಿದೆ.

ವರ್ಷ	ಇಂಗ್ಲೆಂಡ್ (ಕೋಟಿ ಪೌಂಡುಗಳು)	ಅಮೆರಿಕಾ (ಕೋಟಿ ಡಾಲರುಗಳು)	ಜರ್ಮನಿ (ಕೋಟಿ ಮಾರ್ಕುಗಳು)
1939	881.5	4756.3	4587.6
1940	1090.2	5092.6	7949.4
1941	1256.2	6435.5	12848.2
1942	1637.0	11247.1	18563.2
1943 (ಜುಲೈ ವರೆಗೆ	1795.7	14531.6	21584.0

೬. ಇಂಡಿಯಾ ದೇಶದ ಯುದ್ಧದ ವೆಚ್ಚ

1939ನೆಯ ಸೆಪ್ಟಂಬರಿನಲ್ಲಿ ಜರ್ಮನಿಯ ಮೇಲೆ ಇಂಗ್ಲೆಂಡು ಯುದ್ಧವನ್ನು ಘೋಷಿಸಿದಾಗ ಇಂಡಿಯಾ ಸರ್ಕಾರವೂ ಯುದ್ಧ ಘೋಷಣೆಯನ್ನು ಮಾಡಿ ರಾಷ್ಟ್ರದ ರಕ್ಷಣಾವ್ಯವಸ್ಥೆಯನ್ನು ಬಲ ಪಡಿಸಬೇಕಾಯಿತು. 1941ನೆಯ ಡಿಸೆಂಬರಿನಲ್ಲಿ ಜಪಾನ್ ದೇಶವು ಯುದ್ಧಕ್ಕೆ ಪ್ರವೇಶಿಸಿದಮೇಲೆ ಇಂಡಿಯಾ ಸರ್ಕಾರವು ರಕ್ಷಣಾಬಲವನ್ನು ಬಹಳ ಅಧಿಕ ಪ್ರಮಾಣದಲ್ಲಿ ವಿಸ್ತರಿಸಿದೆ. ಜನರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದೂ, ಯುದ್ಧ ಸಾಮಗ್ರಿಗಳ ತಯಾರಿಕೆಯೂ ಒಂದನ್ನೊಂದು ಮೀರಿಸಿ ಅಧಿಕ ಪ್ರಮಾಣ ದಲ್ಲಿಯೂ ಬಹು ಹುರುಪಿನಿಂದಲೂ ನಡೆಯುತ್ತಿದೆ. ಈಗಾಗಲೇ ಸುಮಾರು 18ಲಕ್ಷ ಜನರು ಸೈನ್ಯಕ್ಕೆ ಸೇರಿದ್ದಾರೆ. ಆದುದರಿಂದ ಸರ್ಕಾರದ ರಕ್ಷಣಾ ವೆಚ್ಚವು ಬಹುವಾಗಿ ಹೆಚ್ಚುತ್ತಿದೆ. ಹೊಸ ಸರ್ಕಾರೀ ಇಲಾಖೆಗಳು ಏರ್ಪಟ್ಟಿರುವುದರಿಂದಲೂ, ಸರ್ಕಾರೀ ನೌಕರರಿಗೆ ತುಟ್ಟಿಭತ್ಯಕೊಡುವುದರಿಂದಲೂ, ಮತ್ತು ಸರ್ಕಾರವು ಕೊಳ್ಳುವ ಕಾಗದ ಮೊದಲಾದ ಪದಾರ್ಥಗಳ ಬೆಲೆ ಏರಿರುವುದ ರಿಂದಲೂ ಸರ್ಕಾರದ ಇತರ ವೆಚ್ಚವೂ ಹೆಚ್ಚಿದೆ. ವರ್ಷ ವರ್ಷಕ್ಕೆ ಸರ್ಕಾರದ ವೆಚ್ಚವು ಹೇಗೆ ಹೆಚ್ಚುತ್ತಿದೆ ಎಂಬುದನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ವರ್ಷ	ರಕ್ಷಣಾವೆಚ್ಚ ಕೋಟಿ ರೂ. ಗಳು	ಇತರ ವೆಚ್ಚ ಕೋಟಿ ರೂ. ಗಳು	ಒಟ್ಟು ವೆಚ್ಚ ಕೋಟಿ ರೂ. ಗಳು
1938-39	46.18	38.97	85.15
1939-40	49.54	45.03	94.57
1940-41	73.61	40.57	114.18
1941-42	103.93	43.33	147.26
1942-43	293.50	76.48	369.68
1943-44	303.94	82.98	383.92
ಯುದ್ಧ ಕಾಲದ ಮೊತ್ತ	821.52	288.09	1109.61

ತೆರಿಗೆಯ ಮೂಲಕವೇ ಸಾಧ್ಯವಾದಷ್ಟು ಹಣಪಡೆಯಲು ಸರ್ಕಾರವು ಸರ್ವಪ್ರಯತ್ನಮಾಡಿದೆ. ಯುದ್ಧವು ಆರಂಭವಾದಂದಿನಿಂದ ಸರ್ಕಾರವು ವಿಧಿಸಿರುವ ತೆರಿಗೆಗಳ ವಿವರ ಹೀಗಿದೆ:–

(i) ಹಳೆಯ ತೆರಿಗೆಗಳ ದರವನ್ನು ಹೆಚ್ಚಿಸಿದೆ. ವರಮಾನದ ತೆರಿಗೆ ಮತ್ತು ಕಂಪೆನಿಗಳ ಮೇಲಿನ ತೆರಿಗೆಗಳ ದರವನ್ನು ಏರಿಸಿದೆ. ಆಮದುರಫ್ತುಗಳ ಮೇಲಿನ ಸುಂಕ 20%ರಷ್ಟೂ, ಬೆಂಕಿಕಡ್ಡಿಯ ಮೇಲಿನ ಸುಂಕವು 100%ರಷ್ಟೂ, ಸಕ್ಕರೆಯ ಮೇಲಿನ ಸುಂಕವು ಹಂಡ್ರಡ್‌ವೈಟಗೆ 2ರೂ. ನಿಂದ 3ರೂ. ಗೂ. ಪೆಟ್ರೋಲಿನ ಮೇಲಿನ ಸುಂಕ ಗ್ಯಾಲನ್ನಿಗೆ 10 ಆಣೆಯಿಂದ 15 ಆಣೆಗೂ ಹೆಚ್ಚಿವೆ.

(ii) ಸರ್ಕಾರವು ಯುದ್ಧಕಾಲದಲ್ಲಿ ಅನೇಕ ಹೊಸ ತೆರಿಗೆಗಳನ್ನು ವಿಧಿಸಿದೆ. ಇವುಗಳಲ್ಲಿ ಬಹುಮುಖ್ಯವಾದುದು. ಅಧಿಕ ಲಾಭದ ತೆರಿಗೆ. ಈ ತೆರಿಗೆಯ ದರ 1940–41ರಲ್ಲಿ 50% ಇತ್ತು 1941–42ರಲ್ಲಿ 66⅔%ಕ್ಕೆ ಏರಿಸಲಾಯಿತು. ಹೊಗೆ

ಸೊಪ್ಪು, ರಬ್ಬರ್ ಟೈರುಟ್ಯೂಬುಗಳು, ವನಸ್ಪತಿತುಪ್ಪ, ಕಾಫೀ ಬೀಜ ಮತ್ತು ಅಡಕೆ ಇವುಗಳ ಮೇಲೆ ಹೊಸದಾಗಿ ಸುಂಕವನ್ನು ಹಾಕಿದೆ.

(iii) ಅಂಚೆ ಮತ್ತು ಟೆಲಿಫೋನ್ ದರಗಳನ್ನೂ ರೈಲ್ವೆ ದರಗಳನ್ನೂ ಹೆಚ್ಚಿಸಿದೆ.

ಈ ತೆರಿಗೆಗಳಿಂದ ಸರ್ಕಾರದ ಆದಾಯವು ಯಾವ ರೀತಿಯಲ್ಲಿ ಹೆಚ್ಚಿದೆ ಎಂಬುದನ್ನು ಈ ಪಟ್ಟಿಯಿಂದ ತಿಳಿಯಬಹುದು.

ವರ್ಷ	ವರಮಾನದ ಮತ್ತು ಕಂಪೆನಿ ತೆರಿಗೆ	ಅಧಿಕ ಲಾಭದ ತೆರಿಗೆ	ಆಮದು ರಪ್ತುಗಳ ಮೇಲಿನ ಸುಂಕ	ಆಬ್ಕಾರಿ ಸುಂಕ	ಅಂಚೆ ಮತ್ತು ತಂತಿ ಇಲಾಖೆಯ ನಿವ್ವಳ ಆದಾಯ	ರೈಲ್ವೆ ಇಲಾಖೆಯ ನಿವ್ವಳ ಆದಾಯ	ಒಟ್ಟು ಆದಾಯ
			ಕೋಟಿ ರೂಪಾಯಿಗಳು				
1938-39	17.28	——	40.50	8.70	0.19	1.37	84.50
1939-40	17.96	——	46.00	6.52	0.89	4.33	94.57
1940-41	25.93	3.00	37.30	8.50	1.25	12.16	99.88
1941-42	44.00	8.00	37.89	12.30	3.41	20.17	134.57
1942-43	72.00	20.00	32.35	12.65	5.58	20.13	176.76
1943-47	138.00	62.25	25.65	25.65	9.38	32.27	254.50
			ಯುದ್ಧ ವರ್ಷಗಳ ಒಟ್ಟು ಆದಾಯ				760.28

1939-40 ರಿಂದ 1943-44 ಅಂತ್ಯದವರೆಗೆ ಸರ್ಕಾರದ ಒಟ್ಟು ವೆಚ್ಚವು 1109.60 ಕೋಟಿ ರೂಪಾಯಿಗಳು. ಇದೇ ಅವಧಿಯಲ್ಲಿ ತೆರಿಗೆ, ರೈಲ್ವೆ ಮತ್ತು ಅಂಚೆ ಇಲಾಖೆಗಳಿಂದ ಒಟ್ಟು 760.28 ಕೋಟಿ ರೂಪಾಯಿಗಳು ಒದಗಿದೆ. ಉಳಿದ ಹಣಕ್ಕೆ ಸರ್ಕಾರವು ಜನರಿಂದ ಸಾಲ ತೆಗೆದಿದೆ. ಜನಗಳಿಗೆ ಮನವೊಪ್ಪುವಂಥ ಬೇರೆಬೇರೆ ವಿಧವಾದ ಸಾಲದ ಪತ್ರಗಳನ್ನು ಸರ್ಕಾರವು ಮಾರುತ್ತಿದೆ. ಇವುಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಿದೆ.

(i) ಬಡ್ಡಿಯಿಲ್ಲದ 3 ವರ್ಷ ಅವಧಿಯ ರಕ್ಷಣಾಪತ್ರಗಳು.

(ii) 6 ವರ್ಷದ ರಕ್ಷಣಾಪತ್ರಗಳು.

(iii) 10 ವರ್ಷದ ರಕ್ಷಣಾಗಳಿಕೆ ಪತ್ರಗಳು. ಇದು ಅಲ್ಪ ಆದಾಯದವರಿಗೂ ಹಣಕೂಡಿಡಲು ಅನುಕೂಲವಾಗಿದೆ. ಇವರು ಅಲ್ಪ ಬೆಲೆಯ ರಕ್ಷಣಾ ಸ್ಟಾಂಪುಗಳನ್ನು ಕೊಳ್ಳುವುದರ ಮೂಲಕ ಹಣವನ್ನು ಕೂಡಿಡಬಹುದು.

(iv) ಸರ್ಕಾರದವರು ಅಂಚೆ ಕಛೇರಿಗಳಲ್ಲಿ ರಕ್ಷಣಾಗಳಿಕೆಗೆ ತಕ್ಕ ಏರ್ಪಾಡು ಮಾಡಿರುತ್ತಾರೆ.

(v) ವರ್ಷಕ್ಕೆ 1500-2000ರೂ. ವರಮಾನ ಬರುವವರೂ ಮತ್ತು ಅಧಿಕ ಲಾಭದ ತೆರಿಗೆ ಕೊಡುವವರೂ ಸಾಲಕ್ಕೆ ಚಂದಾ ಕೊಡುವಂತೆ ಅನೇಕ ರಿಯಾಯಿತಿಗಳನ್ನು ಸರ್ಕಾರ ತೋರಿಸಿದೆ.

(vi) ದಾನಗಳನ್ನು ಸ್ವೀಕರಿಸುವುದಕ್ಕೆ ವೈಸರಾಯರ ಯುದ್ಧ ನಿಧಿಯು ಏರ್ಪಟ್ಟಿದೆ. 1943ನೆಯ ನವೆಂಬರಿನವರೆಗೆ 9,53,44,607 ರೂಗಳು, ಈ ನಿಧಿಗೆ ಶೇಖರವಾಗಿದೆ. ಮೈಸೂರು ಸಂಸ್ಥಾನವು 1943 ನೇ ಅಕ್ಟೋಬರಿನವರೆಗೆ 43,51,000 ರೂ. ಗಳನ್ನು ಈ ನಿಧಿಗೆ ಕೊಟ್ಟಿದೆ.

ಜನರು ಹಣವನ್ನು ಹೆಚ್ಚಾಗಿ ಕೂಡಿಸಿ, ರಕ್ಷಣಾಸಾಲ ಪತ್ರಗಳನ್ನು ಕೊಳ್ಳುವಂತೆ ಪ್ರೇರೇಪಿಸಲು ಅಗಾಧವಾದ ಚಳವಳಿ ನಡೆಯುತ್ತಿದೆ. ರಾಷ್ಟ್ರೀಯ ರಕ್ಷಣಾಬಲದ ಸಂಸ್ಥೆಯು ಈ ಚಳವಳಿಯನ್ನು ಬಹುಹುರುಪಿನಿಂದ ನಡೆಸುತ್ತಿದೆ.

ಇಲ್ಲಿಯವರೆಗೆ ಸರ್ಕಾರವು ಒಟ್ಟು 547 ಕೋಟಿ ರೂ.ಗಳನ್ನು ಸಾಲವಾಗಿಪಡೆದಿದೆ.

ಇಂಡಿಯಾ ಸರ್ಕಾರದ ವೆಚ್ಚವನ್ನು ಗಣನೆಗೆ ತೆಗೆದುಕೊಂಡರೆ, ಸರ್ಕಾರದ ಹಣಕಾಸಿನ ನೀತಿಯು ಬಹಳ ಸಮರ್ಪಕವಾಗಿದೆ. 1939–40 ರಿಂದ 1943–44ರ ಅಂತ್ಯದವರೆಗೆ ಸರ್ಕಾರವು ವೆಚ್ಚಮಾಡಿರುವ ಒಟ್ಟು 1109.60 ಕೋಟಿ ರೂಗಳ ಪೈಕಿ 760.28 ಕೋಟಿ ರೂಗಳನ್ನು, ಅಂದರೆ ಸುಮಾರು 70% ಭಾಗವನ್ನು, ತೆರಿಗೆಗಳ ರೂಪದಲ್ಲಿ ಪಡೆದಿದೆ. ಉಳಿದ ವೆಚ್ಚಕ್ಕೆ ಸರ್ಕಾರವು ಸಾಲವಾಗಿ ಎತ್ತಿರುವ ಹಣ ಯಥೇಚ್ಛವಾಗಿದೆ.

ವಾಸ್ತವವಾದ ಕಷ್ಟವೇನೆಂದರೆ ಇಂಡಿಯಾ ಸರ್ಕಾರವು ಇಂಗ್ಲೆಂಡ್ ಸರ್ಕಾರದ ಪರವಾಗಿ ವೆಚ್ಚ ಮಾಡಬೇಕಾಗಿದೆ. ಯುದ್ಧಕ್ಕಾಗಿ ಇಂಡಿಯಾ ಮತ್ತು ಬ್ರಿಟಿಷ್ ಸರ್ಕಾರಗಳು ಅನೇಕ ಜಂಟಿ ಕಾರ್ಯಕ್ರಮಗಳನ್ನು (Joint War Measures) ಕೈಗೊಂಡಿವೆ. ಇಂಡಿಯಾ ದೇಶದಲ್ಲೂ ಮತ್ತು ಹೊರಗೂ ಇರುವ ಬ್ರಿಟಿಷ್ ಸರ್ಕಾರದ ಸೈನ್ಯಕ್ಕೆ ಆಹಾರ, ಬಟ್ಟೆ ಮತ್ತು ಯುದ್ಧ ಸಾಮಗ್ರಿಗಳನ್ನು ಇಂಡಿಯಾ ಸರ್ಕಾರವೇ ಸರಬರಾಜು ಮಾಡುತ್ತಿವೆ. 1939-40 ರಿಂದ 1943-1944ರ ಅಂತ್ಯದವರೆಗೆ ಇಂಡಿಯಾ ಸರ್ಕಾರವು ಬ್ರಿಟಿಷ್ ಸರ್ಕಾರದ ಪರವಾಗಿ 926 ಕೋಟಿ ರೂಗಳನ್ನು ವೆಚ್ಚ ಮಾಡಿದೆ. ಈ ವೆಚ್ಚವನ್ನು ಇಂಗ್ಲೆಂಡಿನ ಸರ್ಕಾರವು ವಹಿಸಿಕೊಳ್ಳುವುದರಲ್ಲಿ

ಸಂಶಯವಿಲ್ಲ. ಆದರೆ ಇಂಗ್ಲೆಂಡಿನ ಸರ್ಕಾರವು ಹಣ ಕೊಡುವುದು ಪೌಂಡ್ ಸ್ಟರ್ಲಿಂಗ್‌ನಲ್ಲಿ. ನಮ್ಮ ದೇಶದಲ್ಲಿ ರೂಪಾಯಿ ಹೇಗೆ ನಾಣ್ಯವೋ ಹಾಗೆಯೇ ಇಂಗ್ಲೆಂಡಿನಲ್ಲಿ ಸ್ಟರ್ಲಿಂಗ್ ನಾಣ್ಯವಾಗಿದೆ. ಸ್ಟರ್ಲಿಂಗ್ ನಮ್ಮ ದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯವಲ್ಲ. ಇಂಗ್ಲೆಂಡಿನ ಸರ್ಕಾರಕ್ಕೆ ಸಾಮಗ್ರಿಗಳನ್ನು ಒದಗಿಸಿ ಕೊಟ್ಟು ಅವರಿಗಾಗಿ ಅನೇಕ ವಿಧವಾದ ಕೆಲಸಕಾರ್ಯಗಳನ್ನು ಮಾಡುತ್ತಿರುವ ನಮ್ಮ ದೇಶದ ಕಂಟ್ರಾಕ್ಟರುಗಳು, ವ್ಯಾಪಾರಗಾರರು, ಕೂಲಿಗಾರರು ಮೊದಲಾದವರಿಗೆ ಹಣವನ್ನು ರೂಪಾಯಿಯಲ್ಲಿ ಕೊಡಬೇಕು. ಆದುದರಿಂದ ಇಂಡಿಯಾ ಸರ್ಕಾರವು ಸ್ಟರ್ಲಿಂಗನ್ನು ರೂಪಾಯಿಗೆ ಪರಿವರ್ತನೆ ಮಾಡುವ ಜವಾಬ್ದಾರಿಯನ್ನು ಹೊತ್ತಿದೆ. ಇಂಡಿಯಾ ರಿಸರ್ವ್ ಬ್ಯಾಂಕಿನ ಶಾಸನದ ಪ್ರಕಾರ ರಿಸರ್ವ್ ಬ್ಯಾಂಕು 1 ರೂಪಾಯಿಗೆ 1 ಷಿ 6 ಪೆನ್ನಿ ದರದಂತೆ ಎಷ್ಟು ಹೆಚ್ಚಿನ ಪ್ರಮಾಣದಲ್ಲಿಯಾದರೂ ಸ್ಟರ್ಲಿಂಗಿಗೆ ರೂಪಾಯಿಯನ್ನೂ, ರೂಪಾಯಿಗೆ ಸ್ಟರ್ಲಿಂಗನ್ನೂ ಕೊಡಬೇಕು. ಆದುದರಿಂದ ಸ್ಟರ್ಲಿಂಗಿನ ಆಧಾರದ ಮೇಲೆ ರಿಸರ್ವ್ ಬ್ಯಾಂಕು ನೋಟುಗಳನ್ನು ಅಚ್ಚುಮಾಡಿಕೊಡಲು ಉಪಕ್ರಮಿಸಿತು. ನಮ್ಮ ದೇಶದಲ್ಲಿ ನೋಟುಗಳ ಚಲಾವಣೆ ಅಧಿಕವಾಗುವುದಕ್ಕೆ ಇದು ಮುಖ್ಯ ಕಾರಣ. ಇನ್ನೊಂದು ಕಾರಣ ನಮ್ಮ ದೇಶದ ಆಮದಿಗಿಂತ ರಫ್ತು ಹೆಚ್ಚಾಗಿರುವುದು. ನಮಗೆ ಪರದೇಶದವರು ಕೊಡಬೇಕಾದ ಸ್ಟರ್ಲಿಂಗಿಗೆ ಬದಲು ಯಥಾಪ್ರಕಾರ ಹೊಸದಾಗಿ ರೂಪಾಯಿ ನೋಟುಗಳು ಚಲಾವಣೆಗೆ ಬರುತ್ತಿವೆ. ನಮ್ಮ ದೇಶದಲ್ಲಿ ನೋಟುಗಳ ಚಲಾವಣೆ 1–9–1939 ರಲ್ಲಿ 172.44 ಕೋಟಿ ರೂಗಳಿದ್ದು, 10-3-44 ರಲ್ಲಿ 883.42 ಕೋಟಿ ರೂ.ಗಳಿಗೆ ಏರಿತು. ಇದೇ ಅವಧಿಯಲ್ಲಿ

ರಿಸರ್ವ್ ಬ್ಯಾಂಕಿನ ಸ್ಟರ್ಲಿಂಗ್ ಶೇವಣಿಯು 59.5 ಕೋಟಿ ರೂ. ಗಳಿಂದ 776.84 ಕೋಟಿ ರೂ. ಗಳಿಗೆ ಹೆಚ್ಚಿತು.

ಈ ರೀತಿ ಹಣವನ್ನು ಒದಗಿಸುವುದರ ಪರಿಣಾಮವಾಗಿ ನಮ್ಮ ದೇಶದಲ್ಲಿ ಹಣದ ಉಬ್ಬರ ಉಂಟಾಯಿತು. ಧಾರಣೆವಾಸಿ ಅಪಾರವಾಗಿ ಹೆಚ್ಚಿದೆ. ಇದರಿಂದ ಜನಸಾಮಾನ್ಯಕ್ಕೆ ಬಹಳ ತೊಂದರೆಯಾಗಿದೆ. ಹಣದ ಉಬ್ಬರವನ್ನು ತಪ್ಪಿಸಲು ಸರ್ಕಾರವು ಇಂಗ್ಲೆಂಡಿನಲ್ಲಿ ಮಾಡಿದ್ದ 469 ಕೋಟಿ. ರೂ. ಗಳಷ್ಟು ಸ್ಟರ್ಲಿಂಗ್ ಸಾಲದ ಬಾಬತು ಸುಮಾರು 455 ಕೋಟಿ ರೂ.ಗಳನ್ನು ತನ್ನಲ್ಲಿ ಶೇಖರವಾಗುತ್ತಿದ್ದ ಸ್ಟರ್ಲಿಂಗಿನ ಮೂಲಕ ತೀರಿಸಿದೆ. ಇದರಿಂದ ಹಣದ ಉಬ್ಬರವು ಸ್ವಲ್ಪ ಮಟ್ಟಿಗೆ ತಡೆಯಲ್ಪಟ್ಟಿದೆ ಎಂದು ಹೇಳಬಹುದು.

ಇಂಡಿಯಾ ದೇಶದಲ್ಲಿ ಉಂಟಾಗಿರುವ ಹಣದ ಉಬ್ಬರದ ವಿಚಾರವಾಗಿ ಒಂದು ಅಂಶವನ್ನು ನಾವು ಗಮನಿಸಬೇಕು. ಒಂದು ದೃಷ್ಟಿಯಿಂದ ನೋಡಿದರೆ ಇಂಡಿಯಾ ದೇಶದಲ್ಲಿ ಹಣದ ಉಬ್ಬರ ಇಲ್ಲವೆನ್ನಬೇಕು. ಅಂದರೆ ಚಿನ್ನ, ಬೆಳ್ಳಿ ಅಥವಾ ಇನ್ನು ಯಾವುದಾದರೂ ಶೇವಣಿಯ ಆಧಾರವಿಲ್ಲದೆಯೇ ರಿಸರ್ವ್ ಬ್ಯಾಂಕು ನೋಟುಗಳನ್ನು ಸುಮ್ಮನೆ ಅಚ್ಚುಮಾಡುತ್ತಿಲ್ಲ. ಪ್ರತಿಯೊಂದು ರೂಪಾಯಿ ನೋಟಿಗೂ ಚಿನ್ನ, ಬೆಳ್ಳಿ ಅಥವಾ ಸ್ಟರ್ಲಿಂಗ್ ಪತ್ರಗಳ ಆಧಾರವಿದ್ದೇ ಇದೆ. ಆದರೆ ಈ ದೇಶದಲ್ಲಿ ಹಣದ ಉಬ್ಬರ ಉಂಟು ಎಂದು ಹೇಳುವುದಕ್ಕೆ ಕಾರಣವೇನೆಂದರೆ ಧಾರಣೆವಾಸಿ ಬಹುವಾಗಿ ಹೆಚ್ಚಿರುವುದು. ಧಾರಣೆವಾಸಿ ಏರುವುದೇ ಹಣದ ಉಬ್ಬರವೆಂದು ಹಿಂದೆಯೇ ತಿಳಿದಿದ್ದೇವೆ.

ಇಂಗ್ಲೆಂಡಿನ ಸರ್ಕಾರವು ಇಂಡಿಯಾದೇಶದಲ್ಲಿ ವೆಚ್ಚ ಮಾಡಲು ಬೇಕಾದ ಹಣವನ್ನು ಇಂಡಿಯಾದೇಶದ ಜನರಿಂದಲೇ

ರೂಪಾಯಿ ಸಾಲದ ರೂಪದಲ್ಲಿ ಪಡೆಯಬೇಕಾಗಿತ್ತು. ಆಗ ಹಣದ ಉಬ್ಬರ ಉಂಟಾಗುತ್ತಿರಲಿಲ್ಲ. ಇಂಗ್ಲೆಂಡಿನ ಸರ್ಕಾರವು ಈ ಮಾರ್ಗವನ್ನು ಅವಲಂಬಿಸದೇ ಇರಲು ಕಾರಣವೇನೆಂದರೆ, ಆ ಸರ್ಕಾರಕ್ಕೆ ರಿಸರ್ವ್ ಬ್ಯಾಂಕಿನ ಮೂಲಕವಾಗಿ ನಿರಾಯಾಸವಾಗಿ ಸ್ಟರ್ಲಿಂಗಿಗೆ ಬದಲು ರೂಪಾಯಿಗಳು ಎಷ್ಟು ಪರಿಮಿತಿಯಲ್ಲಿಯಾದರೂ ದೊರೆಯುತ್ತಿರುವುದು.

ಈಗ ಇಂಡಿಯಾ ಸರ್ಕಾರವು ಎರಡು ಸಮಸ್ಯೆಗಳನ್ನು ಪರಿಹಾರಮಾಡಬೇಕು. ಮೊದಲಾಗಿ ಜನರ ಕೈಸೇರಿರುವ ಹೆಚ್ಚು ಹಣದಲ್ಲಿ ಸಾಧ್ಯವಾದಷ್ಟನ್ನು ಹಿಂದಕ್ಕೆ ಸೆಳೆದುಕೊಳ್ಳಬೇಕು. ಎರಡನೆಯದಾಗಿ, ಮುಂದೆಯಾದರೂ ನೋಟುಗಳ ಚಲಾವಣೆಯನ್ನು ಹೆಚ್ಚಿಸಬಾರದು. ಸರ್ಕಾರವು ಕೆಳಗೆ ಹೇಳುವ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

(i) ತೆರಿಗೆಗಳನ್ನು ಹೆಚ್ಚಿಸುವುದು, ಪದಾರ್ಥಗಳ ಬೆಲೆಗಳನ್ನು ಹತೋಟಿಗೊಳಪಡಿಸುವುದು, ಪಡಿಪದ್ಧತಿಯನ್ನೇರ್ಪಡಿಸುವುದು, ಒತ್ತಾಯವಾಗಿ ಸಾಲಪಡೆಯುವುದೇ ಮೊದಲಾದ ಹಣದ ಉಬ್ಬರವನ್ನು ಕುಗ್ಗಿಸುವ ಮಾರ್ಗಗಳನ್ನು ಜಾರಿಗೆ ತರಬೇಕು.

(ii) ಇಂಗ್ಲೆಂಡಿನ ಬಂಡವಾಳಗಾರರು ನಮ್ಮ ದೇಶದಲ್ಲಿ ಅನೇಕ ಕೈಗಾರಿಕೆ ಮತ್ತು ವ್ಯಾಪಾರಸಂಸ್ಥೆಗಳನ್ನು ಹೊಂದಿದ್ದಾರೆ. ಅಪಾರವಾಗಿ ಶೇಖರವಾಗುತ್ತಿರುವ ಸ್ಟರ್ಲಿಂಗಿನ ಮೂಲಕ ಆ ಬಂಡವಾಳಗಾರರಿಗೆ ಕೈಗಾರಿಕೆ ಮಂಡಲಿಗಳ ಬೆಲೆಯನ್ನು ಪಾವತಿಮಾಡಿ ಅವುಗಳನ್ನೆಲ್ಲಾ ನಮ್ಮವನ್ನಾಗಿ ಮಾಡಿಕೊಳ್ಳಬೇಕು. ಈ ವಿದೇಶೀ ಬಂಡವಾಳದ ಕೈಗಾರಿಕೆಗಳನ್ನು ನಮ್ಮವರು ಕೊಳ್ಳುವುದರಿಂದ ಸರ್ಕಾರಕ್ಕೆ ರೂಪಾಯಿಗಳು

ದೊರೆಯುತ್ತವೆ. ಸ್ಟರ್ಲಿಂಗಿಗೆ ಬದಲು ರೂಪಾಯಿ ನೋಟು ಗಳನ್ನು ಅಚ್ಚುಮಾಡುವುದು ತಪ್ಪುತ್ತದೆ.

(iii) ಇಂಗ್ಲೆಂಡಿನ ಸರ್ಕಾರವು ರೂಪಾಯಿ ಸಾಲವನ್ನು ಎತ್ತಬೇಕು.

(iv) ಇಂಡಿಯಾದೇಶದಲ್ಲಿ ಜನಸಾಮಾನ್ಯಕ್ಕೆ ಬೇಕಾದ ಪದಾರ್ಥಗಳ ತಯಾರಿಕೆ ಹೆಚ್ಚಬೇಕು. ಸಾಧ್ಯವಾದರೆ ಅವು ಗಳನ್ನು ಪರದೇಶಗಳಿಂದ ಆಮದು ಮಾಡಬೇಕು.

ಸರ್ಕಾರವು ಇವುಗಳಲ್ಲಿ ಮೊದಲನೆಯ ಸಲಹೆಯನ್ನು ಮಾತ್ರ ಕಾರ್ಯರಂಗಕ್ಕೆ ತಂದಿದೆ. ಸ್ಟರ್ಲಿಂಗ್ ಪತ್ರಗಳ ಕೂಡಿಕೆಯೂ ನೋಟುಗಳ ಚಲಾವಣೆಯೂ ಹೆಚ್ಚುತ್ತಲೇ ಇವೆ.

---

೭. ಬೆಲೆ ಹತೋಟಿ ಮತ್ತು ಆಹಾರ ಸಮಸ್ಯೆ

ಪ್ರತಿಯೊಬ್ಬರಿಗೂ ತಿಳಿದಿರುವಂತೆ ನಮ್ಮ ದೇಶದಲ್ಲಿ ಪದಾರ್ಥ ಗಳ ಬೆಲೆ ಬಹಳವಾಗಿ ಏರಿದೆ. ಯುದ್ಧದ ಆರಂಭದಲ್ಲಿ ಬೆಲೆ ಗಳು ಅಷ್ಟಾಗಿ ಏರಿರಲಿಲ್ಲ. 1942ನೆಯ ಮಧ್ಯಭಾಗದಿಂದ ಇವುಗಳ ಏರಿಕೆಯು ಥಟ್ಟನೆ ಹೆಚ್ಚಿದುದಲ್ಲದೆ ವೇಗವಾಗಿಯೂ,

ಅವಿಚ್ಛಿನ್ನವಾಗಿಯೂ ಸಾಗಿತು. ಯುದ್ಧ ಕಾಲದಲ್ಲಿ ಧಾರಣೆ ವಾಸಿ ಏರುವುದು ನಮ್ಮ ದೇಶಕ್ಕೆ ಮಾತ್ರ ವಿಶೇಷವಾದುದಲ್ಲ. ಆದರೆ ಇತರ ದೇಶಗಳಲ್ಲಿ ಧಾರಣೆವಾಸಿಯು ನಮ್ಮ ದೇಶದಲ್ಲಿ ಏರಿರುವಷ್ಟು ಏರಿಲ್ಲ. ಧಾರಣೆವಾಸಿ ಏರುವುದಕ್ಕೆ ಕಾರಣ ಗಳನ್ನೂ ಅದರಿಂದುಂಟಾಗುವ ಪರಿಣಾಮಗಳನ್ನೂ ವಿಚಾರ ಮಾಡೋಣ.

ಒಂದು ವಸ್ತುವಿನ ಬೆಲೆ ಏರುವುದಕ್ಕೆ ಎರಡು ಕಾರಣಗಳಾಗ ಬಹುದು. ಪೇಟೆಗೆ ಪದಾರ್ಥದ ಸರಬರಾಜು ಕಡಮೆಯಾಗ ಬಹುದು. ಅಥವಾ ಪದಾರ್ಥಕ್ಕೆ ಗಿರಾಕಿ ಹೆಚ್ಚಬಹುದು. ಉತ್ಪತ್ತಿಸಾಧನಗಳನ್ನು ಸಂಗ್ರಾಮ ಸಾಮಗ್ರಿಗಳ ತಯಾರಿಕೆ ಗಾಗಿ ಉಪಯೋಗಿಸುವುದರಿಂದಲೂ, ಆ ವಸ್ತುವಿನ ಆಮದು ಕುಗ್ಗುವುದರಿಂದಲೂ ಅಥವಾ ಅದರ ರಫ್ತು ಹೆಚ್ಚುವುದರಿಂದಲೂ ಆ ಪದಾರ್ಥದ ಸರಬರಾಜು ಕಡಮೆಯಾಗಬಹುದು. ಜನಸಂಖ್ಯೆ ಹೆಚ್ಚುವುದು, ಜನರ ಅಭಿರುಚಿ ಬದಲಾಯಿಸುವುದು. ಅಥವಾ ಜನರ ವರಮಾನ ಹೆಚ್ಚುವುದು ಇವು ಆ ಪದಾರ್ಥದ ಗಿರಾಕಿ ಹೆಚ್ಚಲು ಕಾರಣಗಳು. ಯಾವುದಾದರೂ ಒಂದು ವಸ್ತುವಿನ ಬೆಲೆ ಏರುವುದಕ್ಕೆ ಈ ಅಂಶಗಳು ಕಾರಣ. ಆದರೆ ಯುದ್ಧ ಕಾಲದ ಮುಖ್ಯ ಲಕ್ಷಣ ಒಂದು ಪದಾರ್ಥದ ಬೆಲೆ ಏರುವುದಲ್ಲ; ಅನೇಕ ಪದಾರ್ಥಗಳ ಬೆಲೆ ಏರುವುದು. ಹಣದ ಸರಬರಾಜು ಹೆಚ್ಚುವುದೇ ಇದಕ್ಕೆ ಮುಖ್ಯ ಕಾರಣ. ಯುದ್ಧಕಾಲದಲ್ಲಿ ಸರ್ಕಾರದ ವೆಚ್ಚವು ಅಪರಿಮಿತವಾಗಿ ಹೆಚ್ಚುವುದು. ಇದಕ್ಕೆ ಬೇಕಾದ ಹಣವನ್ನು ಸರ್ಕಾರವು ಪ್ರಜೆಗಳಿಂದಲೇ ತೆರಿಗೆ ಮತ್ತು ಸಾಲದ ಮೂಲಕ ಪಡೆಯಬೇಕು. ಸರ್ಕಾರದ ವೆಚ್ಚ ಹೆಚ್ಚು ವುದಕ್ಕೆ ತಕ್ಕಂತೆ ಜನರ ವೆಚ್ಚ ಅದೇ ಮಟ್ಟದಲ್ಲಿ ಕಡಮೆಯಾಗ

ಬೇಕು. ಆಗ ಜನರಿಗೆ ಬೇಕಾಧ ಪದಾರ್ಥಗಳ ಸರಬರಾಜು ಕಡಮೆಯಾಗುವುದಕ್ಕೆ ತಕ್ಕಂತೆ ಜನರ ಕೈಲಿರುವ ಹಣವೂ ಕಡಮೆಯಾಗುತ್ತದೆ. ಆದುದರಿಂದ ಧಾರಣೆವಾಸಿ ಏರುವುದಕ್ಕೆ ಮಾರ್ಗವಿರುವುದಿಲ್ಲ. ಹಾಗಿಲ್ಲದೆ ಸರ್ಕಾರವು ಯುದ್ಧವೆಚ್ಚಕ್ಕೆ ಬೇಕಾದ ಹಣವನ್ನು ಹೊಸದಾಗಿ ನೋಟುಗಳನ್ನು ಮುದ್ರಿಸಿ ಪಡೆದರೆ, ಧಾರಣೆವಾಸಿ ಏರುವುದು ಖಂಡಿತ. ಜನಗಳಿಗೆ ಬೇಕಾದ ವಸ್ತುಗಳ ಸರಬರಾಜು ಕಡಮೆಯಾಗುವುದು. ಆದರೆ ಅವರಲ್ಲಿರುವ ಹಣವು ಮಾತ್ರ ಕಡಮೆಯಾಗುವುದಿಲ್ಲ. ಆದುದರಿಂದ ಬೆಲೆಗಳು ಏರುವುವು.

ಧಾರಣೆವಾಸಿ ಏರಿಕೆ ಪ್ರಬಲವಾಗಲು ಜನರ ಮನೋಭಾವವು ಕಾರಣವಾಗುವುದು. ಪದಾರ್ಥಗಳ ಬೆಲೆ ಸ್ವಲ್ಪ ಏರಲು ಆರಂಭವಾದೊಡನೆ ಜನರ ಮನಸ್ಸಿನಲ್ಲಿ ಕಳವಳ ಹುಟ್ಟುವುದು. ಬೆಲೆಗಳು ಇನ್ನೂ ಅಧಿಕವಾಗಿ ಏರುವುವು, ಪದಾರ್ಥಗಳ ಸರಬರಾಜು ಬಹಳವಾಗಿ ಕಡಮೆಯಾಗುವುದು ಎಂದು ಹೆದರಿ ತಮಗೆ ವಾಸ್ತವವಾಗಿ ಬೇಕಾದುದಕ್ಕಿಂತ ಹೆಚ್ಚಾಗಿ ಪದಾರ್ಥಗಳನ್ನು ಕೊಳ್ಳಲು ಮುನ್ನುಗ್ಗುವರು. ವ್ಯಾಪಾರಗಾರರೂ ತಯಾರಿಸುವವರೂ ಅಧಿಕ ಲಾಭದ ಆಸೆಯಿಂದ ಸರಕುಗಳನ್ನು ಅಧಿಕ ಪ್ರಮಾಣದಲ್ಲಿ ಸಂಗ್ರಹಮಾಡುವರು. ಇದರಿಂದ ಸರಕುಗಳು ಪೇಟೆಗೆ ಬರುವುದು ಕಡಮೆಯಾಗಿ ಧಾರಣೆವಾಸಿ ಇನ್ನೂ ಅಧಿಕವಾಗಿ ಏರುವುವು.

ಒಂದು ದೇಶದಲ್ಲಿ ಉಪಯೋಗಿಸಿಕೊಳ್ಳದ ಉತ್ಪತ್ತಿಸಾಧನಗಳು ವಿಶೇಷವಾಗಿದ್ದಲ್ಲಿ ಪದಾರ್ಥಗಳ ಬೆಲೆ ಹೆಚ್ಚು ಏರುವುದಿಲ್ಲ. ಏಕೆಂದರೆ, ಸಾರ್ವಜನಕರಿಗೆ ಬೇಕಾದ ಪದಾರ್ಥಗಳು ಹೆಚ್ಚಿಗೆ ಪ್ರಮಾಣದಲ್ಲಿ ತಯಾರಾಗುವುದರಿಂದ ಬೆಲೆ ಹೆಚ್ಚಾಗಿ ಏರುವು

ದಕ್ಕೆ ಅವಕಾಶವಿರುವುದಿಲ್ಲ. ಹೀಗೆ ಆಗಬೇಕಾದರೆ ಆ ದೇಶದ ಜನರಿಗೆ ಈ ಸಾಧನಗಳನ್ನು ಉಪಯೋಗಿಸಿಕೊಳ್ಳುವ ಶಕ್ತಿ, ನಿಪುಣತೆ ಮತ್ತು ಸ್ವಾತಂತ್ರ್ಯವಿರಬೇಕು. ಸರ್ಕಾರವೂ ಕೂಡ ಈ ಉದ್ಯಮದಲ್ಲಿ ನೆರವಾಗಬೇಕು.

ಒಟ್ಟಿನಲ್ಲಿ ಧಾರಣೆವಾಸಿಗಳು ಏರುವುದು ಯುದ್ಧಕಾಲದ ಒಂದು ಸಾಮಾನ್ಯಲಕ್ಷಣ. ಧಾರಣೆವಾಸಿ ಯಾವ ಮಟ್ಟಕ್ಕೆ ಏರುವುದು ಎಂಬುದು ಸರ್ಕಾರದ ಹಣಕಾಸಿನ ನೀತಿಯನ್ನನು ಸರಿಸಿದೆ. ಕಳೆದ ಮಹಾಯುದ್ಧದಲ್ಲಿ ಅನೇಕ ರಾಷ್ಟ್ರಗಳು ತಮ್ಮ ಯುದ್ಧವೆಚ್ಚದ ಬಹುಭಾಗವನ್ನು ನೋಟುಗಳ ಉಬ್ಬರದ ಮೂಲಕವಾಗಿ ಒದಗಿಸಿದವು. ಇದರ ಪರಿಣಾಮವಾಗಿ ಧಾರಣೆಗಳು ಅತ್ಯಧಿಕವಾಗಿ ಏರಿದವು. ಆದರೆ ಈಗಿನ ಯುದ್ಧದಲ್ಲಿ ಈ ರಾಷ್ಟ್ರಗಳು ನೋಟುಗಳ ಉಬ್ಬರವನ್ನು ಕಡಮೆಮಾಡಿ, ರಕ್ಷಣೆಯ ವೆಚ್ಚದ ಬಹುಭಾಗವನ್ನು ತೆರಿಗೆ ಮತ್ತು ಸಾಲದಮೂಲಕ ವಸೂಲುಮಾಡುತ್ತಿವೆ. ಆದುದರಿಂದ ಧಾರಣೆಗಳು ಬಹುವಾಗಿ ಏರಿಲ್ಲ.

ಧಾರಣೆವಾಸಿಗಳ ಏರಿಕೆಯಿಂದ ಜನರಿಗೆ ಎಷ್ಟು ತೊಂದರೆಯಾಗುತ್ತದೆಯೆಂಬುದನ್ನು ಹಿಂದಿನ ಅಧ್ಯಾಯದಲ್ಲಿಯೇ ನೋಡಿದ್ದೇವೆ. ಅಲ್ಪವರಮಾನ ಬರುವವರ ಕಷ್ಟವಂತೂ ಹೇಳತೀರದು. ಬೆಲೆ ಏರಿಕೆಯಿಂದ ಸಮಾಜದ ಒಂದು ಪಂಗಡದ ಜನರಿಗೆ ಮಾತ್ರ ಅನುಕೂಲವುಂಟು. ಉತ್ಪತ್ತಿ ಕಾರ್ಯದಲ್ಲಿ ತೊಡಗಿರುವ ಬಂಡವಾಳಗಾರರ ಮತ್ತು ವ್ಯಾಪಾರಿಗಳ ಆದಾಯ ಬಹುವಾಗಿ ಹೆಚ್ಚಿದೆ. ಅತಿ ಲಾಭದ ಆಸೆಯು ಅಧಿಕವಾಗಿದೆ. ಸಮಾಜದಲ್ಲಿ ಬಂಡವಾಳಗಾರರ ಮತ್ತು ವ್ಯಾಪಾರಗಾರರ ಸಂಖ್ಯೆ ಬಹಳ ಕಡಮೆ. ಬಡವರೇ ಹೆಚ್ಚು ಮಂದಿ ಇರುವುದರಿಂದ ಸಮಾಜಕ್ಕೆ

ಅನುಕೂಲಕ್ಕಿಂತ ಹಾನಿ ಹೆಚ್ಚು. ಆದುದರಿಂದ ಸರ್ಕಾರವು ಧಾರಣೆವಾಸಿಯ ಮೇಲೆ ಹತೋಟಿ ಏರ್ಪಡಿಸಬೇಕು. ಜೀವನಕ್ಕೆ ಅಗತ್ಯವಾಗಿ ಬೇಕಾದ ಸಾಮಗ್ರಿಗಳು ಬಡವರಿಗೂ ಭಾಗ್ಯವಂತರಿಗೂ ಒಂದೇ ಸಮನಾಗಿ ನ್ಯಾಯ ಸಮ್ಮತವಾದ ದರದಲ್ಲಿಯೂ ಮತ್ತು ಸಾಕಷ್ಟು ಪ್ರಮಾಣದಲ್ಲಿಯೂ ದೊರೆಯುವಂತೆ ಮಾಡುವುದು ಸರ್ಕಾರದ ಮೊದಲನೆಯ ಕರ್ತವ್ಯ.

ಬೆಲೆಯ ಹತೋಟಿಯು ಕಷ್ಟಸಾಧ್ಯವಾದ ಕಾರ್ಯ. ಅದು ಅನೇಕ ಆಡಳಿತ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಯಾವ ಯಾವ ಪದಾರ್ಥಗಳ ಬೆಲೆಯನ್ನು ಹತೋಟಿಗೆ ಒಳಪಡಿಸಬೇಕು? ಯಾವ ಸಮಯದಲ್ಲಿ ಹತೋಟಿಯನ್ನೇರ್ಪಡಿಸಬೇಕು? ಹತೋಟಿಯ ರೀತಿ ಹೇಗಿರಬೇಕು? ಎಂಬಿವೇ ಕೆಲವು ಸಮಸ್ಯೆಗಳನ್ನು ಪರಿಹರಿಸಬೇಕು.

ಜೀವನಕ್ಕೆ ಬಹು ಉಪಯುಕ್ತವಾದ ಆಹಾರ ಮತ್ತು ಬಟ್ಟೆಯ ಬೆಲೆಯನ್ನು ಮೊದಲು ಹತೋಟಿಯಲ್ಲಿಡಬೇಕು. ಅನಂತರ ಕ್ರಮವಾಗಿ ಸರಬರಾಜು ಕಡಮೆಯಾಗಿರುವ ಇತರ ಮುಖ್ಯ ವಸ್ತುಗಳ ಬೆಲೆಯನ್ನು ಹತೋಟಿಯಲ್ಲಿಡಬೇಕು.

ಬೆಲೆಯ ಹತೋಟಿಯನ್ನು ಸಕಾಲದಲ್ಲಿ ಏರ್ಪಡಿಸಬೇಕು. ಒಂದು ಪದಾರ್ಥದ ಬೆಲೆಯು ಬಹಳ ಅಧಿಕವಾಗಿ ಏರುವುದೆಂದು ಸ್ವಲ್ಪ ಸೂಚನೆ ಬಂದೊಡನೆಯೇ ಅದರ ಬೆಲೆಯನ್ನು ಹತೋಟಿಗೊಳಪಡಿಸಬೇಕು. ಹಾಗಿಲ್ಲದೆ ಬೆಲೆಯು ಹದ್ದುಮೀರಿ ಏರಿದ ಮೇಲೆ ಹತೋಟಿಯನ್ನೇರ್ಪಡಿಸಿ ಫಲವಿಲ್ಲ.

ಹತೋಟಿಗೊಳಪಡಿಸಿರುವ ಪದಾರ್ಥದ ಬೆಲೆಯನ್ನು ಯಾವ ಮಟ್ಟದಲ್ಲಿ ನಿಗದಿಮಾಡಬೇಕೆಂಬುದು ಒಂದು ದೊಡ್ಡ ಸಮಸ್ಯೆ.

ಸರ್ಕಾರವು ನಿಗದಿಮಾಡಿರುವ ಬೆಲೆಯು ಪದಾರ್ಥದ ತಯಾರಿಕೆಯ ವೆಚ್ಚಕ್ಕಿಂತ ಕಡಮೆಯಾಗಿದ್ದರೆ ಆ ಪದಾರ್ಥವು ಪೇಟೆಗೆ ಸರಬರಾಜಾಗುವುದೇ ಇಲ್ಲ. ನಿಗದಿಮಾಡಿರುವ ಬೆಲೆಯು ಬಹು ಅಧಿಕವಾದರೆ ಅಲ್ಪ ವರಮಾನವುಳ್ಳವರಿಗೆ ಯಾವ ಸಹಾಯವೂ ಆಗುವುದಿಲ್ಲ. ಆದುದರಿಂದ ತಯಾರಿಕೆಯ ವೆಚ್ಚ ಮತ್ತು ರವಾನೆ ವೆಚ್ಚ ಕಳೆದು ವ್ಯಾಪಾರಗಾರರಿಗೂ ಮಿತವಾದ ಲಾಭವು ಸಿಕ್ಕುವಂತೆ ಬೆಲೆಯು ನಿಗದಿ ಮಾಡಲ್ಪಡಬೇಕು. ಅಲ್ಲದೆ ಸಂದರ್ಭಾನುಸಾರವಾಗಿ ಬೆಲೆಯನ್ನು ಬದಲಾಯಿಸುತ್ತಿರಬೇಕು.

ಬೆಲೆಯ ಹತೋಟಿಯು ಫಲಕಾರಿಯಾಗಬೇಕಾದರೆ ಸರ್ಕಾರವು ಹತೋಟಿಗೊಳಪಡಿಸಿದ ಪದಾರ್ಥಗಳ ಸರಬರಾಜಿನ ಮೇಲೂ ಹಂಚಿಕೆಯ ಮೇಲೂ ಸಂಪೂರ್ಣವಾದ ಹತೋಟಿಯನ್ನೇರ್ಪಡಿಸಬೇಕು. ಇಲ್ಲದಿದ್ದರೆ ಪದಾರ್ಥಗಳು ಕಳ್ಳಪೇಟೆಗೆ (Black Market) ಸಾಗುವುವು. ಆದುದರಿಂದ ಹತೋಟಿಗೆ ಒಳಪಟ್ಟಿರುವ ಪದಾರ್ಥಗಳಲ್ಲಿ ವ್ಯಾಪಾರಮಾಡುವವರು ಸರ್ಕಾರದಿಂದ ಅನುಮತಿ (Licence) ಯನ್ನು ಪಡೆಯಬೇಕು. ಅವರಲ್ಲಿರುವ ಮಾಲಿನ ಮೇಲೂ ಅವರ ವ್ಯಾಪಾರದ ಮೇಲೂ ಸರ್ಕಾರವು ಆಗಿಂದಾಗ್ಗೆ ಮೇಲ್ವಿಚಾರಣೆ ನಡೆಸಬೇಕು. ವ್ಯಾಪಾರಿಗಳು ಸರ್ಕಾರದೊಡನೆ ಸಹಕರಿಸದೆ ಹೋದರೆ ಸರ್ಕಾರವೇ ಅಂಗಡಿಗಳನ್ನು ತೆರೆಯಬೇಕು. ಎರಡನೆಯದಾಗಿ, ಜನರು ಪದಾರ್ಥಗಳನ್ನು ಅನಾವಶ್ಯಕ ಪ್ರಮಾಣದಲ್ಲಿ ಕೊಂಡು ದಾಸ್ತಾನು ಮಾಡುವುದನ್ನು ಕಾನೂನಿನ ಮೂಲಕ ನಿರೋಧಿಸಬೇಕು.

ಆಮದಾಗುವ ಪದಾರ್ಥಗಳ ಬೆಲೆಯ ಹತೋಟಿಯು ಸುಲಭವಾದದ್ದು. ಅವುಗಳ ಪರಿಮಾಣ ಸರ್ಕಾರಕ್ಕೆ ಖಚಿತವಾಗಿ

ಗೊತ್ತು. ಆ ಪದಾರ್ಥಗಳ ವ್ಯಾಪಾರಗಾರರು ಸರ್ಕಾರದ ಅಪ್ಪಣೆ ಪಡೆಯಬೇಕಾಗಿರುವುದರಿಂದ ಅವರ ಮೇಲೆ ಸರ್ಕಾರಕ್ಕೆ ಸಂಪೂರ್ಣ ಅಧಿಕಾರವುಂಟು. ಒಂದು ಪದಾರ್ಥದ ಉತ್ಪತ್ತಿಯು ಕೆಲವು ದೊಡ್ಡ ವ್ಯಾಪಾರಿಗಳ ಕೈಯಲ್ಲಿ ಕೇಂದ್ರಗತವಾಗಿದ್ದರೆ ಅದರ ಬೆಲೆಯ ಹತೋಟಿಯು ಸುಲಭ. ಹಾಗಿಲ್ಲದೆ ಪದಾರ್ಥದ ಉತ್ಪತ್ತಿಯು ಅನೇಕ ಸಣ್ಣ ವ್ಯಾಪಾರಿಗಳ ಕೈಯಲ್ಲಿ ಸೇರಿದ್ದರೆ ಹತೋಟಿಯು ಕಷ್ಟವಾಗುವುದು. ಉದಾಹರಣೆ : ನಮ್ಮ ದೇಶದಲ್ಲಿ ಸಕ್ಕರೆ ಮತ್ತು ಗೋಧಿ ಇವುಗಳ ಬೆಲೆಯ ಹತೋಟಿ ಕಾರ್ಯಕ್ರಮವನ್ನು ಪರೀಕ್ಷಿಸೋಣ. ಸಕ್ಕರೆಯ ಬಹುಭಾಗವು ಸಂಯುಕ್ತಪ್ರಾಂತ್ಯ ಮತ್ತು ಬೀಹಾರಗಳಲ್ಲಿರುವ ಸುಮಾರು 150 ಭಾರೀ ಕಾರ್ಖಾನೆಗಳಲ್ಲಿ ತಯಾರಾಗುವುದರಿಂದ, ಸಕ್ಕರೆ ಹಂಚಿಕೆಯು ಸರ್ಕಾರವು ನಿಗದಿಮಾಡಿರುವ ಧಾರಣೆಯಂತೆ ಸುವ್ಯವಸ್ಥಿತವಾಗಿ ನಡೆಯುತ್ತಿದೆ. ಗೋಧಿ ಬೆಳೆಯು ಪಂಜಾಬು, ಸಂಯುಕ್ತಪ್ರಾಂತ್ಯ ಮತ್ತು ಸಿಂಧೂದೇಶಗಳಲ್ಲಿ ಕೋಟ್ಯಾಂತರ ವ್ಯವಸಾಯಗಾರರ ಕೈಯಲ್ಲಿ ಚದರಿರುವುದರಿಂದ ಗೋಧಿ ಬೆಲೆಯ ಹತೋಟಿ ಯಶಸ್ವಿಯಾಗಲಿಲ್ಲ. ಸರ್ಕಾರವು ನಿಗದಿಮಾಡಿದ ಬೆಲೆಗೆ ಗೋಧಿಯನ್ನು ಮಾರಲು ವ್ಯವಸಾಯಗಾರರೂ ವ್ಯಾಪಾರಗಾರರೂ ಒಪ್ಪಲಿಲ್ಲ. ಪೇಟೆಗೆ ಗೋಧಿ ಬರುವುದು ಕಡಮೆಯಾಗಿ, ಜನರು ಅಧಿಕ ಬೆಲೆ ಕೊಟ್ಟು ಕೊಳ್ಳಬೇಕಾಯಿತು. ಆದುದರಿಂದ ಸರ್ಕಾರವು ಗೋಧಿಯ ಬೆಲೆಯ ಹತೋಟಿಯನ್ನು ರದ್ದುಗೊಳಿಸಿತು.

ಬೆಲೆಯ ಹತೋಟಿಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೆ ಮೊದಲು ಮೇಲೆ ಹೇಳಿರುವ ಅಂಶಗಳನ್ನು ಸರ್ಕಾರವು ಗಮನಕ್ಕೆ ತೆಗೆದುಕೊಳ್ಳಬೇಕು. ಒಂದು ಪದಾರ್ಥದ ಧಾರಣೆಯ ಹತೋ

ಟೆಯು ಬಹಳ ಕಷ್ಟವೆಂದು ತಿಳಿದುಬಂದರೆ, ಹತೋಟಿಯನ್ನೇರ್ಪಡಿಸಬಾರದು.

ಪಡಿಯ ಪದ್ಧತಿ (ರೇಷನ್): ಅನೇಕವೇಳೆ ಬರಿ ಬೆಲೆ ಹತೋಟಿಯೇ ಫಲಕಾರಿಯಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಸರ್ಕಾರವು ಪಡಿಯ (ರೇಷನ್) ಪದ್ಧತಿಯನ್ನು ಜಾರಿಗೆ ತರಬೇಕು. ಈ ಯುದ್ಧದಲ್ಲಿ ನಿರತರಾಗಿರುವ ಬಹುರಾಷ್ಟ್ರಗಳಲ್ಲಿ ಆಹಾರಸಾಮಗ್ರಿಗಳ ಮತ್ತು ಬಟ್ಟೆಯ ಹಂಚಿಕೆಯಲ್ಲಿ ಪಡಿಯ ಪದ್ಧತಿ ಏರ್ಪಟ್ಟಿದೆ. ಸರಬರಾಜು ಕಡಮೆಯಾಗಿರುವ ಪದಾರ್ಥಗಳನ್ನು ಸರ್ವರಿಗೂ ನ್ಯಾಯಸಮ್ಮತವಾದ ರೀತಿಯಲ್ಲಿ ಹಂಚುವುದೇ ಪಡಿಯಪದ್ಧತಿಯ ಉದ್ದೇಶ. ಪಡಿಯಪದ್ಧತಿ ಇಲ್ಲದಿದ್ದಲ್ಲಿ ಅಧಿಕವರಮಾನವುಳ್ಳವರು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಕೊಳ್ಳಲಾರಂಭಿಸುವುದರಿಂದ ಬಡವರಿಗೆ ಪದಾರ್ಥಗಳು ದೊರೆಯುವುದು ಅತಿ ಕಷ್ಟವಾಗುತ್ತದೆ. ಬೆಲೆಯು ಎಷ್ಟು ಹೆಚ್ಚಿದರೂ ಭಾಗ್ಯವಂತರು ಕೊಳ್ಳಲು ಸಮರ್ಥರು; ಬಡವರು ಅಸಮರ್ಥರು. ಅಂದರೆ ಅಧಿಕ ವರಮಾನವುಳ್ಳವರಿಗೆ ಪದಾರ್ಥಗಳು ಅಧಿಕ ಪ್ರಮಾಣದಲ್ಲಿ ದೊರೆಯುತ್ತವೆ. ಅಲ್ಪವರಮಾನವುಳ್ಳವರಿಗೆ ತೀರಕಡಮೆ ಪ್ರಮಾಣದಲ್ಲಿ ದೊರೆಯುತ್ತವೆ. ಇದು ಅನ್ಯಾಯ. ಈ ಅನ್ಯಾಯವನ್ನು ತಪ್ಪಿಸುವುದೇ ಪಡಿಪದ್ಧತಿಯ ಉದ್ದೇಶ. ಜನ ಕೊಳ್ಳುವ ಶಕ್ತಿಯನ್ನು ಹತೋಟಿಗೆ ಒಳಪಡಿಸಬೇಕು. ಭಾಗ್ಯವಂತರು ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳುವುದನ್ನು ತಪ್ಪಿಸಿ ಬಡವರು ಸಾಕಷ್ಟು ಪ್ರಮಾಣದಲ್ಲಿ ಕೊಳ್ಳಲು ಅವಕಾಶವಿರಬೇಕು. ಅಂದರೆ ಪದಾರ್ಥಗಳ ಹಂಚಿಕೆ ಜನರಿಗೆ ಅಗತ್ಯವಾಗಿರುವಷ್ಟು ಇರಬೇಕೇ ಹೊರತು ಅವರ ವರಮಾನವನ್ನು ಅನುಸರಿಸಬಾರದು.

ಪಡಿಪದ್ಧತಿಯನ್ನು ಒಂದು ಪ್ರದೇಶದಲ್ಲಿ ಜಾರಿಗೆ ತರುವುದಕೆ ಮೊದಲು ಅಲ್ಲಿನ ಜನಗಣಿತಿಯನ್ನು ತೆಗೆದುಕೊಳ್ಳಬೇಕು ಮತ್ತು ಅಲ್ಲಿರುವ ಜನರ ಆಹಾರಕ್ರಮುವನ್ನು ವಿವರವಾಗಿ ತಿಳಿದು ಕೊಳ್ಳಬೇಕು. ನಮ್ಮ ಸಂಸ್ಥಾನದಲ್ಲಿ ಬೆಂಗಳೂರು, ಮೈಸೂರು ಮತ್ತು ಕೋಲಾರ ಮುಂತಾದ ನಗರಗಳಲ್ಲಿ ಪಡಿಪದ್ಧತಿಯನ್ನು ಜಾರಿಗೆ ತರುವುದಕ್ಕೆ ಮೊದಲು ಸರ್ಕಾರವು ಪ್ರಜಾಗಣಿತಿಯನ್ನು ತೆಗೆದುಕೊಂಡಿತು.

ಸರ್ಕಾರವು ಸರಬರಾಜು ಮತ್ತು ಹಂಚಿಕೆಯಮೇಲೆ ಪೂರ್ಣ ಅಧಿಕಾರಹೊಂದಬೇಕು. ಸಾಧ್ಯವಾದಮಟ್ಟಿಗೂ ಸರಬರಾಜನ್ನು ಮೂಲದಲ್ಲಿಯೇ ಸ್ವಾಧೀನಪಡಿಸಿಕೊಳ್ಳಬೇಕು. ಉತ್ಪತ್ತಿಯಾದ ಸರಕೆಲ್ಲವನ್ನೂ ಸರ್ಕಾರವೇ ಕೊಳ್ಳಬೇಕು; ಅಥವಾ ಸಗಟು ವ್ಯಾಪಾರಗಾರರು ಸನ್ನದು ಪಡೆದು ಸರ್ಕಾರದ ಮೇಲ್ವಿಚಾರಣೆಗೆ ಒಳಪಡಬೇಕು. ಅಂತು ಸರಕು ಸಾಕಷ್ಟು ಪ್ರಮಾಣದಲ್ಲಿ ಸರ್ಕಾರದ ಕಟ್ಟಿಗೆ ಒಳಪಟ್ಟು ಶೇಖರವಾಗಬೇಕು.

ಪಡಿಯ ಸರಕುಗಳನ್ನು ಸಾಧ್ಯವಾದಮಟ್ಟಿಗೂ ಖಾಸಗಿ ವರ್ತಕರ ಮೂಲಕವೇ ಜನರಿಗೆ ಹಂಚುವುದು ಒಳ್ಳೆಯದು. ಜನರು ತಮ್ಮ ವಾಸಸ್ಥಳಕ್ಕೆ ಹತ್ತಿರ ಇರುವ ಚಿಲ್ಲರೆ ವ್ಯಾಪಾರಿಯ ಬಳಿ ತಮ್ಮ ಹೆಸರನ್ನು ದಾಖಲುಮಾಡಿಕೊಂಡು ಅವನಿಂದಲೇ ಪಡಿಯ ಸರಕುಗಳನ್ನು ಪಡೆಯಬೇಕು. ಈ ಪದ್ಧತಿಯಿಂದ ಅನೇಕ ಅನುಕೂಲಗಳಿವೆ. ಸಾರ್ವಜನಿಕರು ಇತರ ಸರಕುಗಳ ಸಂಗಡ ಪಡಿಯಸರಕುಗಳನ್ನೂ ಒಂದೇಸಲ ಕೊಳ್ಳಬಹುದು. ಉದಾಹರಣೆಗೆ: ಅಕ್ಕಿ ಮತ್ತು ಸೀಮೆಎಣ್ಣೆ ಇವುಗಳನ್ನು ಸರ್ಕಾರದ ಅಂಗಡಿಗಳಲ್ಲಿ ಮಾರಾಟಮಾಡಿದರೆ ಜನರು ಅಕ್ಕಿ ಕೊಳ್ಳಲು ಒಂದುಕಡೆ ಹೋಗಬೇಕು; ಬೇಳೆ, ಉಪ್ಪು, ಮೊದ

ಲಾದ ಉಳಿದ ಪದಾರ್ಥಗಳನ್ನು ಕೊಳ್ಳಲು ಬೇರೆ ಕಡೆಗೆ ಹೋಗಬೇಕು. ಅದರಬದಲು ಪಡಿಯ ಸರಕುಗಳನ್ನು ಖಾಸಗಿಯ ವರ್ತಕರ ಮೂಲಕವೇ ಮಾರಿದರೆ, ಜನರು ಎಲ್ಲ ಪದಾರ್ಥಗಳನ್ನು ಒಂದೇಕಡೆ ಕೊಳ್ಳಬಹುದು. ಎರಡನೆಯ ಅನುಕೂಲವೇನೆಂದರೆ, ಜನರು ಪಡಿಯದಿನಸಿಗಳನ್ನು ಸಾಲವಾಗಿಕೊಳ್ಳಬಹುದು. ಮೂರನೆಯದಾಗಿ ಲಂಚ ಮೊದಲಾದ ಅನೇಕ ಆಡಳಿತದ ದೋಷಗಳಿಗೆ ಅವಕಾಶವಿರುವುದಿಲ್ಲ.

ಪಡಿಯ ಸಾಮಗ್ರಿಗಳ ಬೆಲೆಯು ಅತ್ಯಲ್ಪವರಮಾನವುಳ್ಳವರಿಗೂ ಅನುಕೂಲವಾಗಿರುವಂತೆ ನಿಗದಿಮಾಡಲ್ಪಡಬೇಕು. ಅಂದರೆ, ಅತ್ಯಲ್ಪ ವರಮಾನ ಉಳ್ಳವರೂ ಸರಕುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕೊಳ್ಳಲು ಶಕ್ತರಾಗುವಷ್ಟು ಮಟ್ಟಿಗೆ ಬೆಲೆ ಅಗ್ಗವಾಗಿರಬೇಕು. ಇಲ್ಲದಿದ್ದರೆ ಪಡಿಪದ್ಧತಿಯಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಬೆಲೆಗಳು ಸಾಕಷ್ಟುಮಟ್ಟಿಗೆ ಅಗ್ಗವಾಗಿರಬೇಕಾದರೆ ಅನೇಕವೇಳೆ ಸರ್ಕಾರವು ಸಹಾಯಧನವನ್ನು ಕೊಡಬೇಕಾಗುತ್ತದೆ. ಅಂದರೆ, ಸರ್ಕಾರವು ಸಾಮಗ್ರಿಗಳನ್ನು ಹೆಚ್ಚಿನ ಬೆಲೆಗೆ ಕೊಂಡು ಕಡಮೆ ಬೆಲೆಗೆ ಮಾರಿ, ನಷ್ಟವನ್ನು ತಾನೇ ವಹಿಸಿಕೊಳ್ಳಬೇಕು. ಸಾಮಾನ್ಯವಾಗಿ ಪಡಿಯ ಸಾಮಗ್ರಿಗಳ ರವಾನೆ ಮತ್ತು ಸಾದಿಲ್ವಾರು ಖರ್ಚನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ವಿಷಯವೇನೆಂದರೆ, ಸರ್ಕಾರವು ಸಹಾಯಧನವನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕು. ಕೊಟ್ಟು ಶಾಸ್ತ್ರಮಾಡುವುದಕ್ಕಿಂತ ಕೊಡದಿರುವುದೇಲೇಸು. ಪಡಿಕೊಡುವ ಎಲ್ಲ ಸಾಮಗ್ರಿಗಳಿಗೂ ಸರ್ಕಾರವು ಧನ ಸಹಾಯಮಾಡಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಜೀವನಕ್ಕೆ ಅತಿ ಮುಖ್ಯವಾದ ಆಹಾರ

ಸಾಮುಗ್ರಿಗಳಿಗೆ ಮಾತ್ರ ಕೊಡಲು ಸಾಧ್ಯ. ಇಂಗ್ಲೆಂಡಿನಲ್ಲಿ ಸರ್ಕಾರವು ವರ್ಷಕ್ಕೆ ಸುಮಾರು 140 ಕೋಟಿ ರೂಪಾಯಿಗಳಷ್ಟು ಸಹಾಯ ಧನವನ್ನು ಆಹಾರ ಸಾಮುಗ್ರಿಗಳ ಹಂಚಿಕೆಗೆ ವಿನಿಯೋಗಿಸುತ್ತಿದೆ.

ಪಡಿ ಸಾಮುಗ್ರಿಗಳ ಹಂಚಿಕೆಯು ಸಾಧ್ಯವಾದಷ್ಟು ಮಟ್ಟಿಗೆ ಜನರ ಆಹಾರಕ್ರಮವನ್ನನುಸರಿಸಬೇಕು. ಅಕ್ಕಿ ಉಪಯೋಗಿಸುವವರಿಗೆ ಅಕ್ಕಿಯನ್ನೇ ಒದಗಿಬೇಕು. ರಾಗಿ ತಿನ್ನುವವರಿಗೆ ರಾಗಿಯನ್ನೇ ಕೊಡಬೇಕು. ಆದರೆ ಅನೇಕವೇಳೆ ಜನರ ಆಹಾರ ಕ್ರಮದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳುಂಟಾಗಬೇಕಾಗಬಹುದು. ಅಕ್ಕಿ ತಿನ್ನುವ ಪ್ರದೇಶದಲ್ಲಿ ಸಾಕಷ್ಟು ಅಕ್ಕಿ ಸರಬರಾಜಾಗದಿದ್ದಲ್ಲಿ ಅಕ್ಕಿಯ ಜತೆಗೆ ಸ್ವಲ್ಪ ಗೋಧಿಯನ್ನೋ ಜೋಳವನ್ನೋ ಉಪಯೋಗಿಸಬೇಕಾಗುವುದು.

ಪಡಿ ವ್ಯವಸ್ಥೆಯ ವ್ಯಾಪ್ತಿಯು ಕ್ರಮೇಣ ಹೆಚ್ಚಬೇಕು. ಯಾವ ಪದಾರ್ಥಗಳ ಸರಬರಾಜು ತೀವ್ರವಾಗಿ ಕಡಮೆಯಾಗುವುದೋ ಅವುಗಳ ಹಂಚಿಕೆಯಲ್ಲಿ ಪಡಿಯ ಪದ್ಧತಿಯನ್ನೇರ್ಪಡಿಸಬೇಕು. ಅಲ್ಲದೆ ಅಂತಹ ಪದಾರ್ಥಗಳ ಬೆಲೆಯು ಸರ್ಕಾರದ ಹತೋಟಿಗೆ ಒಳಪಡಬೇಕು. ಇಲ್ಲದಿದ್ದರೆ ಅವುಗಳ ಬೆಲೆ ಅತ್ಯಧಿಕವಾಗಿ ಹೆಚ್ಚುವುದು. ಅಕ್ಕಿ, ರಾಗಿ, ಬೇಳೆ, ಸಕ್ಕರೆ ಈ ಪದಾರ್ಥಗಳ ಮಾರಾಟದಿಂದ ವರ್ತಕರಿಗೆ ಹೆಚ್ಚಿಗೆ ಲಾಭ ಸಂಪಾದಿಸಲು ಅವಕಾಶವಿಲ್ಲದಿರುವುದರಿಂದ ಇತರ ಪದಾರ್ಥಗಳ ಮಾರುವಿಕೆಯಿಂದ ಅಧಿಕಲಾಭ ಪಡೆಯಲುದ್ಯುಕ್ತರಾಗುವರು. ಈ ಕಾರಣದಿಂದ ಇತರ ಪದಾರ್ಥಗಳ ಬೆಲೆ ಅತ್ಯಧಿಕವಾಗಿ ಏರುವುದು. ಆದುದರಿಂದ ಅವುಗಳ ಬೆಲೆಯನ್ನು ಹದ್ದಿನಲ್ಲಿಡಬೇಕು. ಮತ್ತು ಜನರ ಕೈಯಲ್ಲಿರುವ ಹೆಚ್ಚಿಗೆ ಹಣವನ್ನು ತೆರಿಗೆಯ ಮತ್ತು ಸಾಲ

ಗಳ ಮೂಲಕ ಸರ್ಕಾರವು ಪಡೆಯಬೇಕು.

ಪಡಿಪದ್ಧತಿಯಲ್ಲಿ ಎರಡು ವಿಧವುಂಟು. ಒಂದನ್ನು ನಿರ್ದಿಷ್ಟವಾದ ಪಡಿ (Specific Rationing) ಯೆಂದೂ, ಇನ್ನೊಂದನ್ನು ಪಾಯಿಂಟ್ ಅಥವಾ ಗುಂಪಿನ ಪಡಿ (Point of Group Rationing) ಯೆಂದೂ ಕರೆಯಬಹುದು. ನಿರ್ದಿಷ್ಟ ಪಡಿಪದ್ಧತಿ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಒಂದು ಗೊತ್ತಾದ ಅವಧಿಯಲ್ಲಿ ಒಂದು ನಿರ್ದಿಷ್ಟವಾದ ಪ್ರಮಾಣದಲ್ಲಿ ಪದಾರ್ಥಕೊಳ್ಳಲು ಹಕ್ಕಿನ ಚೀಟಿ (Coupon) ದೊರೆಯುವುದು. ಉದಾಹರಣೆಗೆ: ಸಕ್ಕರೆ, ಸೀಮೆ ಎಣ್ಣೆ, ಬೆಂಕಿಪೊಟ್ಟಣ, ರಾಗಿ—ಇವುಗಳ ಹಂಚಿಕೆಯಲ್ಲಿ ಪಡಿಪದ್ಧತಿ ಇದ್ದರೆ, ಪ್ರತಿಯೊಬ್ಬರಿಗೂ ಒಂದು ವಾರಕ್ಕೆ ಸವಾಸೇರು ಸಕ್ಕರೆ, ಅರ್ಧ ಸೀಸೆ ಸೀಮೆ ಎಣ್ಣೆ, ಒಂದು ಬೆಂಕಿಪೊಟ್ಟಣ ಮತ್ತು ನಾಲ್ಕು ಸೇರು ರಾಗಿ ಕೊಡಬಹುದು. ಒಂದು ಸಂಸಾರದಲ್ಲಿ ನಾಲ್ಕು ಮಂದಿಯಿದ್ದರೆ, ಅವರಿಗೆ ವಾರವೊಂದಕ್ಕೆ ಒಂದು ವೀಸೆ ಸಕ್ಕರೆ, ಎರಡು ಸೀಸೆ ಸೀಮೆ ಎಣ್ಣೆ, ನಾಲ್ಕು ಬೆಂಕಿಪೊಟ್ಟಣ ಮತ್ತು ಹದಿನಾರು ಸೇರು ರಾಗಿ ದೊರೆಯುತ್ತದೆ. ಮೇಲೆ ಹೇಳಿರುವ ಸಾಮಾನುಗಳ ಲಕ್ಷಣವೇನೆಂದರೆ, ಅವುಗಳ ಸ್ವರೂಪದಲ್ಲಿ ವೈವಿಧ್ಯತೆ ಬಹಳ ಕಡಮೆ. ಬೆಂಕಿಪೊಟ್ಟಣದಲ್ಲಿರುವುದು ಒಂದೇ ಬಗೆ. ಸೀಮೆ ಎಣ್ಣೆಯಲ್ಲಿ ಬಿಳೀ ಎಣ್ಣೆ ಮತ್ತು ಕೆಂಪು ಎಣ್ಣೆ ಎಂದು ಎರಡು ವಿಧವಿದೆ. ಈಗ ಸಕ್ಕರೆಯೆಂದರೆ ಮಂಡ್ಯದ ಸಕ್ಕರೆಯೇ ಬೇಕು. ಬೂರ ಸಕ್ಕರೆ ಬೇಕೆನ್ನುವರು ಬಹಳ ಕಡಮೆ. ರಾಗಿಯಲ್ಲಿ ಹೈನು ಮತ್ತು ಕಾರು ಎಂಬ ಎರಡು ಬಗೆಯೇ ಮುಖ್ಯವಾದದ್ದು. ಅಕ್ಕಿ ಮತ್ತು ಗೋಧಿಗಳಲ್ಲಿಯೂ ಕೂಡ ರಖಂಗಳು ಬಹಳವಾಗಿಲ್ಲ. ಆದುದರಿಂದ ಈ ಪದಾರ್ಥಗಳನ್ನು ಪಡಿಕೊಡುವಾಗ, ಒಬ್ಬೊಬ್ಬ

ರಿಗೂ ಇಂಥ ಬಗೆಯ ಅಕ್ಕಿಯನ್ನೇ ಕೊಡಬೇಕು, ಇಂಥ ಬಗೆಯ ರಾಗಿಯನ್ನೇ ಕೊಡಬೇಕು, ಇಂಥ ಬಗೆಯ ಸೀಮೆ ಎಣ್ಣೆಯನ್ನೇ ಕೊಡಬೇಕು ಎಂದು ವಿಧಿಸುವುದು ಅನಾವಶ್ಯಕ.

ಆದರೆ ಇನ್ನು ಕೆಲವು ಪದಾರ್ಥಗಳಲ್ಲಿ ವೈವಿಧ್ಯ ಬಹಳವಾಗಿರುತ್ತದೆ. ಅಂಥ ಪದಾರ್ಥಗಳಿಗೆ ಪಾಯಿಂಟ್ ಪಡಿಪದ್ಧತಿಯನ್ನನುಸರಿಸಬೇಕು. ಇದಕ್ಕೆ ಬಟ್ಟೆ ಒಳ್ಳೆಯ ಉದಾಹರಣೆ. ನಮ್ಮ ದೇಶದಲ್ಲಿ ಬಟ್ಟೆ ಪಡಿಪದ್ಧತಿ ಬಂದಿಲ್ಲ. ಆದರೆ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದು ಜಾರಿಗೆ ಬಂದಿದೆ. ಅಕ್ಕಿಯಲ್ಲಿ 5-6 ಬಗೆಗಳಿವೆ, ರಾಗಿಯಲ್ಲಿ 2-3 ಇವೆ. ಆದರೆ ಬಟ್ಟೆಯಲ್ಲಿ ಸಾವಿರಗಟ್ಲೆ ಇವೆ. ಷರಟಿನಬಟ್ಟೆ, ಕೋಟಿನಬಟ್ಟೆ, ಕುಪ್ಪಸದಬಟ್ಟೆ ಒಂದೊಂದರಲ್ಲೂ ನೂರಾರು ಬಗೆಗಳಿವೆ. ಬಟ್ಟೆ ವಿಚಾರದಲ್ಲಿ ಮಾತ್ರ ಜನರು ತಮಗೆ ಬೇಕಾದುದನ್ನು ಕೊಳ್ಳುವ ಅವಕಾಶವನ್ನು ಹೊಂದಿರಬೇಕು. ಯಾರಿಗೆ ಯಾವ ಬಗೆಯ ಬಟ್ಟೆಯನ್ನು ಕೊಡಬೇಕು ಎಂದು ನಿರ್ಧರಿಸುವುದು ಕಷ್ಟ. ಈ ತೊಂದರೆಯನ್ನು ಹೀಗೆ ನಿವಾರಿಸಬಹುದು. ಪ್ರತಿಯೊಬ್ಬ ಮನುಷ್ಯನೂ ವರ್ಷವೊಂದಕ್ಕೆ 200 ಪಾಯಿಂಟುಗಳಷ್ಟು ಬಟ್ಟೆಯನ್ನು ಕೊಳ್ಳಬಹುದೆಂದು ವಿಧಿಸಿ, ಒಂದೊಂದು ಬಗೆಯ ಬಟ್ಟೆಯೂ ಗಜಕ್ಕೆ ಇಷ್ಟು ಪಾಯಿಂಟುಗಳೆಂದು ನಿರ್ಧರಿಸುವುದು. ಉದಾಹರಣೆ.

ಬೇಬಿಲಾಂಗ್‌ಕ್ಲಾತ್—	1 ಗಜಕ್ಕೆ	4	ಪಾಯಿಂಟ್
ಲೇಡಿಲಾಂಗ್‌ಕ್ಲಾತ್—	,,	5	,,
ಮಲ್ಲು—	,,	8	,,
ಬಿಳೀಡ್ರಿಲ್ಲು—	,,	10	,,
ಗೋಲ್ಡ್ ಸ್ಟಾಂಡರ್ಡ್ ಷರಟಿನ ಬಟ್ಟೆ		12	,,

ಜನರು ತಮಗೆ ಬೇಕಾದ ಬಟ್ಟೆಯನ್ನು ಕೊಳ್ಳಬಹುದು. ಆದರೆ ಒಟ್ಟನಲ್ಲಿ 200 ಪಾಯಿಂಟುಗಳಿಗಿಂತ ಹೆಚ್ಚು ಕೊಳ್ಳ ಲಾಗುವುದಿಲ್ಲ. ಒಬ್ಬನು 15 ಗಜ ಬೇಬಿಲಾಂಗ್ ಕ್ಲಾತ್, 5 ಗಜ ಗೋಲ್ಡ್ ಸ್ಟಾಂಡರ್ಡ್ ಬಟ್ಟೆ, 10 ಗಜ ಮಲ್ಲನ್ನು ಕೊಳ್ಳ ಬಹುದು; ಅಥವಾ 12 ಗಜ ಲೇಡಿಲಾಂಗ್ ಕ್ಲಾತ್, 5 ಗಜ ಮಲ್ಲು, 4 ಗಜ ಬಿಳೀಡ್ರಿಲ್ಲು ಮತ್ತು 5 ಗಜ ಗೋಲ್ಡ್ ಸ್ಟಾಂಡ ರ್ಡಿನ ಬಟ್ಟೆ—ಇವನ್ನು ಕೊಳ್ಳಬಹುದು. ಪಾಯಿಂಟ್ ಪಡಿ ವ್ಯವಸ್ಥೆಯಲ್ಲಿ ಬಟ್ಟೆಗಳ ಪಾಯಿಂಟ್ ಬೆಲೆಯನ್ನು ಗಿರಾಕಿಗನು ಸಾರವಾಗಿ ಬದಲಾಯಿಸುತ್ತಿರಬೇಕು. ಮಸಲಾ, ಬೇಬಿಲಾಂಗ್ ಕ್ಲಾತ್ ಬಟ್ಟೆಗೆ ಗಿರಾಕಿ ಬಹಳವಾಗಿ ಹೆಚ್ಚಿದರೆ, ಅದರ ಪಾಯಿಂಟ್ ಬೆಲೆಯನ್ನು ಹೆಚ್ಚಿಸಬೇಕು. ಆಗ ಜನರು ಅದನ್ನು ಕೊಳ್ಳುವುದನ್ನು ಕಡಮೆಮಾಡುವರು.

ಪಾಯಿಂಟ್ ಪಡಿಪದ್ಧತಿಯಿಂದ ಸಾರ್ವಜನಿಕರಿಗೆ ತಮ್ಮ ಮನಸ್ಸಿಗೆ ಒಪ್ಪುವುದನ್ನು ಆಯ್ದುಕೊಳ್ಳುವ ಅನುಕೂಲವಿದೆ. ಆದರೆ ಸರ್ಕಾರಕ್ಕೆ ಆಡಳಿತ ತೊಂದರೆ ಹೆಚ್ಚು. ಸರಬರಾಜು ಹೆಚ್ಚುಕಡಮೆಯಾದಂತೆಲ್ಲಾ ಜನರಿಗೆ ಕೊಡುವ ಪಡಿಪ್ರಮಾಣ ವನ್ನು ಹೆಚ್ಚುಕಡಮೆಮಾಡಬೇಕು. ಈ ಬದಲಾವಣೆ ನಿರ್ದಿಷ್ಟ ಪಡಿಕ್ರಮದಲ್ಲಿ ಬಹಳ ಸುಲಭ; ಪಾಯಿಂಟ್ ಕ್ರಮದಲ್ಲಿ ಕಷ್ಟ.

ಪಡಿ ಪದ್ಧತಿ ಜಾರಿಯಲ್ಲಿ ಇರುವ ಅನೇಕ ರಾಷ್ಟ್ರಗಳಲ್ಲಿ ಎಲ್ಲ ಜನರಿಗೂ ಒಂದೇ ಪ್ರಮಾಣದಲ್ಲಿ ಪಡಿ ಕೊಡುವುದಿಲ್ಲ. ಸ್ವಲ್ಪ ತಾರತಮ್ಯವುಂಟು. ಸಾಮಾನ್ಯವಾಗಿ ಎಳೆಮಕ್ಕಳು, ಗರ್ಭಿಣಿ ಬಾಣಂತಿಯರು, ಖಾಯಿಲೆಯಿಂದ ಗುಣಹೊಂದುತ್ತಿರುವವರು, ಕಷ್ಟಕರವಾದ ಕೆಲಸಗಳಲ್ಲಿ ನಿರತರಾಗಿರುವವರು—ಇಂಥವರಿಗೆ

ಹೆಚ್ಚು ಪುಷ್ಟಿಕರವಾದ ಮೊಟ್ಟೆ, ಹಾಲು ಮುಂತಾದ ಆಹಾರ ಸಾಮಗ್ರಿಗಳು ಉಳಿದವರಿಗಿಂತ ಹೆಚ್ಚು ಪ್ರಮಾಣದಲ್ಲಿ ದೊರೆಯುವುವು.

ಪಡಿ ಪದ್ಧತಿಯು ಯಶಸ್ವಿಯಾಗಬೇಕಾದರೆ ಪಡಿ ಇಲಾಖೆಯು ದಕ್ಷತೆಯಿಂದಲೂ ಪರಿಶುದ್ಧತೆಯಿಂದಲೂ ಕೆಲಸಮಾಡಬೇಕು. ಮತ್ತು ಸಾರ್ವಜನಿಕರು ಸರ್ಕಾರದೊಡನೆ ಸಂಪೂರ್ಣವಾಗಿ ಸಹಕರಿಸಬೇಕು. ಪಡಿಶಾಸನಗಳನ್ನುಲಂಘಿಸುವವರಿಗೆ ಕಠಿಣ ಶಿಕ್ಷೆಯಾಗಬೇಕು. ಸಾರ್ವಜನಿಕರಿಗೆ ಪಡಿಪದ್ಧತಿಯಿಂದ ಉಂಟಾಗುವ ಅನಾನುಕೂಲಗಳನ್ನು ಪರಿಹಾರ ಮಾಡುವುದಕ್ಕೂ, ಮತ್ತು ಸರ್ಕಾರಕ್ಕೆ ತಕ್ಕ ಸಲಹೆಗಳನ್ನು ಕೊಡುವುದಕ್ಕೂ ಸಾರ್ವಜನಿಕರನ್ನೊಳಗೊಂಡ ಸ್ಥಳೀಯ ಆಹಾರ ಸಮಿತಿಗಳು ಏರ್ಪಡಬೇಕು. ಮತ್ತು ಪಡಿ ವ್ಯವಸ್ಥೆಯ ವಿಚಾರವಾಗಿ ಜನರಿಗೆ ಸರಿಯಾದ ತಿಳುವಳಿಕೆ ಕೊಡಲು ಪ್ರಚಾರಕಾರ್ಯ ಕೈಕೊಳ್ಳಬೇಕು. ಇಂಗ್ಲೆಂಡಿನಲ್ಲಿ ಆಹಾರ ಇಲಾಖೆಯವರು 1940 ನೇ ಆಗಸ್ಟಿನಿಂದ "ಆಹಾರ ವಿಷಯಗಳು" ಎಂಬ ವಾರಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. 1939 ನೇ ಅಕ್ಟೋಬರಿನಿಂದ 1941 ನೇ ಸೆಪ್ಟಂಬರಿನ ವರೆಗೆ ಬ್ರಿಟಿಷ್ ಸರ್ಕಾರವು ಆಹಾರ ಸರಬರಾಜು ಪ್ರಚಾರಕಾರ್ಯಕ್ಕಾಗಿ ಸುಮಾರು 75 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿತು. ಸಾರ್ವಜನಿಕರು ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೆ—"ಪಡಿ ಪದ್ಧತಿಯು ಒಂದು ದೇಶದ ಆರ್ಥಿಕ ದೌರ್ಬಲ್ಯದ ಚಿಹ್ನೆಯಲ್ಲ. ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಪದಾರ್ಥಗಳು ಸಮನಾಗಿ ದೊರಕುವಂತೆ ಮಾಡುವುದೇ ಪಡಿ ಪದ್ಧತಿಯ ಮುಖ್ಯ ಗುರಿ. ಪಡಿ ಪದ್ಧತಿಯು ಜಾರಿಗೆ ಬಂದರೆ ಯಾರೂ ಕಳವಳಪಡಬಾರದು. ಅದು ಜನ

ಸಾಮ್ರಾಜ್ಯದ ಹಿತದೃಷ್ಟಿಯಿಂದಲೇ ಆಚರಣೆಗೆ ತರಲ್ಪಟ್ಟಿದೆ."

---

೮. ಇಂಡಿಯಾದೇಶದಲ್ಲಿ ಬೆಲೆ ಹತೋಟಿ ಮತ್ತು ಆಹಾರ ಸರಬರಾಜು

ನಮ್ಮ ದೇಶದಲ್ಲಿ ಈಗ ಧಾರಣೆಗಳು ಬಹಳವಾಗಿ ಏರಿವೆ. ಜೀವನದ ವೆಚ್ಚವು ಎರಡರಷ್ಟಕ್ಕಿಂತ ಹೆಚ್ಚಿದೆ. ಜೀವನಕ್ಕೆ ಅತಿ ಮುಖ್ಯವಾದ ಆಹಾರ, ಬಟ್ಟೆ ಮತ್ತು ಸೀಮೆಎಣ್ಣೆ ಮುಂತಾದ ವಸ್ತುಗಳ ಅಭಾವ ಬಹಳವಾಗಿದೆ. ದೇಶದಲ್ಲಿ ಜನರ ಕಷ್ಟ ಹೇಳ ತೀರದು.

ಯುದ್ಧಾರಂಭದಲ್ಲಿ ಧಾರಣೆವಾಸಿ ಸ್ವಲ್ಪಮಾತ್ರ ಏರಿದವು. ಸಗಟುಧಾರಣೆವಾಸಿಯ ಸೂಚೀಸಂಖ್ಯೆಯು 1939 ಆಗಸ್ಟ್‌ನಲ್ಲಿ 100 ಇದ್ದು 1940ನೆಯ ಜನವರಿಯಲ್ಲಿ 133ಕ್ಕೆ ಏರಿತು. ಆ ಮಟ್ಟದಲ್ಲಿ ಸ್ವಲ್ಪಕಾಲವಿದ್ದು, 1940 ನೆಯ ಜೂಲೈನಿಂದ ಧಾರಣೆವಾಸಿ ಕ್ರಮೇಣ ಇಳಿಯುವುದಕ್ಕೆ ಆರಂಭವಾಗಿ, 1941 ಜೂಲೈ ಹೊತ್ತಿಗೆ 1939 ನೆಯ ಅಕ್ಟೋಬರಿನ ಮಟ್ಟಕ್ಕೆ ಇಳಿದವು. ಪುನಃ 1941 ನೇ ಜೂಲೈನಿಂದ ಧಾರಣೆವಾಸಿ ನಿಧಾನವಾಗಿ ಏರುವುದಕ್ಕೆ ಪ್ರಾರಂಭವಾಯಿತು. 1942 ನೇ ಜೂಲೈನಿಂದ ಧಾರಣೆವಾಸಿಯ ಏರಿಕೆ ಅತಿವೇಗದಿಂದ ಸಾಗಿತು.

ಕೆಲವು ಮುಖ್ಯವಸ್ತುಗಳ ಸಗಟು ಧಾರಣೆಯು ಹೇಗೆ ಏರಿದೆ ಎಂಬುದನ್ನು ಕೆಳಗೆ ಕೊಟ್ಟಿರುವ ಸಂಖ್ಯೆಗಳಿಂದ ತಿಳಿಯಬಹುದು.

ತಿಂಗಳು	ಅಕ್ಕಿ	ಆಹಾರ ಮತ್ತು ಹೊಗೆಸೊಪ್ಪು	ಮೂಲ ಸಾಮಗ್ರಿಗಳು	ಸಿದ್ಧವಾದ ಸಾಮಾನುಗಳು	ಹತ್ತಿಯ ಬಟ್ಟೆಗಳು	ಒಟ್ಟು ಧಾರಣೆವಾಸಿ
1939						
ಆಗಸ್ಟ್ (26)	100	100.3	100.2	100	100	100.3
ಅಕ್ಟೋಬರ್	117	112.7	109.6	121.7	106	114.9
1940						
ಜನವರಿ	110	122.1	125.9	140.8	127	133.2
ಏಪ್ರಿಲ್	117	112.7	122.8	13.5	122	125.0
ಜುಲೈ	119	106.5	118.4	113.5	115	112 1
ಅಕ್ಟೋಬರ್	133	109.6	120.2	112.9	113	112.1
1941						
ಜನವರಿ	141	107.4	126.3	121.6	119	114.8
ಏಪ್ರಿಲ್	146	103.5	128.6	131.5	134	116.4
ಜುಲೈ	180	127.0	146.2	157.3	169	140.9
ಅಕ್ಟೋಬರ್	171	126.6	150.5	163.0	187	142.1
1942						
ಜನವರಿ	151	130.6	158.4	161.4	190	145.0
ಏಪ್ರಿಲ್	169	138.5	162.4	157.6	193	145.9
ಜೂಲೈ	207	155.5	163.5	175.6	242	161.2
ಅಕ್ಟೋಬರ್	218	169.9	166.3	294.4	300	175.0
1943						
ಜನವರಿ	218	190.8	171.5	124.4	405	190.4
ಏಪ್ರಿಲ್	634	283.7	174.2	235.6	469	227.9
ಜೂಲೈ	951	294.4	182.8	259.5	493	239.3

ಧಾರಣೆವಾಸಿ ಇಷ್ಟು ಅಧಿಕವಾಗಿ ಏರುವುದಕ್ಕೆ ಕಾರಣವೇನೆಂದು ಪರಿಶೀಲಿಸೋಣ.

ಯುದ್ಧದ ದೆಸೆಯಿಂದ ಭೋಗಸಾಧನೆಗೆ ಉಪಯುಕ್ತವಾದ ಅನೇಕ ಸಾಮಗ್ರಿಗಳ ಸರಬರಾಜು ತೀರ ಕಡಮೆಯಾಗಿದೆ. ಈ ಸಾಮಗ್ರಿಗಳು ಅಪರಿಮಿತ ಪ್ರಮಾಣದಲ್ಲಿ ರಾಷ್ಟ್ರದ ರಕ್ಷಣೆಗೋಸ್ಕರ ಸರ್ಕಾರದ ಹಸ್ತಗತವಾಗುತ್ತಿವೆ. ಉದಾಹರಣೆಗೆ, ಇಂಡಿಯಾ ದೇಶದ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಯಲ್ಲಿ 80% ಭಾಗವನ್ನೂ ಹತ್ತಿಬಟ್ಟೆಯ ತಯಾರಿಕೆಯಲ್ಲಿ 35% ಭಾಗವನ್ನೂ, ಮತ್ತು ಉಣ್ಣೆ ಬಟ್ಟೆಯ ತಯಾರಿಕೆಯಲ್ಲಿ 100% ಭಾಗವನ್ನೂ ಸರ್ಕಾರವೇ ಯುದ್ಧಕೆಲಸಗಳಿಗಾಗಿ ಉಪಯೋಗಿಸಿಕೊಳ್ಳುತ್ತಿದೆ. ಇದಲ್ಲದೆ ನಮ್ಮ ದೇಶದಿಂದ ಈ ಸಾಮಗ್ರಿಗಳು ಪರದೇಶಗಳಿಗೆ ಹೆಚ್ಚಾಗಿ ರಫ್ತಾಗುತ್ತಿರುವುದರಿಂದಲೂ, ಮತ್ತು ನಮಗೆ ಪರದೇಶಗಳಿಂದ ಬರುತ್ತಿದ್ದ ಅನೇಕ ಪದಾರ್ಥಗಳ ಆಮದು ಸಂಪೂರ್ಣವಾಗಿ ನಿಂತು ಹೋಗಿರುವುದರಿಂದಲೂ ಅಥವಾ ಬಹಳ ಕಡಮೆಯಾಗಿರುವುದರಿಂದಲೂ ಪದಾರ್ಥಗಳ ಅಭಾವ ಅತ್ಯಧಿಕವಾಗಿದೆ. ಯುದ್ಧಕ್ಕೆ ಮುಂಚೆ ನಾವು ಜಪಾನ್ ದೇಶದಿಂದ ನಮಗೆ ಬೇಕಾದ ಬಟ್ಟೆಯಲ್ಲಿ 30% ಆಮದು ಮಾಡುತ್ತಿದ್ದೆವು. ಈಗ ಒಂದು ಗಜ ಬಟ್ಟೆಯೂ ಆಮದಾಗುವುದಿಲ್ಲ.

ಆಹಾರ ಧಾನ್ಯಗಳ ಅಭಾವ ಬಹುವಾಗಿದೆ. ಯುದ್ಧಕ್ಕೆ ಮುಂಚೆಯೂ ಕೂಡ ನಮ್ಮ ದೇಶದಲ್ಲಿ ನಮ್ಮ ಜನಕ್ಕೆ ಬೇಕಾದಷ್ಟು ಆಹಾರಕ್ಕೆ ಧಾನ್ಯಗಳ ಉತ್ಪತ್ತಿಯಾಗುತ್ತಿರಲಿಲ್ಲ. ಗೋಧಿಯೇನೋ ಸಾಕಾಗುತ್ತಿತ್ತು; ಆದರೆ ಅಕ್ಕಿಯನ್ನು ವರ್ಷಕ್ಕೆ

25 ಲಕ್ಷ ಟನ್ನುಗಳಷ್ಟು* ಬರ್ಮಾ, ಸಯಾಂ ಮತ್ತು ಇಂಡೋ ಚೀನಾದಿಂದ ಆಮದು ಮಾಡಿಕೊಳ್ಳುತ್ತಿದ್ದೆವು. ಜಪಾನ್ ದೇಶವು ಈ ರಾಷ್ಟ್ರಗಳನ್ನು ಆಕ್ರಮಿಸಿಕೊಂಡ ಮೇಲೆ ಅಕ್ಕಿಯ ಆಮದು ಸಂಪೂರ್ಣವಾಗಿ ನಿಂತುಹೋಯಿತು. ಸಾಲದ್ದಕ್ಕೆ ನಮ್ಮ ದೇಶ ದಿಂದ ಅಕ್ಕಿ ಗೋಧಿಗಳು ಸಿಲೋನ್ ಮತ್ತು ಪ್ರಾಚ್ಯರಣರಂಗ ಗಳಿಗೆ ರಫ್ತಾಗಬೇಕಾಯಿತು.

ಹೀಗೆ ಒಂದು ಕಡೆ ಆಹಾರ ಧಾನ್ಯಗಳ ಸರಬರಾಜು ಕಡಮೆ ಯಾಗುತ್ತಿದ್ದರೆ, ಅವುಗಳಿಗೆ ಗಿರಾಕಿ ಬಹುವಾಗಿ ಹೆಚ್ಚಿದೆ. ಉದ್ಯೋಗವಿಲ್ಲದೆ ಅರ್ಧ ಹೊಟ್ಟೆ ಊಟಮಾಡುತ್ತಿದ್ದ ಲಕ್ಷಾಂತರ ಜನರು ಈಗ ಸೈನ್ಯದಲ್ಲಿಯೂ, ನೂರಾರು ಯುದ್ಧ ಕೈಗಾರಿಕೆ ಗಳಲ್ಲಿಯೂ, ಮತ್ತು ಹೊಸದಾಗಿ ಸ್ಥಾಪಿತವಾಗಿರುವ ಸರ್ಕಾರೀ ಕಛೇರಿಗಳಲ್ಲಿಯೂ ಕೆಲಸಮಾಡುತ್ತಿರುವುದರಿಂದ ಅವರ ವರಮಾನ ಬಹಳ ಹೆಚ್ಚಿ, ಅವರು ಹೆಚ್ಚು ಆಹಾರ ಧಾನ್ಯಗಳನ್ನು ಬಯಸು ತ್ತಾರೆ.

ಸಾರ್ವಜನಿಕರೂ, ವ್ಯವಸಾಯಗಾರರೂ ಮತ್ತು ವರ್ತಕರೂ ಆಹಾರ ಸಾಮುಗ್ರಿಗಳನ್ನು ದಾಸ್ತಾನುಮಾಡುತ್ತಿರುವುದು ಅಭಾ ವಕ್ಕೆ ಇನ್ನೊಂದು ಕಾರಣ. ಆದರೆ ಈ ರೀತಿಯ ದಾಸ್ತಾನು ಎಷ್ಟು ಪ್ರಮಾಣದಲ್ಲಿ ನಡೆದಿದೆ ಎಂದು ನಿರ್ಧರಮಾಡಿ ಹೇಳು ವುದು ಕಷ್ಟ.

ಯಾನವಾಹನ ಸೌಕರ್ಯಗಳು ಬಹುಮಟ್ಟಿಗೆ ಕಡಮೆ ಯಾಗಿರುವುದರಿಂದ ಪದಾರ್ಥಗಳ ಬೆಲೆ ಏರಲು ಸ್ವಲ್ಪ ಮಟ್ಟಿಗೆ ಅವಕಾಶವಾಗಿದೆ. ಮೋಟಾರು ವಾಹನಸೌಕರ್ಯ ಬಹಳ

* ಒಂದು ಟನ್ ಅಂದರೆ ಸುಮಾರು ಹತ್ತು ಪಲ್ಲ.

ಕಡಮೆಯಾಗಿದೆ. ರೈಲ್ವೆಗಳು ಸೈನಿಕರನ್ನೂ ಯುದ್ಧಸಾಮಗ್ರಿಗಳನ್ನೂ ರವಾನಿಸುವುದಕ್ಕಾಗಿ ಹೆಚ್ಚು ಉಪಯೋಗಿಸಲ್ಪಡುತ್ತಿರುವುದರಿಂದ ಆಹಾರ ಮತ್ತು ಇತರ ಉಪಯುಕ್ತ ಸಾಮಗ್ರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದು ಅತಿಕಷ್ಟವಾಗಿದೆ.

ಧಾರಣೆವಾಸಿಗಳು ಮಿತಿಮೀರಿ ಏರಿರುವುದಕ್ಕೆ ಎಲ್ಲಕ್ಕಿಂತಲೂ ಮುಖ್ಯ ಕಾರಣ ಹಣದ ಚಲಾವಣೆ ಹೆಚ್ಚಿರುವುದು. 1939ನೆಯ ಆಗಸ್ಟಿನಲ್ಲಿ ನೋಟಗಳ ಚಲಾವಣೆ 170 ಕೋಟಿ ರೂ. ಇದ್ದದು 1944ನೆಯ ಮಾರ್ಚಿ ಹೊತ್ತಿಗೆ 883 ಕೋಟಿಗೆ ಏರಿತು. ನೋಟುಗಳ ಚಲಾವಣೆ ಇಷ್ಟು ಹೆಚ್ಚಲು ಕಾರಣವೇನೆಂಬುದನ್ನು ಹಿಂದಿನ ಅಧ್ಯಾಯದಲ್ಲಿಯೇ ತಿಳಿಸಿದ್ದೇವೆ.

ಈ ಧಾರಣೆವಾಸಿಗಳ ಮತ್ತು ಆಹಾರಪರಿಸ್ಥಿತಿಯನ್ನು ಎದುರಿಸಲು ಇಂಡಿಯಾ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮವನ್ನು ಪರಿಶೀಲಿಸೋಣ.

ಮೊದಲನೆಯದಾಗಿ, ಸರ್ಕಾರವು ಜನರಿಂದ ತೆರಿಗೆ ಮತ್ತು ಸಾಲದ ರೂಪದಲ್ಲಿ ಬಹುಮಟ್ಟಿನ ಹಣವನ್ನು ಪಡೆದಿದೆ. ಹಳೆಯ ತೆರಿಗೆ ದರಗಳು ಹೆಚ್ಚಿವೆ; ಮತ್ತು ಅನೇಕ ಹೊಸ ತೆರಿಗೆಗಳು ವಿಧಿಸಲ್ಪಟ್ಟಿವೆ. ಅತ್ಯಲ್ಪ ವರಮಾನವುಳ್ಳವರೂ ಹಣವನ್ನು ಗಳಿಸಿ ಸರ್ಕಾರಕ್ಕೆ ಸಾಲಕೊಡುವಂತೆ ಪ್ರೇರೇಪಿಸಲು ಚಳುವಳಿ ನಡೆಯುತ್ತಿದೆ. ಒಟ್ಟಿನಲ್ಲಿ ಈ ಚಳುವಳಿ ಅಷ್ಟು ಯಶಸ್ವಿಯಾಗಿಲ್ಲ.

ಎರಡನೆಯದಾಗಿ, ಸರ್ಕಾರವು ಯುದ್ಧಾರಂಭದಿಂದ ಬೆಲೆ ಹತೋಟಿ ಕಾರ್ಯವನ್ನು ಕೈಗೊಂಡಿದೆ. 1939ನೆಯ ಸೆಪ್ಟೆಂಬರಿನಲ್ಲಿ ಕೆಲವು ಅವಶ್ಯಕವಾದ ಪದಾರ್ಥಗಳ ಬೆಲೆಯನ್ನು

ನಿಯಂತ್ರಿಸುವ ಹಕ್ಕು ಪ್ರಾಂತಸರ್ಕಾರಗಳಿಗೆ ಕೊಡಲ್ಪಟ್ಟಿತು. 1939 ನೆಯ ಅಕ್ಟೋಬರಿನಿಂದ 1942 ನೆಯ ಮೇವರೆಗೆ ಇಂಡಿಯಾ ಸರ್ಕಾರವು ಐದು ಬೆಲೆ ಹತೋಟಿ ಸಮ್ಮೇಳನಗಳನ್ನು ನಡೆಸಿತು. ಸರ್ಕಾರವು ವ್ಯಾಪಕವಾದ ಬೆಲೆ ಹತೋಟಿಯ ಯೋಜನೆಗಳನ್ನು ತಯಾರಿಸಿರಲಿಲ್ಲವಾದ್ದರಿಂದ ಈ ಸಮ್ಮೇಳನಗಳು ಫಲಕಾರಿಯಾಗಲಿಲ್ಲ. 1941 ನೆಯ ಡಿಸೆಂಬರ್‌ನಲ್ಲಿ ಗೋಧಿಯ ಬೆಲೆಯ ಮತ್ತು ಅದರ ಅಂತರ ಪ್ರಾಂತೀಯ ಚಲನೆಯ ಮೇಲೆ ಸರ್ಕಾರವು ಹತೋಟಿಯನ್ನೇರ್ಪಡಿಸಿತು. ಆದರೆ ಅನೇಕ ಕಾರಣಗಳಿಂದ—ಗೋಧಿಕಾಳಿನ ಬೆಲೆ ಇತರ ಧಾನ್ಯಗಳ ಬೆಲೆಗಿಂತ ಕಡಮೆಯಾಗಿದ್ದುದು, ಕೇಂದ್ರ ಸರ್ಕಾರಕ್ಕೂ ಗೋಧಿ ಬೆಳೆಯುವ ಪ್ರಾಂತಸರ್ಕಾರಗಳಿಗೂ ಒಡಂಬಡಿಕೆ ಇಲ್ಲದಿದ್ದುದು, ಗೋಧಿ ಬೆಳೆಯುವವರೂ ವ್ಯಾಪಾರಗಾರರೂ ಬಹುವಾಗಿ ದಾಸ್ತಾನುಮಾಡಿದುದು—ಗೋಧಿಯ ಮೇಲಿನ ಹತೋಟಿಯು ಯಶಸ್ವಿಯಾಗಲಿಲ್ಲ. ಗೋಧಿಯು ಪೇಟೆಗೆ ಬರುವುದು ಬಹಳ ಕಡಮೆಯಾಯಿತು. ಆದುದರಿಂದ 1943 ನೇ ಜನವರಿಯಲ್ಲಿ ಸರ್ಕಾರವು ಗೋಧಿಯ ಬೆಲೆಯ ಹತೋಟಿಯನ್ನು ರದ್ದು ಮಾಡಿತು. ಆದರೂ ಗೋಧಿ ಸರಬರಾಜಿನ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ.

1942 ರ ಆರಂಭದಿಂದ ಸಕ್ಕರೆ ಅಭಾವವು ಬಹು ಹೆಚ್ಚಿದುದರಿಂದ ಸರ್ಕಾರವು ಆ ವರ್ಷದ ಏಪ್ರಿಲ್‌ನಲ್ಲಿ ಸಕ್ಕರೆಯ ಹತೋಟಿಯ ಕಾನೂನನ್ನು ಜಾರಿಗೆ ತಂದಿತು. ಸಕ್ಕರೆ ಧಾರಣೆ ಹೆಚ್ಚಿಸಲ್ಪಟ್ಟರೂ, ಅದರ ಹಂಚಿಕೆಯು ಸುವ್ಯವಸ್ಥೆಯಿಂದ ನಡೆಯುತ್ತಿದೆ.

ದಾಸ್ತಾನ ಮಾಡುವುದನ್ನೂ ಸಟ್ಟಾವ್ಯಾಪಾರವನ್ನೂ ತಪ್ಪಿಸಲು 1942 ನೆಯ ಮೇ ತಿಂಗಳಲ್ಲಿ ಸರ್ಕಾರವು ಆಹಾರ ಧಾನ್ಯ

ಸಂಪೂರ್ಣವಾಗಿ ನಿಂತಿವೆ. ಆದರೆ ಆಮದುಮಾತ್ರ ಹೆಚ್ಚಾಗಿ ಬರುತ್ತಿಲ್ಲ. ಪಟ್ಟಣವಾಸದಲ್ಲಿ ಪಡಿಪದ್ಧತಿಯು ಶೀಘ್ರವಾಗಿ ಆಚರಣೆಗೆ ಬರುತ್ತಿದೆ. ಅಲ್ಲದೆ ಸರ್ಕಾರವು "ಆಹಾರ ಹೆಚ್ಚಿಗೆ ಬೆಳೆಯಿರಿ" ಚಳುವಳಿಯನ್ನು ಪ್ರೋತ್ಸಾಹಿಸುತ್ತಿದೆ. ಹತ್ತಿ ಬೆಳೆಯುತ್ತಿದ್ದ ಅನೇಕ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಬೆಳೆಯನ್ನು ಹೆಚ್ಚಿಸಲು, ರೈತರಿಗೆ ಎಕರೆ ಒಂದಕ್ಕೆ 2 ರೂಪಾಯಿನಂತೆ ಸರ್ಕಾರವು ಉತ್ತೇಜನದ್ರವ್ಯವನ್ನು ಕೊಡುತ್ತಿದೆ. ಆದರೂ ಇಲ್ಲಿಯವರೆಗೆ ಈ ಚಳುವಳಿ ಹೆಚ್ಚು ಫಲಕಾರಿಯಾಗಿಲ್ಲ. 1942–43 ರಲ್ಲಿ ಅಕ್ಕಿ ಸಾಗುವಳಿಯಲ್ಲಿ 13·4 ಲಕ್ಷ ಎಕರೆಗಳೂ, ಗೋಧಿ ಸಾಗುವಳಿಯಲ್ಲಿ 1·43 ಲಕ್ಷ ಎಕರೆಗಳೂ ಹೆಚ್ಚಿದವು. ಸರ್ಕಾರವು ಈ ಚಳುವಳಿಯ ಪ್ರೋತ್ಸಾಹಕ್ಕಾಗಿ 150 ಲಕ್ಷ ರೂ.ಗಳನ್ನು ವ್ಯಯಮಾಡಿದೆ.

ನಮ್ಮ ದೇಶದ ಆಹಾರಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ನಾವು ಹೆಚ್ಚಿಗೆ ಧಾನ್ಯವನ್ನು ಬೆಳೆಯಲೇಬೇಕು. "ಆಹಾರ ಹೆಚ್ಚಿಗೆ ಬೆಳೆಯಿರಿ" ಚಳುವಳಿ ಜಯಪ್ರದವಾಗಬೇಕಾದರೆ ಸರ್ಕಾರವು ಕೆಳಗೆ ತಿಳಿಸಿರುವ ವಿಶೇಷ ಕಾರ್ಯಕ್ರಮವನ್ನು ಕೈಕೊಳ್ಳಬೇಕು.

(i) ರೈತರಿಗೆ ಒಳ್ಳೆಯ ತರದ ಬೀಜಗಳನ್ನೊದಗಿಸಬೇಕು.

(ii) ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಸುಲಭ ದರದಲ್ಲಿ ಒದಗಿಸಬೇಕು.

(iii) ರೈತರಿಗೆ ಹೆಚ್ಚಿನ ಪರಿಮಿತಿಯಲ್ಲಿ ಸೀಮೆಗೊಬ್ಬರವನ್ನು ಸರಬರಾಜು ಮಾಡಬೇಕು. ಇದು ಬಹು ಅಗತ್ಯ.

(iv) ವ್ಯವಸಾಯಕ್ಕೋಸ್ಕರ ರೈತರಿಗೆ ಕಡಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡಬೇಕು.

(v) ರೈತರು ಕೊಡುವ ಭೂಕಂದಾಯ ಮತ್ತು ಇತರ ತೆರಿಗೆಗಳಲ್ಲಿ ರಿಯಾಯಿತಿ ತೋರಿಸಬೇಕು.

(vi) ಆಹಾರ ಧಾನ್ಯಗಳಿಗೆ ಯುದ್ಧಾನಂತರವೂ ಕೆಲವು ಕಾಲ ಕನಿಷ್ಟ ಪರಿಮಾಣದ ಬೆಲೆ ದೊರೆಯುತ್ತೆಂದು ಸರ್ಕಾರವು ರೈತರಿಗೆ ಭರವಸೆ ಕೊಡಬೇಕು.

---

೯. ಮೈಸೂರು ದೇಶದ ಆಹಾರ ಪರಿಸ್ಥಿತಿ

ಇಂಡಿಯಾ ದೇಶದ ಇತರ ಭಾಗಗಳಂತೆಯೇ ಮೈಸೂರು ಸಂಸ್ಥಾನದಲ್ಲಿಯೂ ಆಹಾರಧಾನ್ಯಗಳ ಬೆಲೆ ಅತ್ಯಧಿಕವಾಗಿ ಏರಿ, ಅವುಗಳ ಅಭಾವವು ಹೆಚ್ಚಿತು. ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ಸೂಕ್ತವಾದ ಕಾರ್ಯಕ್ರಮವನ್ನು ಕೈಕೊಂಡಿದೆ.

ನಮ್ಮ ಸಂಸ್ಥಾನದಲ್ಲಿ ಮುಖ್ಯ ಆಹಾರ ಧಾನ್ಯಗಳು ಮೂರು—ಅಕ್ಕಿ, ರಾಗಿ ಮತ್ತು ಜೋಳ. ನಾವು ಬೆಳೆಯುವ ರಾಗಿ ಮತ್ತು ಜೋಳವು ನಮ್ಮ ಜನರ ಉಪಯೋಗಕ್ಕೆ ಸಾಕು. ಆದರೆ ಅಕ್ಕಿ ಸಾಲದು. ಯುದ್ಧಕ್ಕೆ ಮುಂಚೆ ನಾವು ಸಂಸ್ಥಾನದ ಹೊರಗಡೆಯಿಂದ—ಮುಖ್ಯವಾಗಿ ಮದರಾಸು ಆಧಿಪತ್ಯದಿಂದ—ವರ್ಷಕ್ಕೆ ಸುಮಾರು 54,000 ಟನ್ನು ಅಕ್ಕಿಯನ್ನು ಆಮದು ಮಾಡುತ್ತಿದ್ದೆವು. ಈ ಆಮದು ಈಗ ಬಹಳ ಮಟ್ಟಿಗೆ ಕಡಮೆಯಾಗಿದೆ.

ಯುದ್ಧವಾರಂಭವಾದಂದಿನಿಂದ ಸರ್ಕಾರವು ಆಹಾರ ಧಾನ್ಯ

ಗಳ ಬೆಲೆಯನ್ನು ಆಗಿಂದಾಗ್ಗೆ ನಿಗದಿ ಮಾಡುತ್ತಿದೆ. ಆಹಾರ ಧಾನ್ಯಗಳ ಚಲನೆಯ ಮೇಲೆ ಸರ್ಕಾರವು ಸಂಪೂರ್ಣ ಹತೋಟಿ ಯನ್ನೇರ್ಪಡಿಸಿದೆ. ಸಂಸ್ಥಾನವನ್ನು ಕೊರತೆಯ ಮತ್ತು ಉಳಿತಾಯದ ಪ್ರದೇಶಗಳೆಂದು ವಿಂಗಡಿಸಿ, ಉಳಿತಾಯದ ಪ್ರದೇಶಗಳಿಂದ ಕೊರತೆಯ ಪ್ರದೇಶಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ಯೋಜನೆಯನ್ನು ತಯಾರಿಸಿದೆ.

ಸಂಸ್ಥಾನದಲ್ಲಿ ಬೆಳೆಯಲ್ಲಿ ಅಕ್ಕಿ, ರಾಗಿ ಮತ್ತು ಜೋಳವೆಲ್ಲವನ್ನೂ ಸರ್ಕಾರವೇ ನೇರವಾಗಿ ರೈತರಿಂದ ಕೊಳ್ಳುತ್ತಿದೆ. 1943ನೆಯ ಡಿಸೆಂಬರಿನ ಕೊಯಿಲು ಶಾಸನದ ಪ್ರಕಾರ ಈ ಆಹಾರ ಧಾನ್ಯಗಳನ್ನು ಬೆಳೆಯುವವರು, ತಮ್ಮ ಸ್ವಂತ ಉಪಯೋಗಕ್ಕೆ ಬೇಕಾದಷ್ಟು ಇಟ್ಟುಕೊಂಡು ಉಳಿದುದೆಲ್ಲವನ್ನೂ ಸರ್ಕಾರಕ್ಕೇ ಮಾರಬೇಕು. ಹೀಗೆ ಪಡೆದ ಧಾನ್ಯವನ್ನು ಸರ್ಕಾರವು ಸರ್ಕಾರೀ ಅಂಗಡಿಗಳ ಮೂಲಕವೂ ಖಾಸಗೀ ವರ್ತಕರ ಮತ್ತು ಸಹಕಾರ ಸಂಘಗಳ ಮೂಲಕವೂ ಜನರಿಗೆ ಹಂಚುತ್ತಿದೆ. ಪಟ್ಟಣವಾಸದಲ್ಲಿ ಪಡಿಪದ್ಧತಿಯನ್ನು ಜಾರಿಗೆ ತರುತ್ತಿದೆ. ಈಗಾಗಲೇ ಬೆಂಗಳೂರು, ಮೈಸೂರು, ಕೋಲಾರ, ಚಿಕ್ಕಮಗಳೂರು ದಾವಣಗೆರೆ ಮತ್ತು ತುಮಕೂರು ಮೊದಲಾದ ನಗರಗಳಲ್ಲಿ ಪಡಿಪದ್ಧತಿ ಏರ್ಪಟ್ಟಿದೆ.

ಸಂಸ್ಥಾನದ ಹೊರಗಿನಿಂದ ಆಹಾರ ಧಾನ್ಯಗಳನ್ನು ತರಲು ಸರ್ಕಾರವು ಪ್ರಯತ್ನಿಸಿದೆ. ಮೈಸೂರು ಸರ್ಕಾರಕ್ಕೂ ಇಂಡಿಯಾ ಸರ್ಕಾರಕ್ಕೂ ಮಾತುಕತೆ ನಡೆದುದರ ಫಲವಾಗಿ ವರ್ಷಕ್ಕೆ 22,000 ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಬ್ರಿಟಿಷ್ ಪ್ರಾಂತಗಳಿಂದ ಪಡೆಯಲು ನಮಗೆ ಅವಕಾಶ ದೊರೆತಿದೆ. ಕೊಡಗುಪ್ರಾಂತವು ವರ್ಷಕ್ಕೆ 10,000 ಟನ್ನು ಅಕ್ಕಿಯನ್ನು

ಸರಬರಾಜುಮಾಡಲು ಒಪ್ಪಿದೆ.

ಸಂಸ್ಥಾನದಲ್ಲಿ ಆಹಾರ ಬೆಳೆ ಹೆಚ್ಚಿಸಲು 1942ನೆಯ ಆಗಸ್ಟಿನಲ್ಲಿ ಸರ್ಕಾರವು "ಆಹಾರ ಹೆಚ್ಚಿಗೆ ಬೆಳೆಯಿರಿ" ಚಳುವಳಿಯನ್ನು ಆರಂಭಿಸಿತು. ಈ ಚಳುವಳಿಗೆ ಸರ್ಕಾರವು ಅನೇಕ ವಿಧವಾಗಿ ಸಹಾಯಮಾಡುತ್ತಿದೆ.

(i) ಸರ್ಕಾರವು ಒಳ್ಳೆಯ ಬೀಜಗಳನ್ನು ಅಸಲು ಬೆಲೆಯಲ್ಲಿ ರೈತರಿಗೆ ಒದಗಿಸುತ್ತಿದೆ. ರವಾನೆ ಮತ್ತು ಇತರ ಖರ್ಚನ್ನು ಸರಕಾರವೇ ವಹಿಸಿಕೊಳ್ಳುತ್ತಿದೆ.

(ii) ಒಳ್ಳೆಯ ಗೊಬ್ಬರವನ್ನು ಅಸಲು ಬೆಲೆಗೆ 25% ಕಡಮೆ ದರದಲ್ಲಿ ರೈತರಿಗೆ ಮಾರುತ್ತಿದೆ. ಈ ವೆಚ್ಚಕ್ಕಾಗಿ $4\frac{1}{2}$ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದೆ.

(iii) ರೈತರು ತಮ್ಮ ಜಮೀನನ್ನು ಉಳುವುದಕ್ಕೆ ವ್ಯವಸಾಯ ಇಲಾಖೆಯ ಟ್ರಾಕ್ಟರ್ (Tractor) ಎಂಬ ಯಂತ್ರವನ್ನು, ಎಕರೆಗೆ 4 ರೂಗಳಂತೆ ಬಾಡಿಗೆಗಾಗಿ ಕೊಡುತ್ತಿದೆ.

(vi) ವ್ಯವಸಾಯಗಾರರಿಗೆ ಬಹಳ ಸುಲಭ ದರದಲ್ಲಿ ($3\frac{1}{2}$%) ತಕಾವಿಸಾಲಗಳನ್ನು ಕೊಡುತ್ತಿದೆ. ಸಾಲವನ್ನು ವಾಯಿದೆ ಒಳಗೆ ಪಾವತಿ ಮಾಡಿದರೆ ಬಡ್ಡಿಯು ವಜಾ ಆಗುವುದು.

(v) ವ್ಯಸಾಯಕ್ಕೆ ಬೇಕಾದ ಸಲಕರಣೆಗಳು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನಕಾರ್ಖಾನೆಯಲ್ಲಿಯೂ, ಹಾಸನದ ಉಪಕರಣ ಕಾರ್ಖಾನೆಯಲ್ಲಿಯೂ ತಯಾರಾಗುತ್ತಿವೆ. ಇವನ್ನು ಸರ್ಕಾರವು ಕೇವಲ 2% ಲಾಭಕ್ಕೆ ರೈತರಿಗೆ ಮಾರುತ್ತಿದೆ.

(vi) ಬೀಳುಬಿಟ್ಟ ಭೂಮಿಯನ್ನು ಸಾಗುವಳಿಗೆ ತರಲು ರೈತರಿಗೆ ಅನೇಕ ರಿಯಾಯಿತಿಯನ್ನು ತೋರಿಸಲಾಗಿದೆ.

ಈ ಕಾರ್ಯಕ್ರಮದ ಫಲವಾಗಿ 1943ನೆಯ ಡಿಸೆಂಬರಿನ ವರೆಗೆ 76,021 ಎಕರೆ ಜಮೀನು ಹೊಸದಾಗಿ ಸಾಗುವಳಿಗೆ ಬಂದಿತು.

ಆಹಾರ ಇಲಾಖೆಯ ಆಡಳಿತಕ್ಕೋಸ್ಕರ ಸರ್ಕಾರವು ವರ್ಷಕ್ಕೆ ಸುಮಾರು 25 ಲಕ್ಷ ರೂಪಾಯಿಗಳನ್ನು ವೆಚ್ಚಮಾಡುತ್ತಿದೆ. ಸಂಸ್ಥಾನದ ಹೊರಭಾಗದಿಂದ ತರುವ ಧಾನ್ಯಗಳಿಗೆ ಸರ್ಕಾರವು ಹೆಚ್ಚು ಬೆಲೆಕೊಟ್ಟು, ಅವನ್ನು ಇಲ್ಲಿ ಕಡಮೆ ಬೆಲೆಗೆ ಮಾರುತ್ತಿದೆ. ಇದರಿಂದಾಗುವ ಸುಮಾರು 15 ಲಕ್ಷ ರೂಪಾಯಿಗಳಷ್ಟು ನಷ್ಟವನ್ನು ಸರ್ಕಾರವೇ ವಹಿಸಿಕೊಂಡಿದೆ.

ಒಟ್ಟಿನಲ್ಲಿ ನಮ್ಮ ಸಂಸ್ಥಾನದ ಆಹಾರ ಪರಿಸ್ಥಿತಿಯು ಸಮರ್ಪಕವಾಗಿದೆ. ನಮ್ಮ ಆಹಾರ ಸರಬರಾಜಿನ ವ್ಯವಸ್ಥೆಯು ಇಂಡಿಯಾ ಸರ್ಕಾರದ ಮನ್ನಣೆಯನ್ನು ಪಡೆದಿದೆ.

೧೦. ಬಟ್ಟೆ ಮತ್ತು ಇತರ ಪದಾರ್ಥಗಳ ಸರಬರಾಜು

ನಮ್ಮ ದೇಶದಲ್ಲಿ ಆಹಾರ ಬಿಟ್ಟರೆ, ಬಟ್ಟೆಯ ಅಭಾವವು ತೀವ್ರವಾಗಿ ಹೆಚ್ಚಿದೆ. 1943ನೆಯ ಏಪ್ರಿಲಿನ ಹೊತ್ತಿಗೆ ಬಟ್ಟೆ ಬೆಲೆಗಳು 1939ನೆಯ ಆಗಸ್ಟಿನಲ್ಲಿ ಇದ್ದುದಕ್ಕೆ ನಾಲ್ಕೂವರೆಯಷ್ಟು ಹೆಚ್ಚಿದವು.* ಸರ್ಕಾರವು ಯುದ್ಧಕೆಲಸಗಳಿಗಾಗಿ ಬಟ್ಟೆಯನ್ನು ಹೆಚ್ಚು ಪರಿಮಿತಿಯಲ್ಲಿ ಕೊಳ್ಳಲಾರಂಭಿಸಿತು. ಅಲ್ಲದೆ ಪರದೇಶಗಳಿಂದ, ಮುಖ್ಯವಾಗಿ ಜಪಾನುದೇಶದಿಂದ, ಬಟ್ಟೆ ಆಮದಾಗುತ್ತಿದ್ದುದು ಕ್ರಮೇಣ ನಿಂತುಹೋಯಿತು. ನೂಲಿನ ಅಭಾವದಿಂದ ಕೈಮಗ್ಗದ ತಯಾರಿಕೆಯೂ ಬಹಳ ಮಟ್ಟಿಗೆ ಕಡಮೆಯಾಯಿತು. ಸಾಲದ್ದಕ್ಕೆ ಇಂಡಿಯಾ ದೇಶದಿಂದ ಬಟ್ಟೆ ರಫ್ತು ಹೆಚ್ಚಿತು. ದೇಶದಲ್ಲಿ ನಡೆಯುತ್ತಿರುವ ಹತ್ತಿ ಬಟ್ಟೆಗಳ ತಯಾರಿಕೆ, ಆಮದು ಮತ್ತು ರಫ್ತು ಇವುಗಳಿಗೆ ಸಂಬಂಧಪಟ್ಟ ಅಂಕಿಗಳನ್ನು ಇಲ್ಲಿ ಕೊಟ್ಟಿದೆ.

ವರ್ಷ	ಗಿರಿಣಿಗಳ ತಯಾರಿಕೆ ಕೋಟಿಗಜಗಳು	ಆಮದು ಕೋಟಿಗಜಗಳು	ರಫ್ತು. ಕೋಟಿ ಗಜಗಳು
1937-38	408.43	59.08	25.38
1938-39	426.93	64.71	19.27
1939-40	401.24	57.91	23.80
1940-41	426.94	44.70	43.36
1941-42	449.35	18.16	85.46
1942-43	402.92	1.31	83.43

* ೪೭ನೇ ಪುಟದಲ್ಲಿರುವ ಪಟ್ಟಿಯನ್ನು ನೋಡಿ

ಈ ಎಲ್ಲ ಕಾರಣಗಳಿಂದ ಸಾರ್ವಜನಿಕರಿಗೆ ಹತ್ತಿ ಬಟ್ಟೆ ಸರಬರಾಜು 67%ರಷ್ಟು ಕಡಮೆಯಾಯಿತೆಂದು ಅಂದಾಜಾಗಿದೆ. ತಯಾರಾದ ಉಣ್ಣೆಬಟ್ಟೆ ಎಲ್ಲವನ್ನೂ ಸರ್ಕಾರವೇ ಸ್ವಾಧೀನಪಡಿಸಿಕೊಂಡಿತು. ಆದುದರಿಂದ ಬಟ್ಟೆ ಧಾರಣೆ ಅತ್ಯಧಿಕವಾಗಿ ಏರಿತು. ಯುದ್ಧಕ್ಕೆ ಮೊದಲೇ ನಮ್ಮ ಜನರು ಮೈತುಂಬ ಬಟ್ಟೆಯನ್ನು ಹಾಕಲು ಶಕ್ತರಾಗಿರಲಿಲ್ಲ. ಈಗಂತೂ ಅವರ ತೊಂದರೆ ಹೇಳತೀರದು. ಆದುದರಿಂದ ಸರ್ಕಾರವು ಮಧ್ಯೆ ಬಂದು ಬಟ್ಟೆ ಧಾರಣೆಯನ್ನು ಹತೋಟಿಗೊಳಪಡಿಸಬೇಕಾಯಿತು. 1943ನೆಯ ಜೂನ್ ತಿಂಗಳಲ್ಲಿ ಬಟ್ಟೆ ಮತ್ತು ನೂಲಿನ ಕಾನೂನಿನ ಪ್ರಕಾರ ಬಟ್ಟೆ ವ್ಯಾಪಾರಗಾರರು ತಮ್ಮಲ್ಲಿರುವ ಮಾಲಿನ ಪರಿಮಿತಿಯನ್ನು ಸರ್ಕಾರಕ್ಕೆ ಆಗಸ್ಟ 15ಕ್ಕೆ ಮುಂಚೆ ತಿಳಿಯಪಡಿಸಬೇಕು. ಆಗಸ್ಟ 1ನೆಯ ತಾರೀಕಿನಿಂದ ತಯಾರಾದ ಬಟ್ಟೆಗಳೆಲ್ಲವೂ ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಮುದ್ರೆಯನ್ನು ಹೊಂದಿರಬೇಕು ಈಚೆಗೆ ತಯಾರಾಗುವ ಬಟ್ಟೆಗಳ ಮೇಲೆ ಬೆಲೆಯೂ ಕೂಡ ಮುದ್ರಿಸಲ್ಪಡಬೇಕು. ಬಟ್ಟೆ ತಯಾರಿಕೆ ಮತ್ತು ಬೆಲೆಯನ್ನು ಹತೋಟಿಯಲ್ಲಿಡಲು ಸರ್ಕಾರವು ಒಂದು ಮಂಡಳಿಯನ್ನೇರ್ಪಡಿಸಿತು. ಮುದ್ರೆಯಿಲ್ಲದ ಮಾಲು ಸುಮಾರು 270 ಕೋಟಿ ಗಜದಷ್ಟು ಇತ್ತು ಎಂದು ಅಂದಾಜಾಗಿದೆ. ಇದರ ಜತೆಗೆ ಸರ್ಕಾರವು ಬಡವರಿಗೆ ಅನುಕೂಲವಾಗುವಂತೆ ಸ್ಟಾಂಡರ್ಡ್ ಬಟ್ಟೆ ತಯಾರಿಕೆ ವ್ಯವಸ್ಥೆಯನ್ನು ಏರ್ಪಡಿಸಿತು. ಈ ಕಾರ್ಯಕ್ರಮಗಳ ಫಲವಾಗಿ ಬಟ್ಟೆಯ ಬೆಲೆಗಳು 1943ನೆಯ ಜೂನಲ್ಲಿ ಇದ್ದ ಪರಮಾವಧಿ ಮಟ್ಟಕ್ಕಿಂತ ಶೇಕಡ 20ರಿಂದ 40ರ ವರೆಗೆ ಸ್ವಲ್ಪ ಕಾಲ ಇಳಿದು, ಮತ್ತೆ ಸ್ವಲ್ಪ ಏರಲಾರಂಭಿಸಿದವು. ಬಟ್ಟೆ ಬೆಲೆಗಳು ಬಹಳ ದುಬಾರಿಯಾಗಿಯೇ

ಇವೆ. ಬಟ್ಟೆ ಹತೋಟಿಯಿಂದ ಜನಸಾಮಾನ್ಯಕ್ಕೆ ಪ್ರಯೋಜನವಾಗಬೇಕಾದರೆ ಧಾರಣೆಗಳು ಇನ್ನೂ ಬಹಳ ಇಳಿಯಬೇಕು. ಸ್ಟಾಂಡರ್ಡ್ ಬಟ್ಟೆ ವ್ಯವಸ್ಥೆ ಫಲಕಾರಿಯಾಗಬೇಕಾದರೆ, ಬಟ್ಟೆಗಳ ಬೆಲೆ ಕಡಮೆಯಾಗಬೇಕು ಮತ್ತು ಅವುಗಳಲ್ಲಿ ಸ್ವಲ್ಪ ಮಟ್ಟಿಗಾದರೂ ವೈವಿಧ್ಯವಿರಬೇಕು. ಸರ್ಕಾರವು ಕೈಮಗ್ಗದ ತಯಾರಿಕೆಯನ್ನು ಹೆಚ್ಚಿಸಬೇಕು. ಬಟ್ಟೆಯ ಹಂಚಿಕೆಯಲ್ಲಿಯೂ ಪಡಿಪದ್ಧತಿ ಏರ್ಪಡುವುದು ಅವಶ್ಯಕವೆಂದು ಕಾಣುತ್ತದೆ.

ಆಹಾರಧಾನ್ಯಗಳು ಮತ್ತು ಬಟ್ಟೆಯಲ್ಲದೆ, ಔಷಧಿಗಳು, ಗಡಿಯಾರ, ಕಾಗದ, ಗಾಜಿನ ಸಾಮಾನು, ಬೈಸಿಕಲ್ಲು, ಮೊದಲಾದ ಅನೇಕ ಪದಾರ್ಥಗಳ ಧಾರಣೆಗಳು ಅತ್ಯಧಿಕವಾಗಿ ಏರಿವೆ. ವರ್ತಕರು ಈ ಸಾಮಗ್ರಿಗಳನ್ನು ಬಹುವಾಗಿ ದಾಸ್ತಾನು ಮಾಡಿ, ಅಧಿಕ ಲಾಭವನ್ನು ಸಂಪಾದಿಸುತ್ತಿದ್ದಾರೆ. 1943ನೆಯ ಅಕ್ಟೋಬರಿನಲ್ಲಿ ದಾಸ್ತಾನು ಮತ್ತು ಲಾಭಖೋರತನವನ್ನು ನಿಷೇಧಿಸುವ ಆಜ್ಞೆಯನ್ನು ಸರ್ಕಾರವು ಹೊರಡಿಸಿತು. ಈ ಶಾಸನವು ಈ ದೇಶದಲ್ಲಿ ತಯಾರಾದ ಮತ್ತು ಹೊರದೇಶಗಳಿಂದ ಆಮದಾಗುವ ಸಮಸ್ತ ಸಾಮಗ್ರಿಗಳಿಗೂ ಅನ್ವಯಿಸುತ್ತದೆ. ಬೈಸಿಕಲ್, ಸಿಗರೇಟು, ಔಷಧಿಗಳು, ಬ್ಲೇಡು, ಸೋಪು, ಕಾಗದ, ಉಪ್ಪು, ಹುಣಿಸೇಹಣ್ಣು, ಗಡಿಯಾರ, ಟೆನ್ನಿಸು ಚೆಂಡುಗಳು ಮೊದಲಾದ ಪದಾರ್ಥಗಳ ಬೆಲೆಯನ್ನು ಸರ್ಕಾರವು ನಿಗದಿ ಮಾಡಿದೆ. ಔಷಧಿಗಳ ಬೆಲೆ ಮತ್ತು ಹಂಚಿಕೆಯನ್ನು ಹತೋಟಿಗೊಳಪಡಿಸುವ ಪ್ರತ್ಯೇಕ ಆಜ್ಞೆಯು 1943ನೆಯ ನವೆಂಬರಿನಲ್ಲಿ ಜಾರಿಗೆ ಬಂದಿತು. ಈ ಆಜ್ಞೆಗಳು ಅಷ್ಟೇನೂ ಫಲಕಾರಿಯಾಗಿಲ್ಲ. ಸರ್ಕಾರವು ನಿಗದಿಮಾಡಿರುವ ಬೆಲೆಗೆ ಪದಾರ್ಥಗಳು ದೊರೆಯುವುದು ಬಹಳ ಕಷ್ಟ. ನಿಗದಿಮಾಡಿರುವ ಬೆಲೆಗೆ ಪದಾರ್ಥಗಳನ್ನು

ಕೇಳಿದರೆ, ಪದಾರ್ಥವು "ಸ್ಟಾಕ್ ಇಲ್ಲ" ಎಂಬ ಉತ್ತರವೇ ಬರುವುದು.

ಧಾರಣೆವಾಸಿ ಇಳಿದು, ಜನರಿಗೆ ಅವಶ್ಯಕವಾದ ಪದಾರ್ಥಗಳು ದೊರಕಿ, ಜನರ ಕಷ್ಟ ಕಡಮೆಯಾಗಬೇಕಾದರೆ,

(i) ಪದಾರ್ಥಗಳ ತಯಾರಿಕೆ ಹೆಚ್ಚಬೇಕು. ಯುದ್ಧಕ್ಕೆ ಮುಂಚೆ ನಾವು ಪರದೇಶಗಳಿಂದ ಆಮದು ಮಾಡುತ್ತಿದ್ದ ಪದಾರ್ಥಗಳಲ್ಲಿ ಅನೇಕವನ್ನು ನಮ್ಮ ದೇಶದಲ್ಲೇ ತಯಾರಿಸಬಹುದು. ಈಗಾಗಲೇ ಔಷಧಿ, ಗಾಜು, ಕಾಗದ ಮೊದಲಾದ ಪದಾರ್ಥಗಳ ತಯಾರಿಕೆ ಹೆಚ್ಚಿದೆ. ಇನ್ನೂ ಹೆಚ್ಚಬೇಕು.

(ii) ಸರ್ಕಾರವು ನೋಟುಗಳ ಚಲಾವಣೆ ಹೆಚ್ಚುವುದನ್ನು ನಿಲ್ಲಿಸಿ, ಇಂಗ್ಲೆಂಡಿನ ಸರ್ಕಾರದ ವೆಚ್ಚಕ್ಕೆ ಬೇಕಾದ ಹಣವನ್ನು ರೂಪಾಯಿ ಸಾಲದ ಮೂಲಕ ಪಡೆಯಬೇಕು. ನೋಟುಗಳ ಚಲಾವಣೆ ಹೆಚ್ಚುತ್ತಿದ್ದರೆ ಬೆಲೆ ಹತೋಟಿಕಾರ್ಯವು ಖಂಡಿತವಾಗಿಯೂ ಫಲಕಾರಿಯಾಗುವುದಿಲ್ಲ.

(iii) ಜನರು ಆದಷ್ಟು ಹಣ ಕೂಡಿಟ್ಟು ಸರ್ಕಾರಕ್ಕೆ ಸಾಲವಾಗಿ ಕೊಡಬೇಕು. ಮತ್ತು ಪದಾರ್ಥಗಳನ್ನು ಕೊಳ್ಳುವುದನ್ನು ಸಾಧ್ಯವಾದಷ್ಟು ಮುಂದಕ್ಕೆ ತಳ್ಳಬೇಕು.

ಈ ಧ್ಯೇಯಗಳನ್ನು ಸಾಗಿಸುವುದಕ್ಕೆ ಸರ್ಕಾರವೂ ಸಾರ್ವಜನಿಕರೂ ಪೂರ್ಣವಾಗಿ ಸಹಕರಿಸಿ, ವಿಶ್ರಾಂತಿಯಿಲ್ಲದೆ ದುಡಿಯಬೇಕು.

೧೧. ಪರಿಸಮಾಪ್ತಿ

ಇಲ್ಲಿಯವರೆಗೆ ಯುದ್ಧದಿಂದ ಒದಗುವ ಅನೇಕ ಆರ್ಥಿಕ ಸಮಸ್ಯೆಗಳನ್ನು ಪರಿಶೀಲಿಸಿದ್ದಾಯಿತು. ಯುದ್ಧವು ಕೊನೆಗೊಂಡಮೇಲೂ ನಿರುದ್ಯೋಗ, ಕೈಗಾರಿಕೆ ಮುಗ್ಗಟ್ಟು ಇವೇ ಮೊದಲಾದ ಅನೇಕ ಬಗೆಯ ಕಠಿಣ ಆರ್ಥಿಕ ಸಮಸ್ಯೆಗಳು ತಲೆದೋರುವುವು. ಒಟ್ಟಿನಲ್ಲಿ ಯುದ್ಧದಿಂದುಂಟಾಗುವ ಆರ್ಥಿಕ ತೊಂದರೆ ಅಷ್ಟಿಷ್ಟಲ್ಲ.

ಪ್ರಾಜ್ಞರು ಯುದ್ಧವನ್ನು ಅನೇಕ ದೃಷ್ಟಿಗಳಿಂದ ಖಂಡಿಸಿದ್ದಾರೆ. ಆರ್ಥಿಕ ದೃಷ್ಟಿಯಿಂದಲೂ ಯುದ್ಧವು ಖಂಡನೆಗೆ ಅರ್ಹವಾಗಿದೆ. ಆಧುನಿಕ ಯುದ್ಧದಿಂದ ಲಕ್ಷಾಂತರ ಪ್ರಜೆಗಳು ಮಡಿಯುವುದಲ್ಲದೆ, ದೇಶದ ಆರ್ಥಿಕ ಸಂಪತ್ತು ಅತ್ಯಧಿಕ ಪ್ರಮಾಣದಲ್ಲಿ ವ್ಯರ್ಥವಾಗುವುದು. ಸರ್ಕಾರಗಳು ಯುದ್ಧಕ್ಕೋಸ್ಕರ ವೆಚ್ಚ ಮಾಡುತ್ತಿರುವ ಅಪಾರವಾದ ಹಣದ ಸಹಾಯದಿಂದ ಬಡತನ, ನಿರುದ್ಯೋಗ, ನಿರಕ್ಷರತೆ ರೋಗರುಜಿನಗಳೇ ಮೊದಲಾದ ಶಾಂತಿಕಾಲದ ಶತ್ರುಗಳನ್ನು (Enemies of Peace) ನಿರ್ಮೂಲಮಾಡಿ ಪ್ರಜಾಸೌಖ್ಯವನ್ನು ಅಭಿವೃದ್ಧಿಗೊಳಿಸಬಹುದು. ಕಳೆದ ಮಹಾಯುದ್ಧದಲ್ಲಿ ಭಾಗವಹಿಸಿದ್ದ ರಾಷ್ಟ್ರಗಳು ಯುದ್ಧಕ್ಕೋಸ್ಕರ ಒಟ್ಟು ಸುಮಾರು 110,000 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದವು. ಈ ಯುದ್ಧದಲ್ಲಿ ಇದಕ್ಕೆ ಹತ್ತರಷ್ಟಾದರೂ ಖರ್ಚಾಗುವುದರಲ್ಲಿ ಸಂದೇಹವಿಲ್ಲ. ಈ ಧನ ಸಂಪತ್ತಿನಿಂದ ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಬಹುದು, ಎಷ್ಟು ಲಕ್ಷಗಟ್ಟಲೆ ಮನೆಮಠಗಳನ್ನು ಕಟ್ಟಬಹುದು, ಎಷ್ಟು ವಿದ್ಯಾಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಬಹುದು

ಎಂಬುದನ್ನು ಓದುಗರು ಊಹಿಸಬಹುದು. ಆದುದರಿಂದ ಯುದ್ಧಗಳು ತಪ್ಪಿ ಚಿರಕಾಲವೂ ವಿಶ್ವಶಾಂತಿ ಏರ್ಪಡುವಂತೆ ಪ್ರತಿಯೊಂದು ಸರ್ಕಾರವೂ ಪ್ರತಿಯೊಬ್ಬ ಪ್ರಜೆಯೂ ಅವಿಶ್ರಾಂತವಾಗಿ ದುಡಿಯಬೇಕು.

ಯುದ್ಧಾನಂತರ

ಈ ಪುಸ್ತಕವನ್ನು ಬರೆದು ಆಗಲೇ ಹನ್ನೆರಡು ವರುಷಗಳಾಗಿವೆ. ಈ ಮಧ್ಯೆ ನಮ್ಮ ದೇಶದಲ್ಲಿಯೂ ಮತ್ತು ಇತರ ದೇಶಗಳಲ್ಲಿಯೂ ಅನೇಕ ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳಾಗಿವೆ. ಇದನ್ನು ಬರೆದ ಒಂದು ವರುಷದಲ್ಲಿಯೇ ಎರಡನೆಯ ಮಹಾ ಯುದ್ಧವು ಕೊನೆಗೊಂಡಿತು. ಇದರ ಫಲವಾಗಿ ದೇಶಗಳ ಆರ್ಥಿಕ ಸಮಸ್ಯೆಗಳು ಬದಲಾವಣೆ ಹೊಂದಿದವು. ಯುದ್ಧ ಕಾಲದಲ್ಲಿ ತೋರಿಬಂದ ಸಮಸ್ಯೆಗಳಿಗಿಂತ, ಒಂದು ವಿಧದಲ್ಲಿ, ಯುದ್ಧಾನಂತರ ಕಂಡ ಸಮಸ್ಯೆಗಳು ಕಠಿಣವಾಗಿದ್ದವು. ದೇಶಗಳು ಅವುಗಳ ಪರಿಹಾರಕ್ಕೆ ತಮ್ಮ ಆರ್ಥಿಕ ನೀತಿಯನ್ನು ಬದಲಾಯಿಸಬೇಕಾಯಿತು. ಯೂರೋಪಿನ ರಾಷ್ಟ್ರಗಳೆಲ್ಲಾ ಸೇರಿ "ಮಾರ್ಷಲ್ ಯೋಜನೆಯ (Marshall Plan) ಮೂಲಕ ಅಮೇರಿಕಾ ರಾಷ್ಟ್ರದಿಂದ ಬಹಳ ಧನಸಹಾಯ ಪಡೆದು, ಯುದ್ಧದಿಂದ ಶಿಥಿಲವಾಗಿದ್ದ ಆರ್ಥಿಕ ವ್ಯವಸ್ಥೆಯನ್ನು ಬಹು ಶೀಘ್ರವಾಗಿ ಸರಿಪಡಿಸಿಕೊಂಡವು. ಯುದ್ಧ ಕಳೆದ 4-5 ವರುಷಗಳಲ್ಲಿ ಯುದ್ಧಾರಂಭಕ್ಕೆ ಮೊದಲಿದ್ದುದಕ್ಕಿಂತ ಆರ್ಥಿಕಪ್ರಗತಿ—ಅಂದರೆ ಕೈಗಾರಿಕೆ ಮತ್ತು ವ್ಯವಸಾಯದ ಉತ್ಪತ್ತಿ ಮತ್ತು ವ್ಯಾಪಾರದ ಬೆಳವಣಿಗೆ—ಬಹುವಾಗಿ ಮುಂದುವರಿಯಿತು. ಆರ್ಥಿಕ ವ್ಯವಸ್ಥೆಯ ಶಾಂತಿಕಾಲದ ಪರಿವರ್ತನೆಯು ಇಷ್ಟು ಶೀಘ್ರವಾಗಿ ನಡೆಯುವುದೆಂದು ಯಾರೂ ತಿಳಿದಿರಲಿಲ್ಲ.

ಆರ್ಥಿಕಾಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಸಹಕಾರ ಬೆಳೆಯಿತು. ಈ ಸಂದರ್ಭದಲ್ಲಿ ಎರಡು ಪ್ರಪಂಚ ಸಂಸ್ಥೆಗಳು 1946 ರಲ್ಲಿ ಸ್ಥಾಪನೆಗೊಂಡುವು. ಇವು ಅಂತರರಾಷ್ಟ್ರೀಯ ಪ್ರಗತಿ

ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣದ ನಿಧಿ. ಮೊದಲನೆಯ ಸಂಸ್ಥೆ ದೀರ್ಘಕಾಲದ ಸಾಲಕೊಡುತ್ತದೆ; ಎರಡನೆಯ ಸಂಸ್ಥೆಯು ಅಲ್ಪಾವಧಿ ಸಾಲ ಒದಗಿಸುತ್ತದೆ. ನಮ್ಮ ದೇಶವು, ಎರಡು ಸಂಸ್ಥೆಗಳಲ್ಲಿಯೂ ಸದಸ್ಯತ್ವವನ್ನು ಹೊಂದಿದೆ ಮತ್ತು ಧನ ಸಹಾಯವನ್ನೂ ಪಡೆದಿದೆ. ಈ ಸಂಸ್ಥೆಗಳ ಮೂಲಕವಲ್ಲದೇ, ನೇರವಾಗಿ, ಕೆಲವು ರಾಷ್ಟ್ರಗಳು, ಮುಖ್ಯವಾಗಿ ಅಮೇರಿಕಾ ದೇಶವು ಸಹಾಯ ಮಾಡಲಾರಂಭಿಸಿತು. ಆದರೆ ಇಷ್ಟರಲ್ಲಿಯೇ ಮತ್ತೊಂದು ಯುದ್ಧವು ಆರಂಭಿಸಿ ಆರ್ಥಿಕಾಭಿವೃದ್ಧಿಗೆ ಧಕ್ಕೆ ಬಂದಿತು. 1950 ನೇ ಜೂನಿನಲ್ಲಿ ಕೊರಿಯಾ ದೇಶದಲ್ಲಿ ಯುದ್ಧವುಂಟಾಗಿ, ಅನೇಕ ರಾಷ್ಟ್ರಗಳು ಅದರಲ್ಲಿ ಭಾಗವಹಿಸಬೇಕಾಯಿತು. ಇದರಿಂದ ಪ್ರಪಂಚದ ಆರ್ಥಿಕಸ್ಥಿತಿ ಮತ್ತು ನೀತಿ ಬದಲಾವಣೆ ಹೊಂದಿತು.

ಧಾರಣೆವಾಸಿ ಏರಿ, ಅನೇಕ ದೇಶಗಳಲ್ಲಿ ಹಣದ ಉಬ್ಬರ ಉಂಟಾಯಿತು. ಆದರೆ, ದೈವವಶಾತ್, ಇದು ಮಹಾ ಯುದ್ಧವಾಗಿ ಪರಿಣಮಿಸಲಿಲ್ಲ. ಸುಮಾರು ಒಂದು ವರ್ಷದ ನಂತರ ಕೊರಿಯಾ ಯುದ್ಧವು ಬಹುಮಟ್ಟಿಗೆ ನಿಂತಂತಾಯಿತು. ಆದರೆ ಈ ಯುದ್ಧವು ರಾಷ್ಟ್ರಗಳ ರಕ್ಷಣಾನೀತಿಯ ಮೇಲೆ ಪರಿಣಾಮವನ್ನುಂಟುಮಾಡಿತು. ಮುಖ್ಯವಾಗಿ, ರಕ್ಷಣಾವೆಚ್ಚ ಮತ್ತೆ ಬಹು ಅಧಿಕವಾಯಿತು. ಹೊಸ ಹೊಸ ಶಸ್ತ್ರಗಳು, ಅಂದರೆ ಅಣು ಬಾಂಬು ಮತ್ತು ಜಲಜನಕ ಬಾಂಬು, ಮತ್ತು ಇವನ್ನು ಸಾಗಿಸಲು ಹೊಸ ವಿಮಾನಗಳು, ಇತ್ಯಾದಿಗಳ ಮೇಲಿನ ಮತ್ತು ಹೆಚ್ಚಿಗೆ ಸೈನಿಕ ತಂಡದ ಖರ್ಚು ಏರಿತು. ಉದಾಹರಣೆಗೆ, ಅಮೇರಿಕಾ ದೇಶದ ರಕ್ಷಣಾ ವೆಚ್ಚ 1947–48 ರಲ್ಲಿ ಸುಮಾರು 6,000 ಕೋಟಿ ರೂ. ಇದ್ದದ್ದು, ಕಳೆದ ವರುಷ ಸುಮಾರು

25,000 ಕೋಟಿ ರೂ.ಗಳ ವರೆಗೆ ಏರಿತು. ಇತ್ತೀಚೆಗೆ ಅಂತರ ರಾಷ್ಟ್ರೀಯ ವಾತಾವರಣವು ಸ್ವಲ್ಪ ಉತ್ತಮಗೊಂಡಹಾಗೆ ಕಾಣುತ್ತೆ. ಹಿಂದುಳಿದ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೆ ಮುಂದುವರಿದ ರಾಷ್ಟ್ರಗಳ ಸಹಾಯ ಕ್ರಮೇಣ ಅಧಿಕಗೊಳ್ಳುತ್ತಿದೆ.

ಇದೆಲ್ಲ ಪ್ರಪಂಚದ ಒಟ್ಟು ಮಾತಾಯಿತು. ಈಗ ನಮ್ಮ ದೇಶದಲ್ಲಿ ಉಂಟಾದ ಮಾರ್ಪಾಡುಗಳನ್ನು ಪರಿಶೀಲಿಸೋಣ. ಯುದ್ಧಾನಂತರದ ಆರ್ಥಿಕ ಸಮಸ್ಯೆಗಳ ಜತೆಗೆ ಕಠಿಣ ರಾಜಕೀಯ ಸಮಸ್ಯೆಗಳು ತಲೆದೋರಿದುವು. ನಮ್ಮ ದೇಶದ ಸ್ವಾತಂತ್ರ್ಯದ ವಿಚಾರದಲ್ಲಿ ಬ್ರಿಟಿಷ್ ಸರ್ಕಾರಕ್ಕೂ ನಮ್ಮ ರಾಜಕೀಯ ಪಂಗಡಗಳಿಗೂ ಬಿನ್ನಾಭಿಪ್ರಾಯಗಳು ಹೆಚ್ಚಿದವು. ಕಡೆಯಲ್ಲಿ, ಅಂದರೆ, ಆಗಸ್ಟ್ 1947 ರಲ್ಲಿ, ರಾಷ್ಟ್ರದ ವಿಭಜನೆಯಾದದ್ದು ಎಲ್ಲರಿಗೂ ತಿಳಿದ ವಿಷಯ. ಈ ವಿಭಜನೆಯಿಂದ ತಾತ್ಕಾಲಿಕ ಮತ್ತು ಶಾಶ್ವತ ಪರಿಣಾಮ ಉಂಟಾಯಿತು. ಆದರೆ ನಮ್ಮ ಪ್ರಜಾಸರ್ಕಾರವು ಈ ಸಮಸ್ಯೆಗಳನ್ನು 'ಪರಿಹರಿಸಲು ಸೂಕ್ತವಾದ ಏರ್ಪಾಡು ಮಾಡಲಾರಂಭಿಸಿತು.

ಧಾರಣೆವಾಸಿ ಯುದ್ಧಾನಂತರ ಮತ್ತೆ ಏರಿದವು. ಕೊರಿಯಾ ಯುದ್ಧದ ಫಲವಾಗಿ ಬೆಲೆಗಳು ಇನ್ನೂ ಅಧಿಕವಾದುವು. ಧಾರಣೆವಾಸಿಯ ಸೂಚೀ ಸಂಖ್ಯೆ (ಆಗಸ್ಟ್ 1939ಕ್ಕೆ ಮುಗಿದ ವರ್ಷ= 100) 1947 ನೇ ಮಾರ್ಚಿಯಲ್ಲಿ 293 ಇದ್ದದ್ದು ಡಿಸೆಂಬರ್ 1949 ರ ವೇಳೆಗೆ 381 ಕ್ಕೆ ಏರಿತು, ಮತ್ತು 1951ರ ಏಪ್ರಿಲ್ ವೇಳೆಗೆ 457ಕ್ಕೆ ಏರಿತು; ಅಂದರೆ ಎರಡನೇ ಮಹಾಯುದ್ಧದ ಹಿಂದೆ ಇದ್ದುದಕ್ಕಿಂತ ಬೆಲೆ ಸುಮಾರು ನಾಲ್ಕೂವರೆ ಆಯಿತು. 1951 ರ ಮಧ್ಯಭಾಗದಿಂದಾಚೆ ಧಾರಣೆವಾಸಿ ಇಳಿಯಿತು. ಅಲ್ಲದೆ 1951 ನೇ ನವೆಂಬರಿನಲ್ಲಿ ದೇಶದ ಹಣದ ನೀತಿಯಲ್ಲಿ ಮಾರ್ಪಾ

ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣದ ನಿಧಿ. ಮೊದಲನೆಯ ಸಂಸ್ಥೆ ದೀರ್ಘಕಾಲದ ಸಾಲಕೊಡುತ್ತದೆ; ಎರಡನೆಯ ಸಂಸ್ಥೆಯು ಅಲ್ಪಾವಧಿ ಸಾಲ ಒದಗಿಸುತ್ತದೆ. ನಮ್ಮ ದೇಶವು, ಎರಡು ಸಂಸ್ಥೆಗಳಲ್ಲಿಯೂ ಸದಸ್ಯತ್ವವನ್ನು ಹೊಂದಿದೆ ಮತ್ತು ಧನ ಸಹಾಯವನ್ನೂ ಪಡೆದಿದೆ. ಈ ಸಂಸ್ಥೆಗಳ ಮೂಲಕವಲ್ಲದೇ, ನೇರವಾಗಿ, ಕೆಲವು ರಾಷ್ಟ್ರಗಳು, ಮುಖ್ಯವಾಗಿ ಅಮೇರಿಕಾ ದೇಶವು ಸಹಾಯ ಮಾಡಲಾರಂಭಿಸಿತು. ಆದರೆ ಇಷ್ಟರಲ್ಲಿಯೇ ಮತ್ತೊಂದು ಯುದ್ಧವು ಆರಂಭಿಸಿ ಆರ್ಥಿಕಾಭಿವೃದ್ಧಿಗೆ ಧಕ್ಕೆ ಬಂದಿತು. 1950 ನೇ ಜೂನಿನಲ್ಲಿ ಕೊರಿಯಾ ದೇಶದಲ್ಲಿ ಯುದ್ಧವುಂಟಾಗಿ, ಅನೇಕ ರಾಷ್ಟ್ರಗಳು ಅದರಲ್ಲಿ ಭಾಗವಹಿಸಬೇಕಾಯಿತು. ಇದರಿಂದ ಪ್ರಪಂಚದ ಆರ್ಥಿಕಸ್ಥಿತಿ ಮತ್ತು ನೀತಿ ಬದಲಾವಣೆ ಹೊಂದಿತು.

ಧಾರಣೆವಾಸಿ ಏರಿ, ಅನೇಕ ದೇಶಗಳಲ್ಲಿ ಹಣದ ಉಬ್ಬರ ಉಂಟಾಯಿತು. ಆದರೆ, ದೈವವಶಾತ್, ಇದು ಮಹಾ ಯುದ್ಧವಾಗಿ ಪರಿಣಮಿಸಲಿಲ್ಲ. ಸುಮಾರು ಒಂದು ವರ್ಷದ ನಂತರ ಕೊರಿಯಾ ಯುದ್ಧವು ಬಹುಮಟ್ಟಿಗೆ ನಿಂತಂತಾಯಿತು. ಆದರೆ ಈ ಯುದ್ಧವು ರಾಷ್ಟ್ರಗಳ ರಕ್ಷಣಾನೀತಿಯ ಮೇಲೆ ಪರಿಣಾಮವನ್ನುಂಟುಮಾಡಿತು. ಮುಖ್ಯವಾಗಿ, ರಕ್ಷಣಾವೆಚ್ಚ ಮತ್ತೆ ಬಹು ಅಧಿಕವಾಯಿತು. ಹೊಸ ಹೊಸ ಶಸ್ತ್ರಗಳು, ಅಂದರೆ ಅಣು ಬಾಂಬು ಮತ್ತು ಜಲಜನಕ ಬಾಂಬು, ಮತ್ತು ಇವನ್ನು ಸಾಗಿಸಲು ಹೊಸ ವಿಮಾನಗಳು, ಇತ್ಯಾದಿಗಳ ಮೇಲಿನ ಮತ್ತು ಹೆಚ್ಚಿಗೆ ಸೈನಿಕ ತಂಡದ ಖರ್ಚು ಏರಿತು. ಉದಾಹರಣೆಗೆ, ಅಮೇರಿಕಾ ದೇಶದ ರಕ್ಷಣಾ ವೆಚ್ಚ 1947–48 ರಲ್ಲಿ ಸುಮಾರು 6,000 ಕೋಟಿ ರೂ. ಇದ್ದದ್ದು, ಕಳೆದ ವರುಷ ಸುಮಾರು

25,000 ಕೋಟಿ ರೂ.ಗಳ ವರೆಗೆ ಏರಿತು. ಇತ್ತೀಚೆಗೆ ಅಂತರ ರಾಷ್ಟ್ರೀಯ ವಾತಾವರಣವು ಸ್ವಲ್ಪ ಉತ್ತಮಗೊಂಡಹಾಗೆ ಕಾಣುತ್ತೆ. ಹಿಂದುಳಿದ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೆ ಮುಂದುವರಿದ ರಾಷ್ಟ್ರಗಳ ಸಹಾಯ ಕ್ರಮೇಣ ಅಧಿಕಗೊಳ್ಳುತ್ತಿದೆ.

ಇದೆಲ್ಲ ಪ್ರಪಂಚದ ಒಟ್ಟು ಮಾತಾಯಿತು. ಈಗ ನಮ್ಮ ದೇಶದಲ್ಲಿ ಉಂಟಾದ ಮಾರ್ಪಾಡುಗಳನ್ನು ಪರಿಶೀಲಿಸೋಣ. ಯುದ್ಧಾನಂತರದ ಆರ್ಥಿಕ ಸಮಸ್ಯೆಗಳ ಜತೆಗೆ ಕಠಿಣ ರಾಜಕೀಯ ಸಮಸ್ಯೆಗಳು ತಲೆದೋರಿದುವು. ನಮ್ಮ ದೇಶದ ಸ್ವಾತಂತ್ರ್ಯದ ವಿಚಾರದಲ್ಲಿ ಬ್ರಿಟಿಷ್ ಸರ್ಕಾರಕ್ಕೂ ನಮ್ಮ ರಾಜಕೀಯ ಪಂಗಡಗಳಿಗೂ ಬಿನ್ನಾಭಿಪ್ರಾಯಗಳು ಹೆಚ್ಚಿದವು. ಕಡೆಯಲ್ಲಿ, ಅಂದರೆ, ಆಗಸ್ಟ್ 1947 ರಲ್ಲಿ, ರಾಷ್ಟ್ರದ ವಿಭಜನೆಯಾದದ್ದು ಎಲ್ಲರಿಗೂ ತಿಳಿದ ವಿಷಯ. ಈ ವಿಭಜನೆಯಿಂದ ತಾತ್ಕಾಲಿಕ ಮತ್ತು ಶಾಶ್ವತ ಪರಿಣಾಮ ಉಂಟಾಯಿತು. ಆದರೆ ನಮ್ಮ ಪ್ರಜಾಸರ್ಕಾರವು ಈ ಸಮಸ್ಯೆಗಳನ್ನು 'ಪರಿಹರಿಸಲು ಸೂಕ್ತವಾದ ಏರ್ಪಾಡು ಮಾಡಲಾರಂಭಿಸಿತು.

ಧಾರಣೆವಾಸಿ ಯುದ್ಧಾನಂತರ ಮತ್ತೆ ಏರಿದವು. ಕೊರಿಯಾ ಯುದ್ಧದ ಫಲವಾಗಿ ಬೆಲೆಗಳು ಇನ್ನೂ ಅಧಿಕವಾದುವು. ಧಾರಣೆವಾಸಿಯ ಸೂಚೀ ಸಂಖ್ಯೆ (ಆಗಸ್ಟ್ 1939ಕ್ಕೆ ಮುಗಿದ ವರ್ಷ=100) 1947 ನೇ ಮಾರ್ಚಿಯಲ್ಲಿ 293 ಇದ್ದದ್ದು ಡಿಸೆಂಬರ್ 1949 ರ ವೇಳೆಗೆ 381 ಕ್ಕೆ ಏರಿತು, ಮತ್ತು 1951ರ ಏಪ್ರಿಲ್ ವೇಳೆಗೆ 457ಕ್ಕೆ ಏರಿತು; ಅಂದರೆ ಎರಡನೇ ಮಹಾಯುದ್ಧದ ಹಿಂದೆ ಇದ್ದುದಕ್ಕಿಂತ ಬೆಲೆ ಸುಮಾರು ನಾಲ್ಕೂವರೆ ಆಯಿತು. 1951 ರ ಮಧ್ಯಭಾಗದಿಂದಾಚೆ ಧಾರಣೆವಾಸಿ ಇಳಿಯಿತು. ಅಲ್ಲದೆ 1951 ನೇ ನವೆಂಬರಿನಲ್ಲಿ ದೇಶದ ಹಣದ ನೀತಿಯಲ್ಲಿ ಮಾರ್ಪಾ

ಡುಂಟಾಗಿ—ಮುಖ್ಯವಾಗಿ ರಿಜರ್ವ್ ಬ್ಯಾಂಕಿನ ಬಡ್ಡಿದರ ಶೇಕಡ 3 ರಿಂದ 3½ ವರೆಗೆ ಏರಿತು—ಪದಾರ್ಥಗಳ ಬೆಲೆ ಮತ್ತೆ ಇಳಿಯಲು ಕಾರಣವಾಯಿತು. ಮೇ 1952 ರ ವೇಳೆಗೆ ಧಾರಣೆವಾಸಿ ಸೂಚೀ ಸಂಖ್ಯೆಯು 367 ಕ್ಕೆ ಇಳಿಯಿತು. ಅಲ್ಲಿಂದ ಇಲ್ಲಿಯವರೆಗೆ ಏರಿಳಿತಗಳಿದ್ದರೂ ಸೂಚೀಸಂಖ್ಯೆಯು 400 ರ ಒಳಗೆ ಇದೆ.

1950 ರಿಂದ ಈಚೆಗೆ ರಾಷ್ಟ್ರದ ಆರ್ಥಿಕಾಭಿವೃದ್ಧಿಗಾಗಿ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಬಹಳ ಹುರುಪಿನಿಂದ ಕೆಲಸಮಾಡುತ್ತಿವೆ. ಮುಖ್ಯವಾಗಿ, ಈ ಪ್ರಯತ್ನವು ಮೊದಲನೇ ಪಂಚವಾರ್ಷಿಕ ಯೋಜನೆಯ ಮೂಲಕ ನಡೆಯಿತು. ಸರ್ಕಾರವು ಆರ್ಥಿಕಾಭಿವೃದ್ಧಿಗಾಗಿ ಸುಮಾರು 2,000 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಇದರ ಪರಿಣಾಮವಾಗಿ ವ್ಯವಸಾಯದ ಮತ್ತು ಕೈಗಾರಿಕೆಯ ಉತ್ಪತ್ತಿ ಅಧಿಕವಾಗಿ, ರಾಷ್ಟ್ರಾದಾಯವು ಸುಮಾರು ಶೇಕಡ 18 ರಷ್ಟು ಅಭಿವೃದ್ಧಿಹೊಂದಿದೆ.

ಏಪ್ರಿಲ್ 1956 ರಿಂದ ಎರಡನೇ ಪಂಚವಾರ್ಷಿಕ ಯೋಜನೆ ಆರಂಭವಾಗಿದೆ. ಈ ಯೋಜನೆ ಮೇಲೆ ಸರ್ಕಾರವು ಸುಮಾರು 4800 ಕೋಟಿ ರೂ. ಖರ್ಚು ಮಾಡಲು ಅಂದಾಜಾಗಿದೆ; ಅಂದರೆ ಮೊದಲನೇ ಯೋಜನೆಗಿಂತ ದ್ವಿಗುಣಕ್ಕೆ ಮೇಲಾಗಿದೆ. ಸಮತಾವಾದಿ ಸ್ವರೂಪದ ಸಮಾಜವನ್ನು ನಿರ್ಮಾಣಮಾಡುವುದೇ ಎರಡನೇ ಯೋಜನೆಯ ಗುರಿ. ರಾಷ್ಟ್ರಾದಾಯವನ್ನು ಸುಮಾರು ಶೇಕಡ 25 ರಷ್ಟು ಅಧಿಕಮಾಡಿ ಸುಮಾರು ಒಂದು ಕೋಟಿ ಜನಕ್ಕಾದರೂ ಉದ್ಯೋಗ ಸೌಲಭ್ಯವನ್ನು ಒದಗಿಸುವುದು ಎರಡನೆ ಯೋಜನೆಯ ಮುಖ್ಯ ತತ್ವಗಳು.

ಈ ಧ್ಯೇಯಗಳನ್ನು ಸಾಧಿಸಬೇಕಾದರೆ ಪ್ರಜಾಬೆಂಬಲ ಪೂರ್ತಿಬೇಕು. ಆರ್ಥಿಕ ಪ್ರಗತಿ ಜಾಗ್ರತೆ ನಡೆಯಬೇಕಾದರೆ ಸಾಮಾನ್ಯವಾಗಿ ಯುದ್ಧಕಾಲದಲ್ಲಿ ಕಂಡು ಬರುವ ಆರ್ಥಿಕ ಸಮಸ್ಯೆಗಳು ಈಗಲೂ ತಲೆದೋರುವುವು. ಮುಖ್ಯವಾಗಿ, ಹಣದ ಉಬ್ಬರ ಉಂಟಾಗುವ ಸಂಭವವಿರುತ್ತೆ. ಇದನ್ನು ತಡೆಗಟ್ಟಲು ಸರ್ವ ಪ್ರಯತ್ನ ನಡೆಯಬೇಕು. ಹಣದ ಉಬ್ಬರದಿಂದ, ತಾತ್ಕಾಲಿಕವಾಗಿ ಸ್ವಲ್ಪ ಅನುಕೂಲವಾದರೂ, ದೀರ್ಘಕಾಲದ ದೃಷ್ಟಿಯಿಂದ ನೋಡಿದರೆ ಆರ್ಥಿಕಾಭಿವೃದ್ಧಿಗೆ ಅನಾನುಕೂಲವಾಗುತ್ತೆ. ಹಣದ ಉಬ್ಬರ ಬರದಿರಬೇಕಾದರೆ ಜನರು ತೆರಿಗೆಗಳನ್ನು ಹೆಚ್ಚು ಕೊಡಬೇಕು ಮತ್ತು ಸ್ವಂತ ವೆಚ್ಚವನ್ನು ಕಡಿಮೆ ಮಾಡಿ, ಹಣ ಶೇಖರಿಸಿ, ಸರ್ಕಾರಕ್ಕೆ ಸಾಲ ಕೊಡಬೇಕು ಮತ್ತು ಖಾಸಗೀ ಉದ್ಯಮಗಳ ಷೇರು ಮತ್ತು ಸಾಲಪತ್ರಗಳನ್ನು ಕೊಳ್ಳಬೇಕು. ಸ್ವಲ್ಪಮಟ್ಟಿಗೆ, ಪದಾರ್ಥಗಳ ಉತ್ಪತ್ತಿ, ಬೆಲೆ ಮತ್ತು ಮಾರಾಟದ ಮೇಲೆ ಹತೋಟಿಯನ್ನೂ ಸರ್ಕಾರವು ಏರ್ಪಡಿಸಬೇಕಾಗಬಹುದು. ಆದರೆ ವೈಯುಕ್ತಿಯ ಸ್ವಾತಂತ್ರ್ಯ ದೃಷ್ಟಿಯಿಂದ ಈ ಹತೋಟಿಗಳನ್ನು ಆದಷ್ಟು ಕಡಮೆ ಮಾಡಬೇಕು. ಇದು ಸಾಧ್ಯವಾಗಬೇಕಾದರೆ ಪ್ರಜೆಗಳ ಸಂಪೂರ್ಣ ಬೆಂಬಲ ಮತ್ತು ತ್ಯಾಗಬೇಕು. ತ್ಯಾಗವಿಲ್ಲದೇ ಆರ್ಥಿಕ ಪ್ರಗತಿ ಬರುವ ಹಾಗಿಲ್ಲ. ಮುಂದುವರಿದ ರಾಷ್ಟ್ರಗಳಿಂದ ನಮಗೆ ಸಹಾಯ ವೇನೋ ಬೇಕು. ಆದರೆ ಮುಖ್ಯವಾಗಿ ನಾವು ನಮ್ಮ ಕಾಲ ಮೇಲೆ ನಿಲ್ಲಬೇಕು. ಯುದ್ಧ ಕಾಲದಲ್ಲಿ ಹೇಗೆ ಶತ್ರುವನ್ನು ಸೋಲಿಸುವುದಕ್ಕೋಸ್ಕರ ಪ್ರ ತಿಯೊಬ್ಬ ಪ್ರಜೆಯೂ ಕಂಕಣಬದ್ಧನಾಗಿರುವನೋ ಅದೇ ರೀತಿಯಲ್ಲಿ ಆರ್ಥಿಕಾಭಿವೃದ್ಧಿಗೂ ಅವಿಶ್ರಾಂತವಾಗಿ ಸಹಕರಿಸಬೇಕು.

೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫.*ಎಲ್ಲೋರ ಮತ್ತು ಅಜಂತಾ—ಡಾ|| ಎಂ.ಎಚ್. ಕೃಷ್ಣ,
ಎಂ.ಎ.,ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್,
ಎಂ.ಎಸ್‌ಸಿ.
೨೭. ಭಾಸ—ಡಾ|| ಹೆಚ್.ಎಲ್. ಹರಿಯಪ್ಪ,ಎಂ.ಎ.,ಪಿ.ಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ,
ಎಂ.ಎ.
೨೯. ಸರ್ವಜ್ಞಕವಿ—ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. ರಕ್ತ—ಡಿ. ಶಾಮಣ್ಣ, ಬಿ.ಎ.,ಎಂ.ಬಿ.,ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ. ಎ.
೩೨. ಅಕ್ಕಮಹಾದೇವಿ—ಎಸ್.ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ.ಎನ್. ಶ್ರೀನಿವಾಸ
ಅಯ್ಯಂಗಾರ್, ಡಿ.ಎಸ್‌ಸಿ.
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ. ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ.,ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ.ಪಿ. ಲಕ್ಷ್ಮೀನರಸಿಂಹಶಾಸ್ತ್ರೀ,
ಎಂ.ಎ.
೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿ ನಾಯ್ಡು
ಎಂ.ಎ.,ಡಿ.ಲಿಟ್.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. ನಯಸೇನ—ಎ. ವೆಂಕಟಸುಬ್ಬಯ್ಯ, ಎಂ.ಎ.,ಬಿ.ಟಿ.
೪೨. ಕೌಟಲ್ಯ—ಡಾ|| ಎಂ.ವಿ. ಕೃಷ್ಣರಾವ್, ಎಂ.ಎ.,ಬಿ.ಟಿ.
ಡಿ.ಲಿಟ್.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ.,ಬಿ.ಟಿ.
೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ.,
ಎಲ್‌ಎಲ್.ಬಿ.

೪೯. ಮುದ್ರಣ—ಟಿ. ಎಸ್. ಶಾಮರಾವ್, ಎಂ.ಎ.
೫೦. ಐವರು ಭೌತವೈಜ್ಞಾನಿಕರು—ಬಿ.ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟ ದೇಶಿಕಾಚಾರ್, ಎಂ.ಎ.
೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. *ಆಹಾರ—ಎ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್.ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭. ಪ್ರಜಾಭಿಪ್ರಾಯ—ಟಿ.ಎಸ್. ರಾಜಗೋಪಾಲಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.
೫೮. ಕಲ್ಲಿದ್ದಲು—ಕೆ.ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೯. ಜನಪದಮುಕ್ತಕಗಳು—ಹೆಚ್.ಎಂ. ಶಂಕರನಾರಾಯಣರಾವ್ ಎಂ.ಎ.
೬೦. ಹಾಲು—ಶ್ರೀ ಕೆ.ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೬೧. ಭಾವಗೀತೆ—ಎಸ್.ವಿ. ಪರಮೇಶ್ವರಭಟ್ಟ, ಎಂ.ಎ.
೬೨. ಭಾರತದಲ್ಲಿ ಪ್ರಜಾಪ್ರಭುತ್ವ—ಟಿ.ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.
೬೩. ಆರೋಗ್ಯಸಾಧನೆ—ಶ್ರೀ ಮೋಟಗಾನಹಳ್ಳಿ ಮಹದೇವಶಾಸ್ತ್ರೀ, ಎಲ್.ಎ., ಎಂ.ಎಸ್.
೬೪-೬೫ ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು.ಎಸ್.ಕೃಷ್ಣರಾವ್ ಎಂ.ಎಸ್‌ಸಿ. ಮತ್ತು ಶ್ರೀಮತಿ ಚಂದ್ರಭಾಗಾದೇವಿ.

ಬೆಲೆ. ಸಾದಾ ೬ ಆಣೆ ಉತ್ತಮ ೮ ಆಣೆ.

ಬರಲಿದೆ

೬೬. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ್, ಬಿ.ಎಸ್‌ಸಿ., ಎಫ್.ಟಿ.ಐ.

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

*ಈ ಪುಸ್ತಕಗಳು ಮುಗಿದುಹೋಗಿವೆ.